
ಯಶಸ್ಸಿನೆಡೆಗೆ...........

# ೮ನೇ ತರಗತಿ

# ಸಮಾಜವಿಜ್ಞಾನ ನೋಟ್ಸ್

## (ಪರಿಷ್ಕೃತ ಪಠ್ಯ)






ಸಿದ್ಧ ಪಡಿಸಿದವರು

ವೀರೇಶ್ ಪಿ.ಅರಕೆರಿ

ಎಕ್ಸ್ ಮುನ್ಸಿಪಲ್ ಪ್ರೌಢಶಾಲೆ

ದಾವಣಗೆರೆ



# 8ನೇ ತರಗತಿ ಸಮಾಜ ವಿಜ್ಞಾನ ಪ್ರಶ್ನೋತ್ತರ ಮಾಲಿಕೆ

## (ಹೊಸ ಪಠ್ಯಾನುಸಾರ) 2018–19

# 8


**ವೀರೇಶ್ ಪಿ ಅರಕೇರಿ,**
**ಸಹ ಶಿಕ್ಷಕರು,**
**ಸರ್ಕಾರಿ (ಮಾಜಿ ಪುರಸಭೆ) ಪ್ರೌಢಶಾಲೆ,**
**ದಾವಣಗೆರೆ ಉತ್ತರ.**
**9986261446**




# 8ನೇ ತರಗತಿ ಸಮಾಜ ವಿಜ್ಞಾನ ಪ್ರಶ್ನೋತ್ತರ ಮಾಲಿಕೆ
## (ಹೊಸ ಪಠ್ಯಾನುಸಾರ) 2018-19

ವೀರೇಶ್ ಪಿ ಅರಕೇರಿ,
ಸಹ ಶಿಕ್ಷಕರು,
ಸರ್ಕಾರಿ (ಮಾಜಿ ಪುರಸಭೆ) ಪ್ರೌಢಶಾಲೆ,
ದಾವಣಗೆರೆ ಉತ್ತರ.


| ಕ್ರ.ಸಂ | ವಿಷಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1 | ಆಧಾರಗಳು | |
| 2 | ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ | 3 |
| 3 | ಭಾರತದ ಪ್ರಾಚೀನ ನಾಗರಿಕತೆಗಳು | 4 |
| 4 | ಜಗತ್ತಿನ ಪ್ರಾಚೀನ ನಾಗರಿಕತೆಗಳು | 5 |
| 5 | ಗ್ರೀಕ್, ರೋಮನ್ ಹಾಗೂ ಅಮೆರಿಕದ ನಾಗರಿಕತೆ | 5 |
| 6 | ಜೈನ ಮತ್ತು ಬೌದ್ಧ ಧರ್ಮಗಳ ಉದಯ | 6 |
| | | |
| | **ರಾಜ್ಯಶಾಸ್ತ್ರ** | |
| 1 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ | 7 |
| 2 | ಸಾರ್ವಜನಿಕ ಆಡಳಿತ | 8 |
| | | |
| | **ಸಮಾಜಶಾಸ್ತ್ರ** | |
| 1 | ಸಮಾಜಶಾಸ್ತ್ರ ಪರಿಚಯ | 9 |
| 2 | ಸಂಸ್ಕೃತಿ | 10 |
| | | |
| | **ಭೂಗೋಳ ವಿಜ್ಞಾನ** | |
| 1 | ಭೂಮಿ-ನಮ್ಮ ಜೀವಂತ ಗ್ರಹ | 12 |
| 2 | ಶಿಲಾಗೋಳ | 13 |
| | | |
| | **ಅರ್ಥಶಾಸ್ತ್ರ** | |
| 1 | ಅರ್ಥಶಾಸ್ತ್ರದ ಪರಿಚಯ | 14 |
| 2 | ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು | 15 |
| | | |
| | **ವ್ಯವಹಾರ ಅಧ್ಯಯನ** | |
| 1 | ವಾಣಿಜ್ಯ ಅಧ್ಯಯನದ ಘಟಕಗಳು | 17 |
| | | |

# ಇತಿಹಾಸ

## ಅಧ್ಯಾಯ-1

## ಆಧಾರಗಳು

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಇತಿಹಾಸಕಾರರು ಇತಿಹಾಸವನ್ನು ಹೇಗೆ ರಚಿಸುತ್ತಾರೆ?**

- ಪ್ರಾಚೀನ ಕಾಲದವರು ಬಳಸಿ ಬಿಟ್ಟುಹೋಗಿರುವ ವ್ಯವಸಾಯದ ಪರಿಕರಗಳು, ದೇವಾಲಯಗಳು ಮತ್ತು ಇತರ ಧಾರ್ಮಿಕ ಕಟ್ಟಡಗಳು, ಕೋಟೆಗಳು, ಶಾಸನಗಳು, ನಾಣ್ಯಗಳು, ಆಯುಧಗಳು ಮುಂತಾದವುಗಳನ್ನು ಇತಿಹಾಸದ ಆಕರಗಳೆಂದು ಪರಿಗಣಿಸಿ ಇತಿಹಾಸವನ್ನು ರಚಿಸಲು ಉಪಯೋಗಿಸಿಕೊಳ್ಳಲಾಗುತ್ತದೆ.
- ಲಿಖಿತ ಸ್ವರೂಪದ ದಾಖಲೆಗಳು ಮತ್ತು ಕೃತಿಗಳು ಇತಿಹಾಸ ರಚನೆಗೆ ಪ್ರಮುಖ ಅಂಶಗಳಾಗಿವೆ.

**2. ಆಧಾರ ಎಂದರೇನು? ಅವುಗಳಲ್ಲಿ ಎಷ್ಟು ವಿಧ?**

ಇತಿಹಾಸ ರಚನೆಗೆ ಬೇಕಾಗುವ ಮೂಲ ಸಾಮಗ್ರಿಗಳೇ ಆಧಾರ.
ಈ ಆಧಾರಗಳನ್ನು 2 ವಿಧಗಳಾಗಿ ವಿಂಗಡಿಸಬಹುದು.
ಎ) ಸಾಹಿತ್ಯ ಆಧಾರಗಳು
ಬಿ) ಪುರಾತತ್ವ ಆಧಾರಗಳು.

**3. ದೇಶಿ ಸಾಹಿತ್ಯ ಎಂದರೇನು? ಯಾವುದಾದರು ದೇಶೀಯ ಸಾಹಿತ್ಯ ಕೃತಿಗಳನ್ನು ಹೆಸರಿಸಿ.**

ಭಾರತೀಯರಿಂದಲೇ ದೇಶೀಯ ಭಾಷೆಗಳಲ್ಲಿ ರಚನೆಯಾಗಿರುವ ಸಾಹಿತ್ಯವನ್ನು ದೇಶೀಯ ಸಾಹಿತ್ಯವೆಂದು ಕರೆಯಲಾಗುವುದು.

ಕೌಟಿಲ್ಯನ 'ಅರ್ಥಶಾಸ್ತ್ರ', ಹಾಲ ರಾಜನ 'ಗಾಥಾಸಪ್ತಶತಿ', ವಿಶಾಖದತ್ತನ 'ಮುದ್ರಾರಾಕ್ಷಸ', ಕಲ್ಹಣನ 'ರಾಜತರಂಗಿಣಿ', ಬಾಣಭಟ್ಟನ 'ಹರ್ಷಚರಿತ', ಬರಾನಿಯ 'ತಾರೀಖ್-ಎ-ಫಿರೋಜ್ ಷಾಹಿ', ಚಾಂದ್ ಬರ್ದಾಯಿಯ 'ಪೃಥ್ವಿರಾಜ ರಾಸೋ', ಪಂಪನ 'ವಿಕ್ರಮಾರ್ಜುನ ವಿಜಯ', ಸಂಗಂ ಸಾಹಿತ್ಯಗಳು ಮುಂತಾದ ಸಾಹಿತ್ಯ ಕೃತಿಗಳನ್ನು ದೇಶೀಯ ಸಾಹಿತ್ಯ ಕೃತಿಗಳಾಗಿವೆ.

**4. ಯಾವುದಾದರೂ ವಿದೇಶಿ ಸಾಹಿತ್ಯ ಕೃತಿಗಳನ್ನು ಹೆಸರಿಸಿ.**

ಮೆಗಸ್ತನೀಸನ 'ಇಂಡಿಕಾ', ಫಾಹಿಯಾನನ 'ಫೋ-ಕೋ-ಕಿ', ಹ್ಯೂಯೆನ್ ತ್ಸಾಂಗನ 'ಸಿ-ಯು ಕಿ', ಟಾಲೆಮಿಯ 'ಜಿಯೋಗ್ರಾಫಿ', ಫರಿಶ್ತಾನ 'ತಾರೀಖ್-ಎ-ಫರಿಶ್ತಾ', ಬಾಬರನ 'ತುಜ್-ಕಿ-ಬಾಬರಿ' ಮೊದಲಾದವು ವಿದೇಶಿ ಸಾಹಿತ್ಯ ಕೃತಿಗಳಾಗಿವೆ.

**5. ಇತಿಹಾಸ ರಚನೆಗಿರುವ ಹೆಚ್ಚು ವಿಶ್ವಾಸಾರ್ಹ ಆಧಾರ ಯಾವುದು?**

ಶಾಸನಗಳು ಅಂದಿನ ಘಟನೆಗಳ ಜೊತೆಗೆ ನೇರ ಸಂಬಂಧಗಳನ್ನು ಹೊಂದಿರುವುದರಿಂದ ಹೆಚ್ಚು ವಿಶ್ವಾಸಾರ್ಹ ಆಧಾರಗಳಾಗಿವೆ.

**6. ಇತಿಹಾಸ ರಚನೆಯಲ್ಲಿ ನಾಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.**

- ನಾಣ್ಯಗಳಿಂದಲೂ ಇತಿಹಾಸ ರಚನೆ ಸಾಧ್ಯ.
- ನಾಣ್ಯಗಳ ಅಧ್ಯಯನದಿಂದ ಇವುಗಳನ್ನು ಹೊರಡಿಸಿದ ರಾಜನ ಅಧೀನದಲ್ಲಿರುವ ಪ್ರದೇಶದ ವ್ಯಾಪ್ತಿ,
- ರಾಜ್ಯದ ಆಡಳಿತ ಭಾಷೆ,
- ಆ ರಾಜ್ಯದ ರಾಜನ ಬಿರುದು ಮತ್ತು ಸಾಧನೆ,
- ರಾಜನ ಮತ-ಧರ್ಮ,
- ಆ ರಾಜ್ಯದ ಆರ್ಥಿಕ ಸ್ಥಿತಿ, ಲೋಹ ತಂತ್ರಜ್ಞಾನ ಮೊದಲಾದ ವಿಚಾರಗಳನ್ನು ಅರಿಯುವಲ್ಲಿ ನಾಣ್ಯಗಳು ಪ್ರಾಮುಖ್ಯತೆಯನ್ನು ಪಡೆದಿವೆ.

**7. ಸ್ಮಾರಕಗಳು ಹಿಂದಿನ ಕಾಲದ ಯಾವ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ?**

ಸ್ಮಾರಕಗಳು ಅಂದಿನ ಕಾಲಘಟ್ಟದ ಧಾರ್ಮಿಕತೆ, ತಾಂತ್ರಿಕತೆ, ವೈಜ್ಞಾನಿಕತೆ, ಸೃಜನಶೀಲತೆ ಮೊದಲಾದ ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತವೆ.

**8. ಜೈವಿಕ ಪಳೆಯುಳಿಕೆಗಳ ಕಾಲವನ್ನು ಯಾವ ವಿಧಾನದ ಮೂಲಕ ನಿಷ್ಕರ್ಷೆ ಮಾಡಬಹುದು?**

ಉತ್ಖನನದಲ್ಲಿ ದೊರೆತ ಜೈವಿಕ (ಸತ್ತಪ್ರಾಣಿ, ಪಕ್ಷಿ ಮತ್ತು ಮರಗಿಡಗಳು) ಅವಶೇಷಗಳನ್ನು ಇಂಗಾಲ-14ರ ವಿಧಾನಕ್ಕೆ ಒಳಪಡಿಸುವ ಮೂಲಕ ಅವುಗಳ ಕಾಲವನ್ನು ನಿಷ್ಕರ್ಷೆ ಮಾಡಬಹುದು.

## ಅಧ್ಯಾಯ -2

## ಭೌಗೋಳಿಕ ಲಕ್ಷಣಗಳು ಹಾಗೂ ಚರಿತ್ರೆ ಪೂರ್ವ ಭಾರತ

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಭಾರತವು ಒಂದು __________ ದ್ವೀಪವಾಗಿದೆ.
2. ಬೂದಿಯ ಕುರುಹುಗಳು_____ ಗವಿಗಳಲ್ಲಿ ದೊರೆತಿವೆ.
3. ಮಧ್ಯಶಿಲಾಯುಗದ ಪರಿಕರಗಳನ್ನು _________ ಎಂದು ಕರೆಯುತ್ತಾರೆ.

**ಉತ್ತರ:- 1) ಪರ್ಯಾಯ, 2) ಕರ್ನೂಲಿನ, 3) ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗ**

**II. ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಭಾರತದ ಭೂ ಮೇಲ್ಮೈ ರಚನೆಯನ್ನು ಸ್ಥೂಲವಾಗಿ ತಿಳಿಸಿ.**

ಭಾರತದ ಭೂ ಮೇಲ್ಮೈ ರಚನೆಯ ಲಕ್ಷಣಗಳು-
1) ಉತ್ತರದಲ್ಲಿ ಹಿಮಾಲಯದ ಪರ್ವತಶ್ರೇಣಿಗಳನ್ನು,
2) ಸಮತಟ್ಟಾದ ಸಿಂಧೂ, ಗಂಗಾ ಬಯಲು ಪ್ರದೇಶವನ್ನು,
3) ದಕ್ಷಿಣದ ದಖನ್ ಪ್ರಸ್ಥಭೂಮಿಯನ್ನು ಹಾಗೂ
4) ಕರಾವಳಿ ತೀರ ಪ್ರದೇಶವನ್ನು ಹೊಂದಿದೆ.

**2. ಯಾವ ಕಣಿವೆಗಳ ಮೂಲಕ ಭಾರತದ ಮೇಲೆ ದಾಳಿಗಳು ಸಂಭವಿಸಿವೆ?**

ವಾಯವ್ಯ ಭಾರತದಲ್ಲಿನ ಬೊಲಾನ್ ಮತ್ತು ಖೈಬರ್ ಕಣಿವೆಮಾರ್ಗಗಳ ಮೂಲಕವೇ ಭಾರತದ ಮೇಲೆ ದಾಳಿಗಳು ಸಂಭವಿಸಿವೆ.

**3. ಪ್ರಾಗೈತಿಹಾಸಿಕ ಕಾಲ ಎಂದರೇನು?**

ಮಾನವರು ಲೇಖನ ಕಲೆಯನ್ನು ಕಂಡು ಹಿಡಿಯುವುದಕ್ಕೆ ಮೊದಲಿನ ಕಾಲವನ್ನು ಪ್ರಾಗೈತಿಹಾಸಿಕ ಕಾಲವೆನ್ನುತ್ತೇವೆ.

ಈ ಕಾಲಘಟ್ಟದಲ್ಲಿ ಭಾಷೆಯ ಬಳವಣಿಗೆ ಹಾಗೂ ಲಿಪಿಯ ಬಳಕೆಯ ಬಗ್ಗೆ ನಮಗೆ ಆಧಾರಗಳು ಸಿಗದೆ ಇರುವುದರಿಂದ ಇದನ್ನು ಚರಿತ್ರೆಯ ಪೂರ್ವಕಾಲವೆಂದು ಕರೆಯುತ್ತೇವೆ.

**4. ಪಶುಸಂಗೋಪನೆ ಮತ್ತು ಹೈನುಗಾರಿಕೆಯು ಹೇಗೆ ಪ್ರಾರಂಭವಾಯಿತು?**

- ಸುಮಾರು 12,000 ವರ್ಷಗಳ ಹಿಂದೆ ಭೂ ಮಂಡಲದ ತಾಪಮಾನವು ಮತ್ತಷ್ಟು ಹೆಚ್ಚಿತು. ಹಲವೆಡೆ ಇದು ಹುಲ್ಲುಗಾವಲಿನ ಬೆಳವಣಿಗೆಗೆ ಕಾರಣವಾಯಿತು.
- ಪ್ರಾಣಿ ಪಕ್ಷಿಗಳ ಸಂತತಿಯು ಹೆಚ್ಚಾಗತೊಡಗಿದವು. ಈ ಸಂಕುಲಗಳ ಜೊತೆಯಲ್ಲಿಯೇ ಜಿಂಕೆ, ಕಡವೆ, ಮೇಕೆ, ಕುರಿ ಹಾಗೂ ಇನ್ನಿತರ ಪ್ರಾಣಿಗಳು ಹುಲ್ಲುಗಾವಲು ಪ್ರದೇಶದಲ್ಲಿ ಸಮೃದ್ಧಿಯಿಂದ ಬೆಳೆದವು.
- ಕ್ರಮೇಣವಾಗಿ ಈ ಕೆಲಪ್ರಾಣಿಗಳನ್ನು ಹಿಡಿದು ತಂದು ಮಾನವರು ಪೋಷಿಸತೊಡಗಿದರು. ಹೀಗೆ ಪಶುಸಂಗೋಪನೆ ಮತ್ತು ಹೈನುಗಾರಿಕೆಯು ಪ್ರಾರಂಭವಾಯಿತು.

**5. ಪ್ರಾಗೈತಿಹಾಸಿಕ ಕಾಲಘಟ್ಟವನ್ನು ವಿದ್ವಾಂಸರು ವಿವಿಧ ಹೆಸರುಗಳಿಂದ ಕರೆದಿದ್ದಾರೆ. ಅವು ಯಾವುವು?**

ಪ್ರಾಗೈತಿಹಾಸದ ವಿವಿಧ ಕಾಲಘಟ್ಟಗಳು–

1) ಹಳೆ ಶಿಲಾಯುಗ–ಅ) ಆದಿ ಹಳೆ ಶಿಲಾಯುಗ
   ಆ) ಮಧ್ಯ ಹಳೆ ಶಿಲಾಯುಗ
   ಇ) ಅಂತ್ಯ ಹಳೆ ಶಿಲಾಯುಗ
2) ಮಧ್ಯ ಶಿಲಾಯುಗ.
3) ನವ ಶಿಲಾಯುಗ.

## ಅಧ್ಯಾಯ –3

# ಭಾರತದ ಪ್ರಾಚೀನ ನಾಗರಿಕತೆಗಳು.

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಬೊಲನ್‌ಪಾಸಿನ ಫಲವತ್ತಾದ ಮೈದಾನದ ಸಮೀಪದಲ್ಲಿ ಇರುವ ನೆಲೆ ____________ .
2. ಹರಪ್ಪ ನೆಲೆಯು ಪಂಜಾಬಿನ ____________ ಕಣಿವೆ ಪ್ರದೇಶದಲ್ಲಿ ಕಂಡುಬಂದಿದೆ.
3. ಹರಪ್ಪ ಸಂಸ್ಕೃತಿಯ ಜನ ಕೃಷಿ ಮತ್ತು ____________ ಅವಲಂಬಿಸಿದ್ದರು.
4. ಅತ್ಯಂತ ಹಳೆಯ ವೇದ ____________ .
5. ಋಗ್ವೇದದಲ್ಲಿ ಯಜ್ಞಗಳನ್ನು ನಡೆಸಿಕೊಡುವ ಪುರೋಹಿತನನ್ನು ____________ ಎಂದು ಕರೆಯಲಾಗುತ್ತಿತ್ತು.

**ಉತ್ತರ:– 1) ಮೆಹರ್‌ಗರ್ 2) ಸಿಂಧ್ 3) ವ್ಯಾಪಾರ 4) ಋಗ್ವೇದ 5) 'ಹೊತರ್'**

**II. ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಹರಪ್ಪ ನಗರದ ವಿಶೇಷತೆಯನ್ನು ಬರೆಯಿರಿ.**

- ಹರಪ್ಪದ ನಗರಗಳಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಭಾಗವನ್ನು ಕಾಣಬಹುದು.
- ಪಶ್ಚಿಮದ ಭಾಗವು ಕಿರಿದಾಗಿದ್ದು ಅದು ಎತ್ತರದಲ್ಲಿದೆ. ಇದನ್ನು ಪ್ರಾಕ್ತನಶಾಸ್ತ್ರಜ್ಞರು ಕೋಟೆಯೆಂದಿದ್ದಾರೆ.
- ಸಾಮಾನ್ಯವಾಗಿ ಪೂರ್ವದ ಭಾಗವು ವಿಶಾಲವಾಗಿದ್ದು ಅದು ತಗ್ಗು ಪ್ರದೇಶದಲ್ಲಿದೆ. ಇದನ್ನು ಕೆಳಗಿನ ಗ್ರಾಮವೆಂದಿದ್ದಾರೆ.
- ಪ್ರತಿಯೊಂದು ಭಾಗದ ಸುತ್ತಲು ಸುಟ್ಟ ಇಟ್ಟಿಗೆಗಳ ಗೋಡೆಯೊಂದನ್ನು ಕಟ್ಟಿದ್ದರು. ಇಟ್ಟಿಗೆಗಳನ್ನು ಪರಸ್ಪರ ಬೆಸೆಯುವ ರೀತಿಯಲ್ಲಿ ಅಳವಡಿಸಿದ್ದರಿಂದ ಗೋಡೆಯು ಹೆಚ್ಚು ಭದ್ರವಾಗಿತ್ತು.
- ಕೋಟೆಯ ಒಳಗೆ ಗಮನಾರ್ಹವಾದ ಕಟ್ಟಡಗಳಿದ್ದವು.

**2. ಮೊಹೆಂಜೋದಾರೊವಿನ ಈಜು ಸ್ನಾನ ಕೊಳದ ಬಗ್ಗೆ ಬರೆಯಿರಿ.**

- ಮೊಹೆಂಜೋದಾರೊವಿನಲ್ಲಿ ಒಂದು ಕೊಳವನ್ನು ವಿದ್ವಾಂಸರು ಸ್ನಾನದ ಕೊಳವೆಂದಿದ್ದಾರೆ ಇದನ್ನು ಇಟ್ಟಿಗೆಗಳಿಂದ ಕಟ್ಟಿದ್ದಾರೆ.
- ಈ ಮೂಲಕ ಕೊಳದಿಂದ ನೀರಿನ ಸೋರಿಕೆ ಆಗದಂತೆ ನಿರ್ಮಿಸಿದ್ದಾರೆ.
- ಇದರ ಎರಡು ಕಡೆಗಳಲ್ಲಿ ಇಳಿಯುವ ಮೆಟ್ಟಿಲುಗಳಿದ್ದು ಸುತ್ತಲು ಕೊಠಡಿಗಳಿವೆ.
- ಇದಕ್ಕೆ ನೀರಿನ ಪೂರೈಕೆಯು ಬಾವಿಯಿಂದ ಆಗುತಿತ್ತು, ಬಳಕೆಯ ನೀರನ್ನು ಹೊರಗೆ ಬಿಡಲಾಗುತ್ತಿತ್ತು.
- ಈ ಕೊಳದಲ್ಲಿ ಬಹು ಮುಖ್ಯ ವ್ಯಕ್ತಿಗಳು ವಿಶೇಷವಾದ ಸಂದರ್ಭಗಳಲ್ಲಿ ಸ್ನಾನಮಾಡುತ್ತಿದ್ದಿರಬಹುದು

**3. ನಗರ ಯೋಜನೆ ಯಾವ ರೀತಿಯದಾಗಿತ್ತು?**

- ನಗರವನ್ನು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ರಚಿಸಲಾಗಿತ್ತು.
- ಕ್ರಮಬದ್ಧವಾಗಿ ನಿರ್ಮಿಸಲಾದ ಮನೆಗಳನ್ನು, ರಸ್ತೆಗಳನ್ನು ಹಾಗೂ ಚರಂಡಿಗಳಿದ್ದವು.
- ಜನರು ಒಂದು ಅಥವಾ ಎರಡು ಅಂತಸ್ತಿನ ಮನೆಯನ್ನು ಹೊಂದಿದ್ದರು.
- ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟಿದ್ದು, ಅವುಗಳ ಗೋಡೆಯು ಭದ್ರವಾಗಿದ್ದವು.
- ಒಳಾಂಗಣದ ಸುತ್ತ ಕೊಠಡಿಗಳು ಇದ್ದವು.
- ಮನೆಯ ದ್ವಾರವು ರಸ್ತೆಯ ಮಗ್ಗಲಿನಲ್ಲಿದ್ದವು. ಯಾವ ಕಿಟಕಿಗಳೂ ಕೂಡ ರಸ್ತೆಗೆ ಮುಖಮಾಡಿರಲಿಲ್ಲ. ಮನೆಗಳು ಸ್ನಾನದ ಕೊಠಡಿಗಳನ್ನು ಹೊಂದಿದ್ದವು.
- ಕೆಲವೊಂದರಲ್ಲಿ ಬಾವಿಗಳಿದ್ದು ಅವುಗಳಿಂದ ನೀರಿನ ಪೂರೈಕೆಯಾಗುತ್ತಿತ್ತು.
- ನಗರಗಳು ಒಳಚರಂಡಿ ವ್ಯವಸ್ಥೆಯನ್ನು ಹೊಂದಿದ್ದವು. ಇಟ್ಟಿಗೆಯಿಂದ ನಿರ್ಮಿಸಲಾಗಿದ್ದ ಚರಂಡಿಯನ್ನು

ಚಪ್ಪಡಿಗಳಿಂದ ಮುಚ್ಚಲಾಗಿತ್ತು. ಮನೆಯ ಮೋರಿಗಳನ್ನು ಹೊರಗಿನ ಚರಂಡಿಗೆ ಹೊಂದಿಸಲಾಗಿತ್ತು.

- ಮನೆ ಬಳಕೆಯ ಹಾಗೂ ಸ್ನಾನದಲ್ಲಿ ಬಳಸಿದ ಕಲುಷಿತ ನೀರು ಮೋರಿಯ ಮೂಲಕ ಚರಂಡಿಗೆ ಬಂದು ಸೇರುತ್ತಿದ್ದವು.
- ಚರಂಡಿಗಳನ್ನು ಕಾಲದಿಂದ ಕಾಲಕ್ಕೆ ಶುಚಿಯಾಗಿಡಲು ಅಲ್ಲಲ್ಲಿ ರಂಧ್ರಗಳನ್ನು ನಿರ್ಮಿಸಿದ್ದರು.

**4. ವೇದಗಳನ್ನು ಹೆಸರಿಸಿ.**

**ವೇದಗಳು ನಾಲ್ಕು** : ಋಗ್ವೇದ, ಸಾಮವೇದ, ಯಜುರ್‌ವೇದ ಮತ್ತು ಅಥರ್ವವೇದ.

**5. ವೇದಗಳ ಕಾಲದಲ್ಲಿ ಯಾವ ಯಜ್ಞ ಯಾಗಾದಿಗಳು ಪ್ರಮುಖವಾಗಿದ್ದವು?**

ವೇದಗಳ ಕಾಲದಲ್ಲಿ 'ರಾಜಸೂಯ', 'ಅಶ್ವಮೇಧ'ಯಾಗ, ಪ್ರಮುಖವಾಗಿದ್ದವು.

**6. ಉತ್ತರ ಋಗ್ವೇದ ಕಾಲದ ವೃತ್ತಿಗಳ ಬಗ್ಗೆ ವಿವರಿಸಿ.**

- ಬ್ರಾಹ್ಮಣರು ವೈದಿಕ ಯಜ್ಞ ಮತ್ತು ಆಚರಣೆಗಳನ್ನು ಮಾಡುವುದಕ್ಕೆ ಪ್ರತಿಫಲವಾಗಿ ಕಾಣಿಕೆಗಳನ್ನು ಸ್ವೀಕರಿಸುತಿದ್ದರು.
- ರಾಜನ್ಯ ಎಂಬುದು ಕ್ಷತ್ರಿಯ ವರ್ಣವನ್ನು ಸೂಚಿಸುತ್ತಿತ್ತು. ಬಿಲ್ಲುವಿದ್ಯೆಯಲ್ಲಿ ಪರಿಣತರು ಮತ್ತು ರಥಗಳಲ್ಲಿ ಕುಳಿತು ಯುದ್ಧ ಮಾಡಬಲ್ಲ ಯೋಧರಾಗಿ ರಾಜನ್ಯರ ಮಹತ್ವ ಹೆಚ್ಚಾಯಿತು.
- 'ವೈಶ್ಯ'ರು ಕಾಣಿಕೆಯನ್ನು ಇನ್ನೊಬ್ಬರಿಗೆ ಕೊಡಬೇಕಾಗಿತ್ತು. ಇವರನ್ನು ಇಷ್ಟ ಬಂದಾಗ ದಬ್ಬಾಳಿಕೆಗೆ ಒಳಪಡಿಸಬಹುದಾಗಿತ್ತು.
- ಮೇಲಿನ ಎಲ್ಲಾ ವರ್ಣಗಳ ಸೇವೆ ಮಾಡುವವರನ್ನು ಶೂದ್ರರು ಎಂದು ಅವರನ್ನು ವರ್ಣ ವ್ಯವಸ್ಥೆಯ ಕೊನೆಯಲ್ಲಿ ಇಡಲಾಗಿತ್ತು.
- ಕೆಲವು ಆದಿಕಾಲದ 'ಆಹಾರ ಸಂಗ್ರಹ' ಸಮುದಾಯಗಳಾದ 'ನಿಷಾದರು' ಮತ್ತು 'ಚಂಡಾಲ'ರನ್ನು ಅಸ್ಪೃಶ್ಯ ಜಾತಿಗಳೊಂದಿಗೆ ಸೇರಿಸಲಾಗಿದೆ.
- ಆರ್ಯರ ಜೀವನ ಪದ್ಧತಿಯಲ್ಲಿ ಈಗ ಬೇಟೆ ಮತ್ತು ಪಶುಪಾಲನೆಗಿಂತ ಕೃಷಿ ಪ್ರಮುಖವಾಯಿತು. ಕೃಷಿ ಮತ್ತು ವಾಣಿಜ್ಯದಲ್ಲಿ ಯಾರು ತೊಡಗಿಕೊಂಡಿಲ್ಲವೋ ಅವರನ್ನು 'ವ್ರಾತ್ರರು', ಅಂದರೆ ಪರಕೀಯರು ಎಂದು ಕರೆಯಲಾಯಿತು. ಆದರೆ ವ್ಯವಸಾಯ ಮತ್ತು ವಸ್ತುಗಳ ಸಾಗಾಣಿಕೆಗೆ ದನಗಳ ಸಾಕಾಣಿಕೆ ಅಗತ್ಯವಾಗಿತ್ತು.

## ಅಧ್ಯಾಯ –4
## ಜಗತ್ತಿನ ಪ್ರಾಚೀನ ನಾಗರಿಕತೆಗಳು.

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಹಿರೋಗ್ಲೈಫಿಕ್ಸ್‌ನ್ನು ____________ ಎಂದು ಕರೆಯುತ್ತಾರೆ.
2. ಈಜಿಪ್ಟನ್ನು ಆಳಿದ ರಾಜರುಗಳನ್ನು ____________ ಎಂದು ಕರೆಯುತ್ತಿದ್ದರು.
3. ಗ್ರೀಕರು ಮೆಸಪಟೊಮಿಯವನ್ನು _____ ಎಂದು ಕರೆದರು.
4. ಅಮೋರೈಟರ ಸುಪ್ರಸಿದ್ಧ ದೊರೆ ___________ .

**ಉತ್ತರಗಳು:– 1) ಪವಿತ್ರ ಬರವಣಿಗೆ, 2) 'ಫ್ಯಾರೊ', 3) 'ನದಿಗಳ ನಡುವಿನ ನಾಡು', 4) ಹಮ್ಮುರಬಿ**

**II. ಹೊಂದಿಸಿ ಬರೆಯಿರಿ.**

| ಎ ಪಟ್ಟಿ | ಬಿ ಪಟ್ಟಿ |
|---|---|
| 1. ಹವಾಂಗೋ ನದಿ | ಎ. ಮೆಸಪಟೊಮಿಯ |
| 2. ಕ್ಯೂನಿಫಾರ್ಮ್ | ಬಿ. ಅಮೋರೈಟರ ದೊರೆ |
| 3. ಕ್ಲಿಯೋಪಾತ್ರ | ಸಿ. ಶಾಂಗ್ |
| 4. ಹಮ್ಮುರಬಿ | ಡಿ. ಚೀನಾ |
| 5. ಚೀನಾದ ಮನೆತನ | ಇ.ಈಜಿಪ್ಟಿನ ಕಡೆಯ ರಾಣಿ |

**ಉತ್ತರಗಳು:– 1– ಡಿ, 2– ಎ, 3–ಇ, 4–ಬಿ, 5–ಸಿ.**

**III. ಸಂಕ್ಷಿಪ್ತವಾಗಿ ಉತ್ತರಿಸಿ.**

**1. 'ಮಮ್ಮಿ'ಗಳನ್ನು ಹೇಗೆ ಸಂರಕ್ಷಿಸುತ್ತಿದ್ದರು?**

- ಪ್ರಾಚೀನ ಈಜಿಪ್ಟ್‌ನ ಜನರು ಸತ್ತ, ಸಂರಕ್ಷಿಸಲ್ಪಟ್ಟ ದೇಹವನ್ನು 'ಮಮ್ಮಿ' ಎಂದು ಕರೆಯುತ್ತಿದ್ದರು.
- ಈ ಸತ್ತ ದೇಹವನ್ನು ವಿವಿಧ ರಾಸಾಯನಿಕಗಳಿಂದ ಲೇಪಿಸಿ ತೆಳುವಾದ ಬಟ್ಟೆಯಿಂದ ಸುತ್ತಿಡುತ್ತಿದ್ದರು.
- ಇಡೀ ದೇಹವನ್ನೆಲ್ಲ ಆವರಿಸುವಂತೆ ಅವುಗಳನ್ನು ಸಂರಕ್ಷಿಸುತ್ತಿದ್ದರು.
- ಈ ದೇಹವನ್ನು ವಿಶೇಷವಾಗಿ ತಯಾರಿಸಿದ ಶವಪೆಟ್ಟಿಗೆಯಲ್ಲಿ ಇಡಲಾಗುತ್ತಿತ್ತು.

**2. ಪಿರಮಿಡ್‌ಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.**

- ಪ್ರಾಚೀನ ಈಜಿಪ್ಷಿಯನ್ನರು ಚಿರ ನಿದ್ರೆಯಲ್ಲಿರುವವರನ್ನು ಯಾರು ಭಾದಿಸದಂತೆ ಬೃಹತ್ ಶಿಲೆಗಳನ್ನು ಬಳಸಿ ಗೋಪುರದಂತೆ ಸಮಾಧಿಯ ಮೇಲೆ ಕಟ್ಟಡವನ್ನು ಕಟ್ಟುತ್ತಿದ್ದರು.
- ಸ್ಪರ್ಧೆಯಂತೆ ಶ್ರೀಮಂತರು ಹಾಗೂ ದೊರೆಗಳು ಅತ್ಯಂತ ಎತ್ತರದ ಗೋಪುರದ ಶಿಖರವನ್ನು ಕಟ್ಟಿದರು.
- ಗ್ರೀಕರು ಇದನ್ನು 'ಪಿರಮಿಡ್' ಎಂದು ಕರೆದರು.

**3. ಹವಾಂಗೋ ನದಿಯು 'ಚೀನಾದ ದುಗಡ' ಹೇಗೆ?**

- ಹವಾಂಗೋ ನದಿಯು ಆಗಾಗ ಪ್ರವಾಹ ಉಂಟು ಮಾಡುತ್ತಿತ್ತು.
- ಪ್ರವಾಹದ ನಂತರ ಈ ನದಿಯು ಆಗಿಂದಾಗ್ಗೆ ತನ್ನ ಹಾದಿಯನ್ನು ಬದಲಿಸುವುದರಿಂದ ಮನೆಗಳು ಹಾಗೂ ಕೃಷಿಭೂಮಿ ಈ ನೆರೆಗೆ ಆಹುತಿಯಾಗುತ್ತಿದ್ದವು.
- ಇದು ಅಲ್ಲಿನ ಕಾಲುವೆಗಳನ್ನೆಲ್ಲ ನಿಷ್ಕ್ರಿಯಗೊಳಿಸುತಿತ್ತು.
- ಈ ಕಾರಣಕ್ಕಾಗಿಯೆ ಅಲ್ಲಿನ ಜನ ಇದನ್ನು ದುಃಖದ ಪ್ರತೀಕವೆಂದು 'ಚೀನಾದ ದುಗಡ' ಕರೆಯುತ್ತಾರೆ.

## ಅಧ್ಯಾಯ–5
## ಗ್ರೀಕ್, ರೋಮನ್ ಹಾಗೂ ಅಮೇರಿಕದ ನಾಗರಿಕತೆ.

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಹೋಮರನು ರಚಿಸಿದ ಮಹಾಕಾವ್ಯಗಳು ಈಲಿಯಡ್ ಮತ್ತು ______________ .
2. ಗ್ರೀಕರು ಸರ್ವಾಧಿಕಾರಿಗಳನ್ನು _______ ಎಂದು ಕರೆದರು.
3. ವೈದ್ಯಕೀಯ ಅಧ್ಯಯನಕ್ಕೆ ಬುನಾದಿಯನ್ನು ಹಾಕಿದವನು ______________
4. ಚರಿತ್ರೆಯ ಮೊದಲ ವಿಶ್ಲೇಷಣಾಕಾರ _________ ಎಂದು ಅಭಿಪ್ರಾಯ ಪಡಿಸಲಾಗಿದೆ.
5. 'ಪ್ರಿನ್ಸೆಪ್' ಎಂದರೆ ______________
6. ರೋಮನ್ನರ ಭಾಷೆ ______________
7. ಮಾಯ ನಾಗರಿಕತೆಯ ಕಲ್ಲಿನ ಕಲಾಕೃತಿಗಳನ್ನು _______ ಎಂದು ಕರೆಯುತ್ತಾರೆ.
8. ಟೆಕ್ಸ್‌ಕೊಕೊ ಎಂಬುದು ಮೆಕ್ಸಿಕೋದಲ್ಲಿನ ಒಂದು _______
9. ಇಂಕಾ ಜನರ ಪ್ರಸಿದ್ಧ ನಾಯಕ ______________
10. ಇಂಕಾಗಳ ಆರಾಧ್ಯ ದೈವ ____________

**ಉತ್ತರಗಳು:– 1) ಒಡಿಸ್ಸೆ, 2) ಟೈರಾಂಟ್ಸ್ 3) ಹಿಪ್ಪಾಕ್ರಿಟಸ್ 4) ಹೆರೋಡೊಟಸ್ 5) ರಾಜ್ಯದ ಮೊದಲ ಪ್ರಜೆ 6) ಲ್ಯಾಟಿನ್ 7) ಸ್ಟೇಲ್ಸ್ 8) ಸರೋವರ 9) ಟ್ಯೂಪೆಕ್ (Tupac) 10) ಸೂರ್ಯ ದೇವರು**

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಗ್ರೀಕರ ಸಾಹಿತ್ಯಕ್ಕೆ ಹೋಮರನ ಕೊಡುಗೆಯನ್ನು ವಿವರಿಸಿ.**

- ಹೋಮರ್ ಎಂಬ ಅಂಧ ಕವಿಯು 'ಈಲಿಯಾಡ್' ಮತ್ತು 'ಒಡಿಸ್ಸಿ' ಎಂಬ ಮಹಾಕಾವ್ಯಗಳನ್ನು ರಚಿಸಿದನು.
- ಈ ಎರಡು ಮಹಾಕಾವ್ಯಗಳು ಗ್ರೀಕರ ಅಂದಿನ ಜೀವನ ವಿಧಾನ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗಳ ಬಗ್ಗೆ ವಿವರಗಳನ್ನು ನೀಡುತ್ತವೆ.
- ಈಲಿಯಾಡ್ ಗ್ರೀಕರು ಟ್ರಾಯ್ ನಗರದ ಮೇಲೆ ವಿಜಯ ಸಾಧಿಸಿದ್ದನ್ನು ತಿಳಿಸುತ್ತದೆ.
- ಮತ್ತು ಒಡಿಸ್ಸಿಯು ಗ್ರೀಕ್ ವೀರ ಒಡಿಸ್ಯೂಸನು ಟ್ರಾಯ್‌ನಿಂದ ಹಿಂತಿರುಗಿ ಬರುವಾಗಿನ ಸಾಹಸದ ಚಿತ್ರಣವನ್ನು ನೀಡುತ್ತದೆ.

**2. ಗ್ರೀಕರ ನಗರ ರಾಜ್ಯಗಳನ್ನು ಹೆಸರಿಸಿ.**

- ಅಥೇನ್ಸ್, ಸ್ಪಾರ್ಟಾ, ಮ್ಯಾಸಿಡೋನಿಯಾ, ಥೀಬ್ಸ್.

**3. ರೋಮನ್ನರ ಗಣರಾಜ್ಯದ ಅಂಶಗಳನ್ನು ತಿಳಿಸಿ.**

- ರೋಮ್‌ನಲ್ಲಿ ಸಾ.ಶ.ಪೂ. 6ನೆಯ ಶತಮಾನದಲ್ಲಿ ರಾಜತ್ವವನ್ನು ಅಳಿಸಿ ಗಣರಾಜ್ಯವನ್ನು ಸ್ಥಾಪಿಸಲಾಯಿತು.
- ಸಾ.ಶ.ಪೂ 3ನೆಯ ಶತಮಾನದ ಅವಧಿಗೆ ಸಮಗ್ರ ಇಟಲಿಯ ಆಡಳಿತವು ಗಣರಾಜ್ಯಗಳ ಕೈಗೆ ಬಂದಿತು.
- ರೋಮನ್ ಗಣರಾಜ್ಯದಡಿಯಲ್ಲಿ ಸೆನೆಟ್ ಹಾಗೂ ಅಸೆಂಬ್ಲಿ ಸಲಹಾ ಸಂಸ್ಥೆಗಳಾಗಿ ಮುಂದುವರಿದವು.
- ಈ ಸಂಸ್ಥೆಗಳ ಸದಸ್ಯರುಗಳೇ ಯುದ್ಧಗಳಲ್ಲಿ ಸೇನೆಯನ್ನು ನಡೆಸಿದರು.
- ಇವರು ಕಾನೂನನ್ನು ನಿಭಾಯಿಸಿದರು ಹಾಗೂ ನ್ಯಾಯವನ್ನು ಪ್ರತಿಪಾದಿಸಿದರು.

**4. ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳಾವುವು?**

ಮಾಯ, ಆಸ್ಟೆಕ್ ಮತ್ತು ಇಂಕಾ ಇವು ಅಮೆರಿಕದಲ್ಲಿನ ಪ್ರಾಚೀನ ಕೊಲಂಬಿಯಾದ ನಾಗರಿಕತೆಗಳು.

**5. 'ಮಾಯ'ನ್ನರು ಯಾರು?**

- ಮೆಕ್ಸಿಕೊದ ಯುಕಟೆನ್ ಪ್ರದೇಶದಲ್ಲಿನ ಅಮೆರಿಕದ ಇಂಡಿಯನ್ ಮೂಲನಿವಾಸಿಗಳಿಗೆ ಮಾಯ ಎನ್ನುವರು.
- ಸಾಮಾನ್ಯವಾಗಿ ದೈಹಿಕವಾಗಿ ಮಾಯದ ಜನ ಗಿಡ್ಡವಾಗಿದ್ದು, ಕಂದುಬಣ್ಣ, ನೇರಕೂದಲನ್ನು ಹಾಗೂ ಬಹುತೇಕ ಗುಂಡನೆಯ ತಲೆಯನ್ನು ಹೊಂದಿದವರಾಗಿದ್ದಾರೆ.

**6. ಆಸ್ಟೆಕರು ಪ್ರಕೃತಿಯ ಆರಾಧಕರು. ಹೇಗೆ?**

- ಆಸ್ಟೆಕರು ಪ್ರಕೃತಿಯ ಆರಾಧಕರಾಗಿದ್ದರು.
- ದೇವರನ್ನು ಹಲವು ವಿಧಗಳಲ್ಲಿ ಸಂತೃಪ್ತಿಪಡಿಸಲು ಅವರು ಧಾರ್ಮಿಕ ವಿಧಿಗಳನ್ನು ಅನುಸರಿಸುತ್ತಿದ್ದರು. ಅವುಗಳಲ್ಲಿ ಮಾನವರ ಬಲಿಯೂ ಒಂದು.
- ಆಸ್ಟೆಕರ ಸಾಮ್ರಾಜ್ಯವು ವಿಸ್ತರಿಸಿದಂತೆಲ್ಲ ದೇವರನ್ನು ಸಂತೈಸಲು ಇನ್ನು ಹೆಚ್ಚು ಹೆಚ್ಚು ಆಹುತಿಗಳ ನೀಡುತ್ತಿದ್ದರು.
- ಟೆನೊಟಿಟಲಾನಿನ ಪಿರಿಮಿಡ್ ದೇವಾಲಯವನ್ನು ಸಮರ್ಪಿಸುವಾಗ ಸುಮಾರು 20,000 ಕೈದಿಗಳನ್ನು ಆಹುತಿಯಾಗಿ ನೀಡಿದರು ಎನ್ನಲಾಗಿದೆ.

## ಅಧ್ಯಾಯ – 6

## ಜೈನ ಮತ್ತು ಬೌದ್ಧ ಧರ್ಮಗಳ ಉದಯ

**I. ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದಗಳಿಂದ ಭರ್ತಿ ಮಾಡಿ.**

1. ಜೈನರ ಮೊದಲ ತೀರ್ಥಂಕರನು ______________
2. ವರ್ಧಮಾನನು ಜನಿಸಿದ ಸ್ಥಳ ____________
3. ಮಹಾವೀರನು ತನ್ನ 42ನೆಯ ವಯಸ್ಸಿನಲ್ಲಿ _________ ಪಡೆದನು.
4. ಮಹಾವೀರನು ತನ್ನ 72ನೆಯ ವಯಸ್ಸಿನಲ್ಲಿ _________ ಎಂಬಲ್ಲಿ ನಿರ್ವಾಣ ಹೊಂದಿದನು.
5. ಗೌತಮ ಬುದ್ಧನ ಮೊದಲ ಹೆಸರು __________
6. ಬುದ್ಧನು ತನ್ನ ಮೊದಲ ಬೋಧನೆಯನ್ನು ________ದಲ್ಲಿ ಮಾಡಿದನು.
7. ಬುದ್ಧನ ಮೊದಲ ಬೋಧನೆಯನ್ನು _________ ಎಂದು ಕರೆಯಲಾಗಿದೆ.

**ಉತ್ತರಗಳು:– 1) ಋಷಭ 2) ವೈಶಾಲಿಯ ಕುಂಡಲಗ್ರಾಮ 3) ಕೈವಲ್ಯ ಜ್ಞಾನ 4) ಬಿಹಾರದ ಪಾವಾಪುರಿ 5) ಸಿದ್ಧಾರ್ಥ 6) ಸಾರಾನಾಥದ ಜಿಂಕೆ ವನ 7) ಧರ್ಮ ಚಕ್ರ ಪ್ರವರ್ತನೆ.**

**II. ಈ ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಹೊಸ ಧರ್ಮಗಳ ಉದಯದ ಪೂರ್ವದಲ್ಲಿದ್ದ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**

- ಸಾ.ಶ.ಪೂ. 6ನೆಯ ಶತಮಾನದ ಹೊತ್ತಿಗೆ ಭಾರತೀಯ ಸಮಾಜ ನಾಲ್ಕು ವರ್ಣಾಧಾರಿತವಾಗಿ ವಿಭಜಿತವಾಗಿತ್ತು.

- ಬ್ರಾಹ್ಮಣರು ಪುರೋಹಿತರಾಗಿ, ಯಜ್ಞಯಾಗಾದಿಗಳ ಧಾರ್ಮಿಕ ಕ್ರಿಯೆಗಳ ಆಚರಣೆಯಲ್ಲಿ ಮುಖ್ಯಸ್ಥರಾಗಿದ್ದರು.
- ಎರಡನೇ ಹಂತದಲ್ಲಿದ್ದ ಕ್ಷತ್ರಿಯರು ಆಳುವ ವರ್ಗದವರಾಗಿದ್ದು ರೈತನ ಕಂದಾಯದ ಮೇಲೆ ಬದುಕುತ್ತಿದ್ದರು.
- ಕೃಷಿ, ಪಶುಪಾಲನೆ ಮತ್ತು ವ್ಯಾಪಾರಿ ವೈಶ್ಯರನ್ನು ದ್ವಿಜರೆಂದು ಮಾನ್ಯ ಮಾಡಿದ್ದರೂ, ಅವರ ಮೇಲೆ ನಿರ್ಬಂಧಗಳಿದ್ದವು,
- ಶೂದ್ರರು ಕೃಷಿಯಾಳು, ಮನೆಯಾಳುಗಳಾಗಿ ಮತ್ತು ಕುಶಲ ಕಸುಬುದಾರಿಕೆ ಸೇವೆಗಾಗಿಯೇ ಮೀಸಲಾಗಿದ್ದರು.
- ಸಮಾಜದಲ್ಲಿ ಎಲ್ಲಾ ಸವಲತ್ತುಗಳು ಮನ್ನಣೆಗಳು ಉಚ್ಛವರ್ಣದವರಿಗೆ ಸೀಮಿತವಾಗಿದ್ದವು.
- ಸ್ತ್ರೀಯರು ಸೇರಿದಂತೆ ಶೂದ್ರರು ಅಶುದ್ಧರೆಂದು ಪರಿಗಣಿಸಲ್ಪಟ್ಟಿದ್ದರು.
- ಈ ವರ್ಣಾಧಾರಿತ ತಾರತಮ್ಯತೆಯು ಸಮಾಜದಲ್ಲಿ ಸಾಮಾಜಿಕ ವಿರಸ ಮತ್ತು ತುಮುಲಗಳನ್ನು ಸೃಷ್ಟಿಸಿತ್ತು.

**2. ಮಹಾವೀರನ ಜೀವನ ಕುರಿತು ಬರೆಯಿರಿ.**

- ವರ್ಧಮಾನನು ವೈಶಾಲಿಯ ಕುಂಡಲಗ್ರಾಮದಲ್ಲಿ ಜನಿಸಿದನು. ಇವನ ತಂದೆ ಸಿದ್ಧಾರ್ಥ, ತಾಯಿ ತ್ರಿಶಲಾದೇವಿ.
- ತನ್ನ 30ನೆಯ ವಯಸ್ಸಿನಲ್ಲಿ ಸತ್ಯಾನ್ವೇಷಣೆಯ ಹುಡುಕಾಟದಲ್ಲಿ ತೊಡಗಿದ ಈತ ಮನೆಯನ್ನು ತ್ಯಜಿಸಿದನು.
- ನಂತರ ಇವನು 12 ವರ್ಷಗಳ ಕಾಲ ಸತ್ಯದ ಹುಡುಕಾಟದಲ್ಲಿ ಅಲೆದಾಡಿದ, ತಪಸ್ಸು ಮಾಡಿದ ದೇಹವನ್ನು ದಂಡಿಸಿಕೊಂಡನು.
- ಆತ 42ನೆಯ ವಯಸ್ಸಿನಲ್ಲಿ ಕೈವಲ್ಯ ಜ್ಞಾನವನ್ನು ಪಡೆದನು. ಈ ಸಾಧನೆಗಾಗಿ ಇವನು 'ಮಹಾವೀರ'ನೆಂದು ಕರೆಸಿಕೊಂಡು 'ಜಿನ'ನಾದನು.
- ಇವನ ಅನುಯಾಯಿಗಳನ್ನು ಜೈನರೆಂದು ಕರೆಯುತ್ತಾರೆ.
- ಮಹಾವೀರನು ತನ್ನ ಉಳಿದ 30 ವರ್ಷಗಳ ಬದುಕನ್ನು ಗಂಗಾನದಿಯ ಪ್ರದೇಶದ ಜನತೆಗೆ ತನ್ನ ತಿಳಿವನ್ನು ಬೋಧಿಸುತ್ತಾ ಕಳೆದನು.
- ಇವನು ತನ್ನ ಪಶ್ಚಿಮ ಭಾರತಕ್ಕೂ ಬೋಧಿಸುತ್ತಾ ಪ್ರಯಾಣಿಸಿದ.
- ಇವನು ತನ್ನ 72ನೆಯ ವಯಸ್ಸಿನಲ್ಲಿ ಬಿಹಾರದ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು.

**3. ತ್ರಿರತ್ನಗಳೆಂದರೇನು?**

ಮಹಾವೀರನು ನಡವಳಿಕೆಯ 3 ನಿಯಮಗಳನ್ನು ಬೋಧಿಸಿದನು. ಇವುಗಳನ್ನು ತ್ರಿರತ್ನಗಳೆಂದು ಕರೆಯುತ್ತಾರೆ.
1. ಸಮ್ಯಕ್‌ಜ್ಞಾನ 2. ಸಮ್ಯಕ್‌ದರ್ಶನ 3. ಸಮ್ಯಕ್‌ಚಾರಿತ್ರ.

**4. ಜೈನರ ಪಂಗಡಗಳನ್ನು ಹೆಸರಿಸಿರಿ.**

ಜೈನರಲ್ಲಿ ಶ್ವೇತಾಂಬರ ಹಾಗೂ ದಿಗಂಬರರೆಂಬ ಎರಡು ಮುಖ್ಯ ಪಂಗಡಗಳಿವೆ.

- ಬಿಳಿಯ ಉಡುಪು ಧರಿಸಿದ ಜೈನ ಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ಶ್ವೇತಾಂಬರರೆಂದು ಕರೆಯುತ್ತಾರೆ.
- ಉಡುಪನ್ನು ಧರಿಸದ ಜೈನಮುನಿಗಳನ್ನು ಹಾಗೂ ಅವರ ಅನುಯಾಯಿಗಳನ್ನು ದಿಗಂಬರ ಪಂಥಕ್ಕೆ ಸೇರಿದವರೆಂದು ಪರಿಗಣಿಸಲಾಗಿದೆ.

**5. ಮಧ್ಯಮ ಪಥವೆಂದರೇನು?**

- ಲೋಕವೆಲ್ಲ ದುಃಖ ಹಾಗೂ ನೋವಿನಿಂದ ಆವರಿಸಿದೆ. ಆಸೆಯೇ ದುಃಖಕ್ಕೆ ಮೂಲಕಾರಣ ಎಂಬ ಸತ್ಯವನ್ನು ಬುದ್ಧನು ಬೋಧಿಸಿದನು.
- ಅತಿಯಾದ ಆಸೆಯ ವಿಮುಕ್ತಿಯಿಂದ ಮಾತ್ರ ನೆಮ್ಮದಿಯ ಬದುಕು ಸಾಧ್ಯ.
- ಆಸೆಯ ವಿಮುಕ್ತಿಗಾಗಿ ಅಷ್ಟಾಂಗಿಕ ಮಾರ್ಗವನ್ನು ಬುದ್ಧನು ಬೋಧಿಸಿದನು. ಇದನ್ನು ಮಧ್ಯಮ ಪಥವೆಂದು ಕರೆಯುವರು.

**6. ಹೊಸ ಧರ್ಮದಿಂದ ಪ್ರೇರಿತರಾದವರು ಯಾರು?**

ಶ್ರೀಮಂತ ವರ್ತಕರು, ಕುಶಲಕರ್ಮಿಗಳು, ಜನಸಾಮಾನ್ಯರು ಈ ಹೊಸ ಧರ್ಮದ ಪ್ರತಿಪಾದನೆಯಿಂದ ಪ್ರೇರಿತರಾದರು.

**7. ತ್ರಿಪಿಟಕಗಳ ಬಗ್ಗೆ ಟಿಪ್ಪಣಿ ಬರೆಯಿರಿ.**

ಬುದ್ಧನ ಮರಣದ ನಂತರ ಅವನ ಅನುಯಾಯಿಗಳು ಬುದ್ಧನ ಬೋಧನೆ ಹಾಗೂ ಸಂಪ್ರದಾಯವನ್ನು ತ್ರಿಪಿಟಕಗಳಲ್ಲಿ ಕ್ರೋಡೀಕರಿಸಿದರು. ಅವುಗಳೆಂದರೇ–

1) ವಿನಯ ಪಿಟಕ,
2) ಸುತ್ತ ಪಿಟಕ
3) ಅಭಿಧಮ್ಮ ಪಿಟಕ

# ರಾಜ್ಯಶಾಸ್ತ್ರ

## ಅಧ್ಯಾಯ –1

## ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯತೆ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ರಾಜಕೀಯ ಎಂಬ ಪದ ಉತ್ಪತ್ತಿಗೊಂಡ ಗ್ರೀಕ್ ಪದ ____________
2. 'ರಿಪಬ್ಲಿಕ್' ಗ್ರಂಥದ ಕರ್ತೃ ____________
3. ಅರಿಸ್ಟಾಟಲ್ ರಾಜ್ಯಶಾಸ್ತ್ರವನ್ನು ಕುರಿತು ರಚಿಸಿದ ಕೃತಿ ____________
4. ರಾಜ್ಯಶಾಸ್ತ್ರದ ಬಗೆಗಿನ ಮಾಹಿತಿ ಹೊಂದಿರುವ ಕೌಟಿಲ್ಯನ ಕೃತಿ ____________
5. ಕೌಟಿಲ್ಯನ ಕೃತಿ ____________
6. ರಾಜ್ಯಶಾಸ್ತ್ರದ ಮೂಲವನ್ನು ________ದೇಶದಲ್ಲಿ ಕಾಣಬಹುದು.
7 ರಾಜ್ಯಶಾಸ್ತ್ರದ ಪಿತಾಮಹ __________
8. ರಿಪಬ್ಲಿಕ್ ಕೃತಿಯ ಕತೃ ________

**ಉತ್ತರಗಳು:– 1) 'ಪೊಲಿಸ್' 2) ಪ್ಲೇಟೋ 3) 'ಪಾಲಿಟಿಕ್ಸ್'/ ರಾಜ್ಯಶಾಸ್ತ್ರ 4) ಅರ್ಥಶಾಸ್ತ್ರ 5) 'ಅರ್ಥಶಾಸ್ತ್ರ' 6) ಗ್ರೀಸ್ 7) ಅರಿಸ್ಟಾಟಲ್ 8) ಪ್ಲೇಟೊ.**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ರಾಜ್ಯಶಾಸ್ತ್ರ ಎಂದರೇನು?**

ರಾಜ್ಯ, ಸರ್ಕಾರ ಮತ್ತು ಮಾನವನ ರಾಜಕೀಯ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವ ವಿಷಯವೇ ರಾಜ್ಯಶಾಸ್ತ್ರ.

**2. ರಾಜ್ಯಶಾಸ್ತ್ರದ ಕ್ರಮಬದ್ಧ ಅಧ್ಯಯನ ಯಾರಿಂದ ಪ್ರಾರಂಭವಾಯಿತು?**

ಗ್ರಿಸ್‌ನಲ್ಲಿ ಗ್ರೀಕರಿಂದ ರಾಜ್ಯಶಾಸ್ತ್ರದ ಕ್ರಮಬದ್ಧ ಅಧ್ಯಯನ ಪ್ರಾರಂಭವಾಯಿತು.

**3. ರಾಜ್ಯಶಾಸ್ತ್ರದ ಪಿತಾಮಹರೆಂದು ಯಾರನ್ನು ಕರೆಯುತ್ತಾರೆ?**

ಗ್ರೀಸ್ ದೇಶದ ದಾರ್ಶನಿಕ ಅರಿಸ್ಟಾಟಲನಿಗೆ ರಾಜ್ಯಶಾಸ್ತ್ರದ 'ಪಿತಾಮಹ' ಎಂದು ಕರೆಯುತ್ತಾರೆ.

**4. ರಾಜ್ಯಶಾಸ್ತ್ರದ ಒಂದು ವ್ಯಾಖ್ಯೆ ನೀಡಿ.**

ರಾಜ್ಯಶಾಸ್ತ್ರವು ರಾಜ್ಯದ ಭೂತ, ವರ್ತಮಾನ ಹಾಗೂ ಭವಿಷ್ಯದ ರಾಜಕೀಯ ಸಂಸ್ಥೆಗಳು, ರಾಜಕೀಯ ಕಾರ್ಯಗಳು ಹಾಗೂ ರಾಜಕೀಯ ಸಿದ್ಧಾಂತಗಳ ಅಧ್ಯಯನವಾಗಿರುತ್ತದೆ.

**5. ರಾಜ್ಯಶಾಸ್ತ್ರದ ಅಧ್ಯಯನದ ಯಾವುದಾದರೊಂದು ಪ್ರಯೋಜನ ತಿಳಿಸಿ?**

- ರಾಜ್ಯಶಾಸ್ತ್ರವು ರಾಜ್ಯದ ಸಂವಿಧಾನ ಮತ್ತು ಕಾನೂನುಗಳ ಬಗೆಗಿನ ಜ್ಞಾನವನ್ನು ಒದಗಿಸುತ್ತದೆ.
- ರಾಜ್ಯಶಾಸ್ತ್ರವು ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮತ್ತು ಅವುಗಳ ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತದೆ.
- ರಾಜ್ಯಶಾಸ್ತ್ರವು ಸಾಮಾನ್ಯ ಜನರಲ್ಲಿ ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸುವುದರ ಮೂಲಕ ಸರ್ಕಾರ ಮತ್ತು ಜನಪತ್ರಿನಿಧಿಗಳು ಜಾಗೃತವಾಗಿಯೂ ಮತ್ತು ಸಕ್ರಿಯವಾಗಿ ಇರುವಂತೆ ನೋಡಿಕೊಳ್ಳುತ್ತದೆ.

# ಅಧ್ಯಾಯ – 2

## ಸಾರ್ವಜನಿಕ ಆಡಳಿತ

**I. ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಸಾರ್ವಜನಿಕ ಆಡಳಿತದ ಪಿತಾಮಹ ________
2. ಸಾರ್ವಜನಿಕ ಆಡಳಿತ ಪದವನ್ನು ________ ಪ್ರಥಮವಾಗಿ ಉಪಯೋಗಿಸುತ್ತಾರೆ.
3. ಕೇಂದ್ರ ಲೋಕಾಸೇವಾ ಆಯೋಗದ ಸದಸ್ಯರನ್ನು ________ ನೇಮಕ ಮಾಡುತ್ತಾರೆ.
4. ಸಂವಿಧಾನದ ________ ವಿಧಿಯು ರಾಜ್ಯ ಲೋಕಸೇವಾ ಆಯೋಗದ ಕುರಿತು ತಿಳಿಸುತ್ತದೆ.
5. ರಾಜ್ಯ ಸಚಿವಾಲಯದ ಮುಖ್ಯಸ್ಥರು ________
6. ಸಾರ್ವಜನಿಕ ಎನ್ನುವ ಪದ ________ ಎನ್ನುವ ಅರ್ಥ ಸೂಚಿಸುತ್ತದೆ.
7. ________ ರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು "ಪೋಸ್ಡ್‌ಕಾರ್ಬ್" (POSD CORB) ಎಂಬ ಇಂಗ್ಲಿಷ್ ಪದದಲ್ಲಿ ಸೂಚಿಸಿದ್ದಾರೆ.
8. ಸಚಿವಾಲಯವು ಸರಕಾರದ ________ ವಾಗಿದೆ.

**ಉತ್ತರಗಳು:– 1) ಅಮೆರಿಕಾದ ಮಾಜಿ ಅಧ್ಯಕ್ಷರಾದ ವುಡ್ರೋವಿಲ್ಸನ್ 2) ಅಲೆಕ್ಸಾಂಡರ್ ಹ್ಯಾಮಿಲ್ಟನ್‌ರು 3) ರಾಷ್ಟ್ರಪತಿಗಳು 4) 315 5) ಪ್ರಧಾನ ಕಾರ್ಯದರ್ಶಿಗಳು 6) ಸರ್ಕಾರಿ 7) ಲೂಥರ್ ಗಲಿಕ್ 8) 'ನರಮಂಡಲ' 9)**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸಾರ್ವಜನಿಕ ಆಡಳಿತ ಪ್ರಸ್ತುತ ಅತ್ಯಗತ್ಯವಾಗಿದೆ. ಚರ್ಚಿಸಿ.**

ವ್ಯಕ್ತಿಯು ಹುಟ್ಟಿನಿಂದ ಮರಣದವರೆಗೆ ಸಾರ್ವಜನಿಕ ಆಡಳಿತ ವ್ಯವಸ್ಥೆಗೆ ಒಳಪಟ್ಟಿರುತ್ತಾನೆ.

1) ಸಾರ್ವಜನಿಕ ಆಡಳಿತವು ಸರ್ಕಾರದ ಆಧಾರ ಸ್ತಂಭವಾಗಿದೆ.
2) ಸಾರ್ವಜನಿಕ ಹಿತಾಸಕ್ತಿಗಾಗಿ ವಿವಿಧ ಸೇವೆ ಸಲ್ಲಿಸುತ್ತಿದೆ.
3) ಕಾನೂನು ಮತ್ತು ನೀತಿಗಳ ಅನುಷ್ಠಾನ.
4) ಸಾಮಾಜಿಕ ಭದ್ರತೆಯನ್ನು ಕಾಪಾಡಲು ಅಗತ್ಯ.
5) ಶಾಸಕಾಂಗ ಮತ್ತು ಕಾರ್ಯಾಂಗಕ್ಕೂ ಸಹಾಯ ಮಾಡುತ್ತದೆ.

**2. ಸಾರ್ವಜನಿಕ ಆಡಳಿತ ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೆ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತದೆ. ಸಮರ್ಥಿಸಿ.**

- ಮಾನವನ ಸರ್ವಾಂಗೀಣ ಅಭಿವೃದ್ಧಿ ಹಾಗೂ ಮಾನವ ಸಮಾಜದ ಅಳಿವು ಮತ್ತು ಉಳಿವು ಸಾರ್ವಜನಿಕ ಆಡಳಿತವನ್ನು ಅವಲಂಬಿಸಿದೆ. ವ್ಯಕ್ತಿಯು ಹುಟ್ಟಿನಿಂದ ಮರಣದವರೆಗೆ ಸಾರ್ವಜನಿಕ ಆಡಳಿತ ವ್ಯವಸ್ಥೆಗೆ ಒಳಪಟ್ಟಿರುತ್ತಾನೆ. ಇದು ರಾಜ್ಯ ವ್ಯವಸ್ಥೆಯ ಹೃದಯವಾಗಿದೆ. ಸಾರ್ವಜನಿಕ ಆಡಳಿತ ಇಲ್ಲದ ರಾಜ್ಯದ ಕಲ್ಪನೆಯೇ ಅಸಾಧ್ಯವಾಗಿದೆ.
- ಸಾರ್ವಜನಿಕ ಅಥವಾ ಸರ್ಕಾರದ ನೀತಿಗಳನ್ನು ಕಾರ್ಯಗತಗೊಳಿಸಲು ಆಡಳಿತಾತ್ಮಕ ಯಂತ್ರ ಎಲ್ಲ ರಾಷ್ಟ್ರಗಳಲ್ಲಿಯೂ ಅತ್ಯವಶ್ಯಕವಾಗಿರುತ್ತದೆ.
- ಸಾರ್ವಜನಿಕ ಆಡಳಿತ ವ್ಯವಸ್ಥೆಯು ವ್ಯಕ್ತಿಯು ಗರ್ಭದಲ್ಲಿರುವಾಗಿನಿಂದ ಹಿಡಿದು ಅವನ ಮರಣದವರೆಗೂ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ.
- ಶಾಂತಿ ಹಾಗೂ ಸಮೃದ್ಧತೆಯನ್ನು ಕಾಪಾಡಿ ಜನರ ಪ್ರಾಣ ಹಾಗೂ ಆಸ್ತಿ ರಕ್ಷಣೆ, ನ್ಯಾಯ ಒದಗಿಸುವುದು, ಶಿಕ್ಷಣ
- ನೀಡುವುದು, ಉದ್ಯೋಗಾವಕಾಶ ಕಲ್ಪಿಸುವುದು, ಅವಶ್ಯಕ ವಸ್ತುಗಳ ಪೂರೈಸುವುದು, ದೇಶ ಸಂರಕ್ಷಣೆ, ಆರ್ಥಿಕ ಸಮಾನತೆಯನ್ನು ಉಂಟುಮಾಡುವುದು. ಹೀಗೆ ಹಲವು ರೀತಿಯ ಸೇವೆಗಳನ್ನು ಒದಗಿಸುತ್ತದೆ.
- ಕಾನೂನು ಮತ್ತು ನೀತಿಗಳನ್ನು ಜಾರಿಗೊಳಿಸುವುದರ ಮೂಲಕ ಸಾರ್ವಜನಿಕ ಆಡಳಿತವು ಸಮಾಜದಲ್ಲಿ ಜನರ ಚಟುವಟಿಕೆಗಳನ್ನು ನಿಯಂತ್ರಿಸಿ ಕಾನೂನು ಹಾಗೂ ವ್ಯವಸ್ಥೆಯನ್ನು ಕಾಪಾಡುತ್ತದೆ.
- ಸಾಮಾಜಿಕ ಭದ್ರತೆಯನ್ನು ಕಾಪಾಡಲು ಅಗತ್ಯ.

**3. ನೇಮಕಾತಿ ವಿಧಾನಗಳ ಕುರಿತು ವಿವರಿಸಿ.**

**ನೇಮಕಾತಿ ವಿಧಾನಗಳು**

**ನೇರ ನೇಮಕಾತಿ:** ಅರ್ಹ ಅಭ್ಯರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನಿಶ್ಚಿತ ರೀತಿಯಲ್ಲಿ ಆಯ್ಕೆ ಮಾಡುವುದೇ ನೇರ ನೇಮಕಾತಿಯಾಗಿರುತ್ತದೆ. ಈ ಮೂಲಕ ಸೇವೆಗೆ ಸೇರಬೇಕಾದ ಅಭ್ಯರ್ಥಿಗಳು ಕೆಲವು ಸಾಮಾನ್ಯ ಅರ್ಹತೆಗಳನ್ನು ಹಾಗೂ ವಿಶೇಷ ಅರ್ಹತೆಗಳನ್ನು ಹೊಂದಿರಬೇಕು.

**ಆಂತರಿಕ ನೇಮಕಾತಿ** : ಸರ್ಕಾರಿ ಸೇವೆಯಲ್ಲಿ ಇದ್ದವರಲ್ಲಿ ಅರ್ಹರಾದವರನ್ನು ಮೇಲ್ದರ್ಜೆಯ ಹುದ್ದೆಗಳಿಗೆ ಆಯ್ಕೆ ಮಾಡುವುದೇ ಆಂತರಿಕ ನೇಮಕಾತಿಯಾಗಿರುತ್ತದೆ.

**4. ತರಬೇತಿಯ ವಿಧಗಳು ಯಾವುವು?**

ತರಬೇತಿಯ ವಿಧಗಳು–

i) ಔಪಚಾರಿಕ ಮತ್ತು ಅನೌಪಚಾರಿಕ ತರಬೇತಿ.

ii) ನೌಕರಿ ಪೂರ್ವ ಮತ್ತು ನೌಕರಿ ಆರಂಭೋತ್ತರ ತರಬೇತಿ.

iii) ಅಲ್ಪಾವಧಿ ಮತ್ತು ದೀರ್ಘಾವಧಿ ತರಬೇತಿ.

iv) ಇಲಾಖಾ ಮತ್ತು ಕೇಂದ್ರೀಯ ತರಬೇತಿ.

v) ಪರಿಣಿತ ತರಬೇತಿ ಮತ್ತು ಹಿನ್ನೆಲೆ ತರಬೇತಿ.

**5. ಕೇಂದ್ರ ಸಚಿವಾಲಯದ ರಚನೆ ತಿಳಿಸಿ.**

- ರಾಷ್ಟ್ರಾಧ್ಯಕ್ಷರು ಭಾರತ ಸರ್ಕಾರದ ಆಡಳಿತ ವ್ಯವಹಾರಗಳ ಸುಗಮ ನಿರ್ವಹಣೆಗಾಗಿ ಹಾಗೂ ಮಂತ್ರಿಗಳಲ್ಲಿ ಆ ವ್ಯವಹಾರಗಳ ಹಂಚುತ್ತಾರೆ.
- ಪ್ರತಿ ಒಬ್ಬ ಕ್ಯಾಬಿನೆಟ್ ಸಚಿವರು ಒಂದು ಸ್ವತಂತ್ರ ಖಾತೆಯನ್ನು ಹೊಂದಿರುತ್ತಾರೆ.
- ಅವರು ಹೊಂದಿರುವ ಖಾತೆ ದೊಡ್ಡದಾಗಿದ್ದರೆ, ಅವರಿಗೆ ಸಹಾಯ ಮಾಡಲು ರಾಜ್ಯಮಂತ್ರಿ ಮತ್ತು ಉಪಮಂತ್ರಿ ಇರುತ್ತಾರೆ.
- ಮಂತ್ರಿಯು ಖಾತೆಯ ರಾಜಕೀಯ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯು ಆಡಳಿತಾತ್ಮಕ ಘಟಕವಾಗಿದ್ದು ಆಡಳಿತಾತ್ಮಕ ಮುಖ್ಯಸ್ಥರಾಗಿರುವ ಒಬ್ಬ ಕಾರ್ಯದರ್ಶಿಯ ನಿಯಂತ್ರಣದಲ್ಲಿ ನಿರ್ದಿಷ್ಟವಾಗಿ ಕಾರ್ಯನಿರ್ವಹಿಸುತ್ತದೆ.
- ಖಾತೆಯನ್ನು ಈ ಕೆಳಕಂಡಂತೆ ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗವನ್ನು ಒಬ್ಬೊಬ್ಬ ಅಧಿಕಾರಿಗೆ ವಹಿಸಿಕೊಡಲಾಗಿದೆ.

1. ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಹೆಚ್ಚುವರಿ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ.
2. ಶಾಖೆ (ವಿಂಗ್)–ಜಂಟಿ/ಹೆಚ್ಚುವರಿ ಕಾರ್ಯದರ್ಶಿ
3. ವಿಭಾಗ (ಡಿವಿಜನ್)–ನಿರ್ದೇಶಕರು/ಉಪಕಾರ್ಯದರ್ಶಿ
4. ಶಾಖೆ (ಬ್ರಾಂಚ್)–ಅಧೀನ ಕಾರ್ಯದರ್ಶಿ.
5. ಭಾಗ (ಸೆಕ್ಷನ್)–ಶಾಖಾಧಿಕಾರಿ (ಸೆಕ್ಷನ್–ಆಫೀಸರ್)

**6. ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ರಾಜ್ಯದ ಪಾತ್ರವೇನು? ವಿವರಿಸಿರಿ.**

- ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ರಾಜ್ಯ ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ.
- ತಮ್ಮ ಜವಾಬ್ದಾರಿಯ ನಿರ್ವಹಣೆಗಾಗಿ ರಾಜ್ಯಗಳು ಕಾರ್ಯನಿರ್ವಹಣಾ ವರ್ಗ ಮತ್ತು ಸಲಹಾ ವರ್ಗಗಳಿಂದ ಕೂಡಿದ ಪೊಲೀಸ್ ಸಂಘಟನೆಯನ್ನು ಹೊಂದಿದೆ.
- ರಾಜ್ಯಗಳಲ್ಲಿ ಪೊಲೀಸ್ ಖಾತೆಯು ಗೃಹಮಂತ್ರಿಯ ಅಧೀನದಲ್ಲಿರುತ್ತದೆ. ಗೃಹಮಂತ್ರಿಯು ಪೊಲೀಸ್ ಆಡಳಿತಕ್ಕೆ ಸಂಬಂಧಪಟ್ಟ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.
- ಗೃಹ ಇಲಾಖೆಯ ಕಾರ್ಯದರ್ಶಿಯು ಭಾರತೀಯ ಆಡಳಿತ ಸೇವಾ ಹಂತದ ಅಧಿಕಾರಿಯಾಗಿದ್ದು ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ.
- ಇವರು ಗೃಹಮಂತ್ರಿಗೆ ಕರ್ತವ್ಯ ನಿರ್ವಹಣೆಯಲ್ಲಿ ಸಲಹೆ ಮತ್ತು ಸಹಾಯ ನೀಡುತ್ತಾರೆ.
- ಗೃಹ ಇಲಾಖೆಯು ಪೊಲೀಸ್ ಆಡಳಿತದ ಮೇಲ್ವಿಚಾರಣೆಗೆ ಮತ್ತು ಸಂಯೋಜನೆ ಕಾರ್ಯವನ್ನು ನಿರ್ವಹಿಸುತ್ತದೆ.
- ರಾಜ್ಯ ಪೊಲೀಸ್ ಸಂಘಟನೆ ರಚನೆಯು ಗೃಹ ಕಾರ್ಯದರ್ಶಿಯಿಂದ ಹಿಡಿದು ಪೋಲಿಸ್ ಕಾನ್ಸಟೇಬಲ್ ವರೆಗೂ ವಿವಿಧ ಅಧಿಕಾರಿಗಳಿಂದ ಕೂಡಿದ್ದು ರಾಜ್ಯದ ಕಾನೂನು ಸುವ್ಯವಸ್ಥೆ ನಿರ್ವಹಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ.

**7. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳು ಯಾವುವು?**

1. ಕೇಂದ್ರದ ಎ ಮತ್ತು ಬಿ ವೃಂದದ ಸೇವೆಗಳಿಗೆ ನೇಮಕ ಮಾಡಲು ಪರೀಕ್ಷೆಗಳನ್ನು ನಡೆಸುವುದು.
2. ನೇರ ನೇಮಕಾತಿಗೆ ಸಂದರ್ಶನಗಳನ್ನು ನಡೆಸುವುದು.
3. ಸೇವಾ ಹುದ್ದೆಗಳಿಗೆ ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಲು ತತ್ವಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು.
4. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಹುದ್ದೆಗಳಲ್ಲಿರುವ ಅಧಿಕಾರಿಗಳ ವರ್ತನೆಯ ಮೇರೆಗೆ ಶಿಸ್ತುಕ್ರಮ ತೆಗೆದುಕೊಳ್ಳುವ ಬಗ್ಗೆ ಸರಕಾರಕ್ಕೆ ಸಲಹೆ ನೀಡುವುದು.
5. ರಾಷ್ಟ್ರಪತಿಗಳ ಸೂಚನೆಯನ್ವಯ ಯಾವುದೇ ವಿಷಯಗಳಿಗೆ ಸರ್ಕಾರಕ್ಕೆ ಸಲಹೆ ನೀಡುವುದು.

**8. ಸಾರ್ವಜನಿಕ ಆಡಳಿತದ ಪೋಸ್ಡ್‌ಕಾರ್ಬ್ ದೃಷ್ಟಿಕೋನ ತಿಳಿಸಿ.**

ಲೂಥರ್ ಗಲಿಕ್‌ರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು "ಪೋಸ್ಡ್‌ಕಾರ್ಬ್" (POSD CORB) ಎಂಬ ಇಂಗ್ಲಿಷ್ ಪದದಲ್ಲಿ ಸೂಚಿಸಿದ್ದಾರೆ. ಇಂಗ್ಲಿಷ್ ಪದದ ಪ್ರತಿಯೊಂದು ಅಕ್ಷರವೂ ಸಾರ್ವಜನಿಕ ಆಡಳಿತದಒಂದೊಂದು ಕಾರ್ಯವನ್ನು ಸೂಚಿಸುತ್ತದೆ.

1) **P–ಯೋಜನೆ (Planning)**
2) **O–ಸಂಘಟನೆ (Organisation)**
3) **S–ಸಿಬ್ಬಂದಿ ವ್ಯವಸ್ಥೆ (Staffing)**
4) **D–ನಿರ್ದೇಶನ (Direction)**
5) **Co–ಸಂಯೋಜನೆ (Coordination)**
6) **R–ವರದಿ (Reporting)**
7) **B–ಆಯವ್ಯಯ (Budgeting)**

# ಸಮಾಜಶಾಸ್ತ್ರ

## ಅಧ್ಯಾಯ–1

## ಸಮಾಜಶಾಸ್ತ್ರ ಪರಿಚಯ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಭರ್ತಿ ಮಾಡಿರಿ.**

1. ಮಾನವ ________________ ಜೀವಿ.
2. ಲಾಗೋಸ್ ಎಂದರೆ ___________
3. ಸಮಾಜಶಾಸ್ತ್ರದ ಪಿತಾಮಹ ________
4. ಸಂಘರ್ಷ ಸಿದ್ಧಾಂತದ ಪ್ರವರ್ತಕ ಎಂದು _______ ರನ್ನು ಕರೆಯಲಾಗುತ್ತದೆ.
5. ಜಾತಿ ವಿನಾಶ ಪುಸ್ತಕದ ಕರ್ತೃ ___________
6. __________ ಅವರನ್ನು ಸಮಾಜಶಾಸ್ತ್ರದ ಬೆಳವಣಿಗೆಯ ಪಿತಾಮಹ ಎಂದು ಕರೆಯಲಾಗುತ್ತದೆ.
7. ____________ ಕಾರ್ಲಮಾರ್ಕ್ಸ್‌ರವರ ಗುರುಗಳಾಗಿದ್ದರು.
8. ______________ ಮೊದಲ ಬಾರಿಗೆ ಸಮಾಜಶಾಸ್ತ್ರ ಎಂಬ ಪದವನ್ನು ಬಳಸಿದರು.
9. 'ಸಮಾಜ ವಿಜ್ಞಾನಗಳು' ಎಂಬ ಮಾನ್ಯತೆ ಲಭ್ಯವಾದುದು ಸಾ.ಶ 18 ಶತಮಾನಗಳಲ್ಲಿ 'ಯುರೋಪಿನಲ್ಲಾದ _____________ ಬೆಳವಣಿಗೆಯಿಂದ.

**ಉತ್ತರಗಳು:– 1) ಸಂಘ/ ಸಮಾಜ 2) ಅಧ್ಯಯನ/ ವಿಜ್ಞಾನ/ ಶಾಸ್ತ್ರ 3) ಆಗಸ್ಟ್ ಕಾಮ್ಟೆ 4) ಕಾರ್ಲ್ ಮಾರ್ಕ್ಸ್ 5) ಡಾ!! ಬಿ. ಆರ್. ಅಂಬೇಡ್ಕರ್ 6) ಡರ್ಖೀಮ್ 7) ಹೆಗೆಲನ್ 8) ಆಗಸ್ಟ್ ಕಾಮ್ಟೆ 9) ಕೈಗಾರಿಕಾ ಕ್ರಾಂತಿ ಮತ್ತು ಫ್ರಾನ್ಸಿನ ಮಹಾಕ್ರಾಂತಿಯ**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಸಮಾಜಶಾಸ್ತ್ರದ ಪಿತಾಮಹ ಎಂದು ಯಾರನ್ನು ಕರೆಯಲಾಗುತ್ತದೆ?**

ಸಮಾಜಶಾಸ್ತ್ರದ ಪಿತಾಮಹ ಎಂದು **ಆಗಸ್ಟ್ ಕಾಮ್ಟೆ** ಅವರನ್ನು ಕರೆಯಲಾಗುತ್ತದೆ.

**2. ಸಮಾಜಶಾಸ್ತ್ರ ಎಂದರೇನು?**

"ಸಮಾಜಶಾಸ್ತ್ರ" ಎಂಬುದು ಸಮಾಜದ ವೈಜ್ಞಾನಿಕ ಅಧ್ಯಯನ ಶಾಸ್ತ್ರ. "ಸರ್ವ ಮಾನವ ಸಮಾಜದ ಅಧ್ಯಯನವೆ ಸಮಾಜಶಾಸ್ತ್ರ" ಎಂದು ಹೇಳಬಹುದು.

**3. ಸಮಾಜಶಾಸ್ತ್ರದ ಸ್ವರೂಪವನ್ನು ವಿವರಿಸಿ.**

1. ಸಮಾಜಶಾಸ್ತ್ರವು ಒಂದು ಸಮಾಜ ವಿಜ್ಞಾನವಾಗಿದೆಯೇ ಹೊರತು ಭೌತವಿಜ್ಞಾನವಾಗಿಲ್ಲ.
2. ಸಮಾಜಶಾಸ್ತ್ರವು ಒಂದು ನಿಶ್ಚಯಾತ್ಮಕ ಶಾಸ್ತ್ರವೇ ಹೊರತು ಗುಣ ನಿರ್ದೇಶಕ ಶಾಸ್ತ್ರವಲ್ಲ.
3. ಸಮಾಜಶಾಸ್ತ್ರವು ಒಂದು ಶುದ್ಧ ಶಾಸ್ತ್ರವೇ ಹೊರತು ಪ್ರಾಯೋಗಿಕ ಅಥವಾ ಅನ್ವಯಿಕ ವಿಜ್ಞಾನವಲ್ಲ.
4. ಸಮಾಜಶಾಸ್ತ್ರವು ಅಮೂರ್ತ ಸ್ವರೂಪದ ವಿಜ್ಞಾನವಾಗಿದೆಯೇ ಹೊರತು ಮೂರ್ತ ಸ್ವರೂಪದ್ದಲ್ಲ.
5. ಸಮಾಜಶಾಸ್ತ್ರವು ಒಂದು ಸಾಮಾನ್ಯ ವಿಜ್ಞಾನವಾಗಿದೆಯೇ ಹೊರತು ವಿಶೇಷ ವಿಜ್ಞಾನವಾಗಿಲ್ಲ.

**4. ಆರಂಭಿಕ ಪ್ರಮುಖ ಸಮಾಜಶಾಸ್ತ್ರಜ್ಞರನ್ನು ಹೆಸರಿಸಿ.**

ಆರಂಭಿಕ ವಿದೇಶಿ ಸಮಾಜಶಾಸ್ತ್ರಜ್ಞರು–

1. ಆಗಸ್ಟ್ ಕಾಮ್ಟೆ
2. ಕಾರ್ಲ್ ಮಾರ್ಕ್ಸ್
3. ಎಮಿಲಿ ಡರ್ಖೀಮ್
4. ಮ್ಯಾಕ್ಸ್ ವೇಬರ್

**5. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರನ್ನು ಹೆಸರಿಸಿ.**

ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರು–

1. ಬಿ. ಆರ್. ಅಂಬೇಡ್ಕರ್
2. ಜಿ.ಎಸ್. ಘುರೆ
3. ಎಂ.ಎನ್. ಶ್ರೀನಿವಾಸ್
4. ಸಿ. ಪಾರ್ವತಮ್ಮ
5. ಇರಾವತಿ ಕರ್ವೆ
6. ಎ.ಆರ್. ದೇಸಾಯಿ

**III. ನಾಲ್ಕು ಅಥವಾ ಐದು ವಾಕ್ಯಗಳಿಗೆ ಉತ್ತರಿಸಿ**

**1. ಮಾನವ ಸಮಾಜ ಜೀವಿ ಎಂಬುದನ್ನು ವಿವರಿಸಿ.**

- ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧ ಅನನ್ಯವಾದುದು. ವ್ಯಕ್ತಿಯಿಲ್ಲದೆ ಸಮಾಜವಿಲ್ಲ, ಸಮಾಜವಿಲ್ಲದೆ ವ್ಯಕ್ತಿಯಿಲ್ಲ.
- ನಾವು ಭೂಮಿಯಲ್ಲಿ ಒಂಟಿಯಾಗಿ ಇರಲು ಸಾಧ್ಯವೆ ಇಲ್ಲ. ಮಾನವ ಸಂಘಜೀವಿಯಾಗಿದ್ದಾನೆ.
- ಅವನು ಎಲ್ಲರ ಜೊತೆಯಲ್ಲಿ ಬದುಕಲು ಇಚ್ಛಿಸುತ್ತಾನೆ/ಳೆ.
- ನಮ್ಮೆಲ್ಲರ ವಿಕಾಸ ಮತ್ತು ಬೆಳವಣಿಗೆಗೆ ಸಂಘ ಜೀವನ ಅಗತ್ಯ.
- ಆದುದರಿಂದಲೇ ಮಾನವ ಸಮಾಜವನ್ನು 'ಸಾಮಾಜಿಕ ಸಂಬಂಧಗಳ ಬಲೆ' ಎಂದೂ ಕರೆಯಲಾಗುತ್ತದೆ.

**2. ಸಮಾಜಶಾಸ್ತ್ರ ಮತ್ತು ಇತಿಹಾಸದ ನಡುವಿನ ಸಂಬಂಧವನ್ನು ವಿವರಿಸಿ.**

- ಸಮಾಜಶಾಸ್ತ್ರ ಮತ್ತು ಇತಿಹಾಸ ತುಂಬಾ ಪರಸ್ಪರವಾಗಿವೆ.
- ಇತಿಹಾಸವು ಸಮಾಜದ ಹಿಂದಿನ ಬದುಕಿನ ಪುನರ್ ರಚನೆಯಾಗಿದೆ.
- ಸಮಾಜಶಾಸ್ತ್ರವು ಸಮಕಾಲೀನ ಮಾನವ ಸಮಾಜದ ಪ್ರಸ್ತುತ ರಚನೆಯಾಗಿದೆ.
- ಸಮಕಾಲೀನ ಸಮಾಜದ ವಿವಿಧ ಸಾಮಾಜಿಕ ಘಟನೆಗಳು ಮತ್ತು ಅದರ ವಿವರಣೆಗಳನ್ನು ಇತಿಹಾಸ ಬರವಣಿಗೆಗಾರರಿಗೆ ದಾಖಲೆಯ ಜೊತೆಗೆ ವೈಜ್ಞಾನಿಕ ಮಾಹಿತಿ ನೀಡುವಲ್ಲಿ ಸಮಾಜಶಾಸ್ತ್ರ ಸಹಕಾರಿಯಾಗಿದೆ.

**3. ಸಮಾಜಶಾಸ್ತ್ರವು ಏನನ್ನು ಅಧ್ಯಯನ ಮಾಡುತ್ತದೆ?**

ಸಮಾಜಶಾಸ್ತ್ರವು ಮಾನವ ಸಮಾಜವನ್ನು ಅಧ್ಯಯನ ಮಾಡುತ್ತದೆ. ಈ ಶಾಸ್ತ್ರ ಮಾನವನ ಸಾಮಾಜಿಕ ಜೀವನ, ಸಾಮಾಜಿಕ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಪ್ರಕ್ರಿಯೆಗಳನ್ನು ತನ್ನ ವ್ಯಾಪ್ತಿ ಪರಿಗಣಿಸುತ್ತದೆ.

**4. ಕಾರ್ಲಮಾರ್ಕ್ಸ್‌ರವರು ರಚಿಸಿದ ಕೃತಿಗಳಾವವು?**

ಇವರ ಪ್ರಮುಖ ಕೊಡುಗೆಗಳು :

1) ದಾಸ್ ಕ್ಯಾಪಿಟಲ್–1865,
2) ದಿ ಹೋಲಿ ಫ್ಯಾಮಿಲಿ,
3) ದಿ ಜರ್ಮನ್‌ನ ಐಡಿಯಾಲೊಜಿ–1845,
4) ದಿ ಮ್ಯನಿಫೆಸ್ಟೊ ಆಫ್ ದಿ ಕಮ್ಯೂನಿಸ್ಟ್ ಪಾರ್ಟಿ–1848 ಇತ್ಯಾದಿ.

**5. ಅಂಬೇಡ್ಕರ್ ಅವರ ಆರಂಭಿಕ ಜೀವನವನ್ನು ಕುರಿತು ಬರೆಯಿರಿ.**

- ಬಿ.ಆರ್. ಅಂಬೇಡ್ಕರ್ ಅವರು ಮಹಾರಾಷ್ಟ್ರದ ಅಂಬಾವಾಡೆ ಎಂಬ ಗ್ರಾಮದಲ್ಲಿ ಏಪ್ರಿಲ್ 14, 1891ರಂದು ಜನಿಸಿದರು.
- ಅಂಬೇಡ್ಕರ್ 6 ವರ್ಷದಲ್ಲಿದ್ದಾಗ ತಾಯಿಯನ್ನು ಕಳೆದುಕೊಂಡು ಚಿಕ್ಕಮ್ಮ ಮೀರಾಬಾಯಿಯವರ ಆಶ್ರಯದಲ್ಲಿ ಬೆಳೆದರು.
- ಇವರು ಸತಾರಾದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಆರಂಭಿಸಿದರು.
- ಮುಂಬೈನ ಪ್ರಖ್ಯಾತ ಎಲ್ಫಿನ್‌ಸ್ಟನ್ ಪ್ರೌಢಶಾಲೆಗೆ ಸೇರಿ 1907 ರಲ್ಲಿ ಮೆಟ್ರಿಕ್ ಹಂತದಲ್ಲಿ ಪ್ರಥಮ ಶ್ರೇಣಿ ಗಳಿಸಿ ತೇರ್ಗಡೆಯಾಗುತ್ತಾರೆ.
- ರಮಾಬಾಯಿಯವರೊಂದಿಗೆ ವಿವಾಹವಾದರು.
- 1916 ರಲ್ಲಿ ಕೊಲಂಬಿಯ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆಯುತ್ತಾರೆ.
- 1920ರಲ್ಲಿ 'ಮೂಕನಾಯಕ' ಎಂಬ ಪಾಕ್ಷಿಕವನ್ನು ಆರಂಭಿಸುತ್ತಾರೆ.
- ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಮುಖ ಪುಸ್ತಕಗಳೆಂದರೆ ಜಾತಿ ವಿನಾಶ –1936, ಯಾರು ಶೂದ್ರರು–1946, ಬುದ್ಧ ಮತ್ತು ಅವನ ಧಮ್ಮ–1957, ಇತ್ಯಾದಿ.
- ಡಾ. ಬಿ.ಆರ್. ಅಂಬೇಡ್ಕರ್ ಅವರು ಡಿಸೆಂಬರ್ 6, 1956 ರಂದು ನಿಧನರಾದರು.

**6. ಕರ್ನಾಟಕದ ಪ್ರಮುಖ ಸಮಾಜಶಾಸ್ತ್ರಜ್ಞರಾದ ಡಾ. ಸಿ.ಪಾರ್ವತಮ್ಮ ಅವರನ್ನು ಕುರಿತು ಬರೆಯಿರಿ.**

- ಪಾರ್ವತಮ್ಮ ಅವರು ದಾವಣಗೆರೆ ಜಿಲ್ಲೆಯ ಸ್ಯಾಗಲ್ಲಿ ಎನ್ನುವ ಹಳ್ಳಿಯಲ್ಲಿ ಜೂನ್ 1928 ರಲ್ಲಿ ಜನಿಸಿದರು.
- ಇವರ ನಿಖರವಾದ ಜನ್ಮ ದಿನಕ್ಕೆ ದಾಖಲೆಗಳು ದೊರೆಯದ ಕಾರಣ ಶಾಲೆಗೆ ಪ್ರವೇಶ ಪಡೆದ ದಾಖಲೆಯನ್ನು ಮಾತ್ರ ಪರಿಗಣಿಸಲಾಗಿದೆ.
- ಸಮಾಜಶಾಸ್ತ್ರವನ್ನು ಇಡೀ ದಕ್ಷಿಣ ಭಾರತದಲ್ಲಿ ವಿಸ್ತರಿಸಲು ನಡೆಸಿದ ಪ್ರಯತ್ನ ಅವರ ಸಾಮಾಜಿಕ ಕಾಳಜಿ ಮತ್ತು ಬದ್ಧತೆಯ ಮಹತ್ವವನ್ನು ತಿಳಿಸುತ್ತದೆ.
- ಇವರ ಪ್ರಮುಖ ಕೊಡುಗೆಗಳೆಂದರೆ ಪಾಲಿಟಿಕ್ಸ್ ಮತ್ತು ರಿಲಿಜನ್, ಸೋಷಿಯಲಾಜಿಕಲ್ ಎಸ್ಸೇಸ್ ಆನ್ ವೀರಶೈವಿಸಮ್. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಕುರಿತು ಇವರು ನಡೆಸಿದ ಸಂಶೋಧನೆ ಈಗಲೂ ಅತ್ಯಂತ ಮಹತ್ವದ್ದಾಗಿದೆ.

**7. ಭಾರತದ ಪ್ರಮುಖ ಸಮಾಜಶಾಸ್ತ್ರಜ್ಞರಾದ ಡಾ. ಎಂ.ಎನ್. ಶ್ರೀನಿವಾಸ್ ಅವರನ್ನು ಕುರಿತು ಬರೆಯಿರಿ.**

- ಇವರ ಪೂರ್ಣ ಹೆಸರು ಮೈಸೂರು ನರಸಿಂಹಾಚಾರ್ ಶ್ರೀನಿವಾಸ್ ನವೆಂಬರ್ 16, 1916ರಂದು ಮೈಸೂರಿನಲ್ಲಿ, ನರಸಿಂಹಾಚಾರ್ ಮತ್ತು ರುಕ್ಮಿಣಿ ದಂಪತಿಗಳ ಪುತ್ರನಾಗಿ ಜನಿಸಿದರು.
- ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ., ಎಲ್.ಎಲ್.ಬಿ. ಮತ್ತು ಪಿಎಚ್.ಡಿ ಪದವಿ ಪಡೆದು ಆಕ್ಸ್‌ಫರ್ಡ್‌ನಲ್ಲಿ ಡಿ.ಫಿಲ್ ಪದವಿ ಪಡೆದು, ದೆಹಲಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.
- ಇವರ ಪ್ರಮುಖ ಕೊಡುಗೆಗಳು: ದಕ್ಷಿಣ ಭಾರತದ ಕೊಡವರ ಧರ್ಮ ಮತ್ತು ಸಮಾಜ–1952, ಇಂಡಿಯನ್ ವಿಲೇಜಸ್, ಸೋಸಿಯಲ್ ಚೇಂಜ್ ಇನ್ ಮಾಡರ್ನ್ ಇನ್ಇಂಡಿಯಾ–1966, ರಿಮೆಂಬರ್ಡ್ ವಿಲೇಜ್ 1976 ಇತ್ಯಾದಿ.
- ಕ್ಷೇತ್ರಾಧಾರಿತ ದೃಷ್ಟಿಕೋನ ಎಂಬ ಅಧ್ಯಯನವನ್ನು ಬಳಸಿ ಸಮಾಜ ಸಂಶೋಧನೆಯನ್ನು ಜನಪ್ರಿಯಗೊಳಿಸಿದರು.

## ಅಧ್ಯಾಯ –2

## ಸಂಸ್ಕೃತಿ

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಸಂಸ್ಕೃತಿ ಎಂದರೆ ______________ ಎಂದರ್ಥ.
2. ಲೋಕ ರೂಢಿಗಳೆಂದರೆ ನಾವು ______________ಮತ್ತೆ ಮತ್ತೆ ತೊಡಗಿಸಿಕೊಳ್ಳುವ ಚಟುವಟಿಕೆಗಳು.
3. ಭಾರತದಲ್ಲಿ ____________ ಯಲ್ಲಿ ಏಕತೆ ಕಂಡುಬರುತ್ತದೆ.
4. ಸಂಸ್ಕೃತಿಗೂ ಸಮಾಜಕ್ಕೂ ____________ ಸಂಬಂಧವಿದೆ.
5. ಸಂಸ್ಕೃತಿ ಇಂದಿನ ತಲೆಮಾರುಗಳ__________ ಮುಂದಿನ ತಲೆಮಾರಿಗೆ ಸಾಗಿಸುವ ವಾಹಕ.
6. __________ಎಂಬುದು ಒಂದು ಗುಂಪಿನ ಜನರ ಜೀವನಕ್ರಮ.
7. ಉತ್ತರ ಕರ್ನಾಟಕದ ಊಟ ಉಪಚಾರಗಳು, ದಕ್ಷಿಣ ಕರ್ನಾಟಕಕ್ಕಿಂತ ವಿಭಿನ್ನವು __________ ಗೆ ಉದಾಹರಣೆ.

**ಉತ್ತರಗಳು:– 1) ಒಂದು ಗುಂಪಿನ ಜನರ ಜೀವನ ಕ್ರಮ 2) ದಿನನಿತ್ಯದ ಜೀವನದಲ್ಲಿ 3) ವಿವಿಧತೆ 4) ಉತ್ತಮ/ಅವಿನಾಭಾವ 5) ನಡವಳಿಕೆಗಳು, ನಂಬಿಕೆಗಳು, ಮೌಲ್ಯಗಳನ್ನು 6) ಸಂಸ್ಕೃತಿ 7) ಬಹುತ್ವ ಸಂಸ್ಕೃತಿ 8)**

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸಂಸ್ಕೃತಿ ಎಂದರೇನು?**

ಜ್ಞಾನ, ಅನುಭವ, ನಂಬಿಕೆ, ಮೌಲ್ಯ, ನಡವಳಿಕೆ, ಶ್ರೇಣೀಕರಣ, ಸಂಬಂಧ ಇನ್ನೂ ಮುಂತಾದ ವಿಷಯಗಳನ್ನು ತಲೆಮಾರುಗಳ ಜನರಿಂದ ಪಡೆಯುವ ಪ್ರಕ್ರಿಯೆಯನ್ನು ಸಂಸ್ಕೃತಿ ಎನ್ನುವರು.

**2. ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆ ಕೊಡಿ.**

ನಮ್ಮ ಸುತ್ತಲಿರುವ ಜನರ ಭಾಷೆ, ಉಡುಪು, ಜೀವನ ವಿಧಾನ, ಮಾತನಾಡುವ ಶೈಲಿ ಇವೆಲ್ಲವೂ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆಯಾಗಿವೆ.

**3. ಸಂಸ್ಕೃತಿಯನ್ನು ಎರಡು ವಿಧದಲ್ಲಿ ವಿಂಗಡಿಸಿದವರು ಯಾರು?**

ಸಂಸ್ಕೃತಿಯನ್ನು 2 ವಿಧದಲ್ಲಿ ವಿಂಗಡಿಸಿದವರು ಆಗ್‌ಬರ್ನ್.

**4. ಅಭೌತಿಕ ಸಂಸ್ಕೃತಿ ಎಂದರೇನು?**

ಅಭೌತಿಕ ಸಂಸ್ಕೃತಿ ಎಂದರೆ ಮಾನವ ನಿರ್ಮಿತ ಸಾಧನೆಗಳು, ಅಮೂರ್ತ ಕಲ್ಪನೆಗಳು. ಉದಾಹರಣೆಗೆ; ಸಂಪ್ರದಾಯ, ಲೋಕಾರೂಢಿ, ನಂಬಿಕೆ, ಆಚಾರ–ವಿಚಾರ, ನೈತಿಕ ನಿಯಮ,

ಮೌಲ್ಯಗಳು, ಆದರ್ಶಗಳು, ಕಲೆ, ಸಂಗೀತ, ಸಾಹಿತ್ಯ, ಧರ್ಮ, ಭಾಷೆ ಇತ್ಯಾದಿ.

**5. ಭೌತಿಕ ಸಂಸ್ಕೃತಿ ಎಂದರೇನು?**

ಭೌತಿಕ ಸಂಸ್ಕೃತಿ ಎಂದರೆ ನೈಸರ್ಗಿಕ ಸಂಪನ್ಮೂಲಗಳಿಂದ ಪರಿವರ್ತಿಸಿದ ಮಾನವ ನಿರ್ಮಿತ ವಸ್ತುಗಳಾದ ಮನೆ, ಕಟ್ಟಡ, ಶಾಲೆ, ಸೇತುವೆ, ರಸ್ತೆ, ಅಣೆಕಟ್ಟು, ಯಂತ್ರ, ಉತ್ಪಾದನಾ ವಿಭಾಗ.

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.**

**1. ಲೋಕ ರೂಢಿಗಳೆಂದರೇನು? ಉದಾಹರಣೆ ಕೊಡಿ.**

ನಾವು ದಿನನಿತ್ಯದ ಜೀವನದಲ್ಲಿ ಹೆಚ್ಚು ಯೋಚಿಸದೇ ರೂಢಿಯ ಆಧಾರದ ಮೇಲೆ ಮತ್ತೆ ಮತ್ತೆ ತೊಡಗುವ ಚಟುವಟಿಕೆಗಳನ್ನು ಲೋಕರೂಢಿಗಳೆನ್ನುತ್ತೇವೆ.

ಉದಾಹರಣೆ– ಊಟ ಮಾಡುವುದು, ನಿದ್ರಿಸುವದು, ಶುಭಾಶಯ ಹೇಳುವುದು ಇತ್ಯಾದಿ ಚಟುವಟಿಕೆಗಳು.

**2. ಸಾಂಸ್ಕೃತಿಕ ವೈವಿಧ್ಯತೆಯನ್ನು ವಿವರಿಸಿ.**

- ನಮ್ಮಲ್ಲಿ ನಡೆಯುವ ಜಾತ್ರೆಗಳು ಯಾವುದೇ ಜಾತಿ, ವರ್ಣ, ಧರ್ಮ, ಭೇದ ಭಾವಗಳಿಲ್ಲದೇ ಎಲ್ಲರೂ ಸೇರಿ ಭಾಗವಹಿಸುವ ಮೂಲಕ ನಡೆಯುತ್ತವೆ.
- ಎಲ್ಲಾ ಜನವರ್ಗಗಳು ವಿವಿಧ ಸಂಸ್ಕೃತಿ, ವಿವಿಧ ಭಾಷೆ, ವಿವಿಧ ಸಾಂಸ್ಕೃತಿಕ ಆಚರಣೆಗಳಿಗೆ ಸೇರಿದವರಾಗಿರುತ್ತಾರೆ.
- ನಮ್ಮ ಸುತ್ತಮುತ್ತಲಿರುವ ಇವರು ಉರ್ದು, ಮರಾಠಿ, ಕನ್ನಡ, ತೆಲುಗು ಇತ್ಯಾದಿ ಭಾಷೆಗಳನ್ನು ಮಾತನಾಡುತ್ತಿರುತ್ತಾರೆ. ಇವೆಲ್ಲವೂ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆಯಾಗಿವೆ.

**3. ಸಂಸ್ಕೃತಿಯ ಗುಣಲಕ್ಷಣಗಳನ್ನು ತಿಳಿಸಿ.**

1. ಸಂಸ್ಕೃತಿ ಅಮೂರ್ತವಾದದ್ದು.
2. ಸಂಸ್ಕೃತಿ ಸಾಮಾಜಿಕವಾದದ್ದು
3. ಮಾನವ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನನಡುವಿನ ಒಡನಾಟಗಳಿಂದ ರೂಪಿತವಾಗುತ್ತಿರುತ್ತದೆ.
4. ಜನರಲ್ಲಿ ಸಹಜೀವನ, ಸಹಭಾಗಿತ್ವಗೊಳ್ಳುವ ಅವಕಾಶವನ್ನು ಸಂಸ್ಕೃತಿ ನೀಡುತ್ತದೆ.
5. ಸಂಸ್ಕೃತಿಯು ನಿರಂತರವಾದದ್ದು.
6. ಸಂಸ್ಕೃತಿಯು ಬಹುತ್ವದ್ದು.

**4. ಸಂಸ್ಕೃತಿ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹೇಗೆ?**

- ಸಂಸ್ಕೃತಿಯು ಮಾನವನನ್ನು ಇತರ ಜೀವಿಗಳಿಂದ ಪ್ರತ್ಯೇಕಿಸುತ್ತದೆ.
- ಸಾಂಸ್ಕೃತಿಕ ನಿಯಮಗಳನ್ನು ಅನುಸರಿಸುವ ಮೂಲಕ ಒಂದು ಸಮಾಜದ ಸಾಮಾಜಿಕ ನಿಯಂತ್ರಣಗಳು ರೂಪುಗೊಳ್ಳುತ್ತವೆ.
- ಸಂಸ್ಕೃತಿಯು ಹುಟ್ಟು ಹಾಕುವನ ಸಾಮಾಜಿಕ ನಿಯಮಗಳಿಗೂ ಸಮಾಜಕ್ಕೂ ನಿಕಟವಾದ ಸಂಬಂಧವಿರುತ್ತದೆ.
- ಈ ನಿಯಮಗಳು ಸಮಾಜದಲ್ಲಿ ಪ್ರತಿವ್ಯಕ್ತಿಯ ನಡವಳಿಕೆಗಳನ್ನು ನಿಯಂತ್ರಣ ಮಾಡುತ್ತವೆ. ಇದು ವ್ಯಕ್ತಿಗಳ ಮೇಲೆ ಇರುವ ಸಾಮಾಜಿಕ ನಿರ್ಬಂಧನೆಗಳನ್ನು ಸೂಚಿಸುತ್ತದೆ.
- ವ್ಯಕ್ತಿಗಳು ಜೀವನದಲ್ಲಿ ಅನೇಕ ಸಾಮಾಜಿಕ ಸಂಸ್ಥೆಗಳ ಸದಸ್ಯರಾಗಿರುತ್ತಾರೆ.
- ಪ್ರತಿಯೊಂದು ಸಾಮಾಜಿಕ ಸಂಸ್ಥೆಗಳು ತನ್ನದೇ ಸಾಂಸ್ಕೃತಿಕ ನಿಯಮಗಳನ್ನು ವೈಯಕ್ತಿಕ ಸಂಬಂಧಗಳನ್ನು ಬಂಧಿಸಿರುತ್ತವೆ.

**5. ಜಾತ್ರೆಯ ವೈವಿಧ್ಯತೆಯನ್ನು ತಿಳಿಸಿ.**

- ಜಾತ್ರೆಗಳು ಭಾರತದ ಗ್ರಾಮೀಣ ಪ್ರದೇಶದ ಸಾಂಸ್ಕೃತಿಕ ಆಚರಣೆಗಳಲ್ಲಿ ಅತ್ಯಂತ ಮಹತ್ವದ್ದಾಗಿವೆ.
- ಜಾತ್ರೆಗಳು ಕೇವಲ ಧಾರ್ಮಿಕ ಸಮಾರಂಭಗಳ ಉತ್ಸವಗಳಾಗಿಲ್ಲ. ಜಾತ್ರೆ ನಡೆಯುವ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಗೆ ಜಾತ್ರೆ ಒಂದು ಮಾರುಕಟ್ಟೆಯಾಗಿರುತ್ತದೆ.
- ಇಲ್ಲಿ ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಇಲ್ಲಿ ತಾವು ಸಾಕಿದ ದನಗಳನ್ನು ಮಾರಾಟ ಮಾಡುವ ಮತ್ತು ಕೊಳ್ಳುವ ಪ್ರಕ್ರಿಯೆ ನಡೆಯುತ್ತದೆ.
- ಜಾತ್ರೆ ಸುಗ್ಗಿಯ ನಂತರದ ಒಂದು ಬಗೆಯ ಮನೋರಂಜನೆ ಯಾಗಿಯೂ ಮುಖ್ಯವಾಗುತ್ತದೆ.
- ಯಾವುದೇ ಜಾತಿ, ವರ್ಣ, ಧರ್ಮ, ಭೇದ ಭಾವಗಳಿಲ್ಲದೇ ಎಲ್ಲರೂ ಸೇರಿ ಭಾಗವಹಿಸುವ ಮೂಲಕ ಜಾತ್ರೆಗಳು ನಡೆಯುತ್ತವೆ.
- ವಿವಿಧ ಭಾಷೆ ಮಾತನಾಡುವ ಜನ ತಮ್ಮ ಕೈ ಚಳಕಗಳನ್ನು, ದೈಹಿಕ ಭಂಗಿಗಳನ್ನು ಪ್ರದರ್ಶನ ಮಾಡುವ ಜೊತೆಗೆ ಚಿಕ್ಕ ಪುಟ್ಟ ಸರ್ಕಸ್‌ಗಳು ಜಾತ್ರೆಗಳಲ್ಲಿ ಇರುತ್ತವೆ.
- ಹೀಗೆ ವಿವಿಧ ವೃತ್ತಿ, ವಿವಿಧ ಭಾಷೆ, ಕಸಬುಗಳನ್ನು ಮಾಡುವ ಜನ ತಮ್ಮ ಕುಶಲತೆಗಳನ್ನು ಇಲ್ಲಿ ಪ್ರದರ್ಶನದಲ್ಲಿ ಇಟ್ಟಿರುತ್ತಾರೆ.
- ಇವರ ಪ್ರದರ್ಶನ ಕೇವಲ ಪ್ರದರ್ಶನವಾಗಿರದೆ ಅವರ ಸಾಂಸ್ಕೃತಿಕ ಪ್ರವೃತ್ತಿಯೂ ಆಗಿರುತ್ತದೆ. ಜಾತ್ರೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಸ್ಥಳೀಯ ಆವೃತ್ತಿಗಳನ್ನು ಹೇಳುತ್ತಿರುತ್ತಾರೆ.

# ಭೂಗೋಳ ವಿಜ್ಞಾನ

## ಅಧ್ಯಾಯ–1

## ಭೂಮಿ–ನಮ್ಮ ಜೀವಂತ ಗ್ರಹ

**I. ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿ.**

1. ಭೂಮಿಯ ಒಟ್ಟು ಭೌಗೋಳಿಕ ಕ್ಷೇತ್ರವು ________ ಚ.ಕಿ.ಮೀ.
2. ಭೂಮಿಯು ________ ಆಕಾರದಲ್ಲಿದೆ.
3. ಭೂಮಿಯ ಸಮಭಾಜಕವೃತ್ತ ಮತ್ತು ಧ್ರುವ ಪ್ರದೇಶಗಳ ವ್ಯಾಸವು________ ಮತ್ತು________ ಕಿ.ಮೀ.ಗಳು.
4. $23\frac{1}{2}°$ ಉತ್ತರ ಅಕ್ಷಾಂಶವನ್ನು ________ ಎಂದು ಕರೆಯುತ್ತಾರೆ.
5. ಭಾರತದ ಆದರ್ಶ ವೇಳೆಯು ________ ರೇಖಾಂಶವನ್ನು ಆಧರಿಸಿದೆ.

6. ಭೂಮಿಯ ಒಟ್ಟು ಭೌಗೋಳಿಕ ಕ್ಷೇತ್ರದ ________ ರಷ್ಟು ಭಾಗವು ಭೂ ಭಾಗದಿಂದ ಕೂಡಿದೆ.
7. _____ ಸಾಗರವು ಅತಿ ಚಿಕ್ಕದು ಮತ್ತು ಕಡಿಮೆ ಆಳ ಹೊಂದಿದೆ.
8. ಒಂದು ಅಕ್ಷಾಂಶದಿಂದ ಮತ್ತೊಂದು ಅಕ್ಷಾಂಶಕ್ಕಿರುವ ಭೂಮಿಯ ಮೇಲಿನ ಅಂತರ _______ ಕಿ.ಮೀ. ಗಳಾಗುತ್ತದೆ.
9. ರೇಖಾಂಶಗಳನ್ನು __________ ರೇಖೆಗಳೆನ್ನುವರು.
10. 0° ರೇಖಾಂಶವಾದ 'ಪ್ರಧಾನ ರೇಖಾಂಶ'ವು ________ ಎಂಬಲ್ಲಿ ಹಾದು ಹೋಗಿದೆ.

**ಉತ್ತರಗಳು:– 1) 510 ದಶಲಕ್ಷ 2) ಭೂಮ್ಯಾಕಾರ 3) 12756, 12714 4) ಕರ್ಕಾಟಕ ಸಂಕ್ರಾಂತಿ ವೃತ್ತ 5) $82\frac{1}{2}°$ ಪೂರ್ವ 6) 29.22% 7) ಆರ್ಕ್ಟಿಕ್ 8) 110.4 9) ಮಧ್ಯಾಹ್ನ ಅಥವಾ ಮೆರಿಡಿಯನ್ 10) ಇಂಗ್ಲೆಂಡಿನ ಗ್ರೀನ್‌ವಿಚ್**

**II. ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.**

**1. ಭೂಮಿಯನ್ನು 'ಜೀವಂತಗ್ರಹ'ವೆಂದು ಏಕೆ ಕರೆಯುತ್ತಾರೆ?**

- ಸೌರವ್ಯೂಹದಲ್ಲಿರುವ ಗ್ರಹಗಳಲ್ಲಿ ಭೂಮಿಯು ಮಾತ್ರ ಜೀವಿಗಳನ್ನು ಹೊಂದಿದೆ.
- ಭೂಮಿ ಎಲ್ಲ ಬಗೆಯ ಅಂದರೆ ಸಸ್ಯಗಳು, ಪ್ರಾಣಿ ಮತ್ತು ಮಾನವ ಜೀವಿಗಳಿಗೆ ವಾಸಸ್ಥಾನವಾಗಿದೆ.

ಹೀಗಾಗಿ ಭೂಮಿಯನ್ನು 'ಜೀವಂತಗ್ರಹ'ವೆಂದು ಕರೆಯಲಾಗಿದೆ.

**2. ಉತ್ತರಗೋಳಾರ್ಧವನ್ನು 'ಭೂಪ್ರಧಾನಗೋಳ'ವೆಂದು ಹಾಗೂ ದಕ್ಷಿಣಗೋಳಾರ್ಧವನ್ನು 'ಜಲಪ್ರಧಾನಗೋಳ'ವೆಂದು ಏಕೆ ಕರೆಯುತ್ತಾರೆ?**

ಉತ್ತರಗೋಳಾರ್ಧದಲ್ಲಿ ಶೇ.60 ಭಾಗದಷ್ಟು ಭೂ ಭಾಗವಿದ್ದು, ಶೇ.40 ಭಾಗದಷ್ಟು ಜಲರಾಶಿಯಿರುವುದು. ಆದ್ದರಿಂದ ಇದನ್ನು 'ಭೂ ಪ್ರಧಾನ ಗೋಳಾರ್ಧ'ವೆಂದೂ ಕರೆಯಲಾಗಿದೆ.

ದಕ್ಷಿಣಗೋಳಾರ್ಧದಲ್ಲಿ ಶೇ.81 ಭಾಗದಷ್ಟು ಜಲರಾಶಿಯಿದ್ದು ಶೇ.19 ಭಾಗದಷ್ಟು ನೆಲ ಭಾಗವಿರುವುದರಿಂದ ಇದನ್ನು 'ಜಲಪ್ರಧಾನ ಗೋಳಾರ್ಧ' ವೆಂದೂ ಕರೆಯುವರು.

**3. ಅಕ್ಷಾಂಶಗಳು ಮತ್ತು ರೇಖಾಂಶಗಳೆಂದರೇನು?**

ಸಮಭಾಜಕ ವೃತ್ತಕ್ಕೆ ಸಮಾನಾಂತರವಾಗಿರುವಂತೆ ಗೋಳದ ಮೇಲೆ ಪೂರ್ವ ಪಶ್ಚಿಮವಾಗಿ ಎಳೆದಿರುವ ಕಾಲ್ಪನಿಕ ರೇಖೆಗಳನ್ನೇ 'ಅಕ್ಷಾಂಶಗಳು' (Latitudes) ಎನ್ನುವರು.

ಸಮಭಾಜಕ ವೃತ್ತವನ್ನು ಸಮಕೋನದಲ್ಲಿ ಭೇದಿಸಿ ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಸಂಧಿಸುವ ಕಾಲ್ಪನಿಕ ರೇಖೆಗಳನ್ನು ರೇಖಾಂಶಗಳು ಎನ್ನುವರು.

**4. ಸ್ಥಾನಿಕ ವೇಳೆ ಮತ್ತು ಆದರ್ಶ ವೇಳೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.**

| ಸ್ಥಾನಿಕ ವೇಳೆ: | ಆದರ್ಶ ವೇಳೆ: |
|---|---|
| 1. ಒಂದು ಸ್ಥಳದ ರೇಖಾಂಶ ಅಥವಾ ಸೂರ್ಯನ ಸ್ಥಾನಕ್ಕನುಸಾರವಾಗಿ ನಿರ್ಧರಿಸುವ ವೇಳೆಯನ್ನು 'ಸ್ಥಾನಿಕ ವೇಳೆ' ಎನ್ನುವರು. | 1. ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶದ ಅಥವಾ ಅದರ ಮೇಲಿರುವ ಪ್ರಮುಖ ನಗರದ ವೇಳೆಯನ್ನು ಆದರ್ಶ ವೇಳೆ ಎನ್ನುವರು. |
| 2. ಸ್ಥಾನಿಕ ವೇಳೆಯು ಆ ಸ್ಥಳದ ಸ್ಥಳೀಯ ರೇಖಾಂಶವನ್ನು ಅದರಲ್ಲೂ ಸ್ಥಳೀಯ ಮಧ್ಯಾಹ್ನದ ರೇಖೆಯನ್ನು ಆಧರಿಸಿರುತ್ತದೆ. | 2. ಇದು ಆ ದೇಶದ ಮದ್ಯದಲ್ಲಿರುವ ರೇಖಾಂಶವನ್ನು ಅವಲಂಬಿಸಿರುತ್ತದೆ. |
| 3. ಆ ಸ್ಥಳದ ಮೇಲೆ ಸೂರ್ಯನ ಕಿರಣ ನೇರವಾಗಿ ಬೀಳುವುದರಿಂದ ಮಧ್ಯಾಹ್ನ 12 ಗಂಟೆಯಾಗಿರುತ್ತದೆ. | 3. ಆ ದೇಶದ ಮದ್ಯದಲ್ಲಿರುವ ರೇಖಾಂಶದ ವೇಳೆಯನ್ನೇ ಇಡೀ ದೇಶಕ್ಕೆ ಅನ್ವಯವಾಗುತ್ತದೆ. |
| 4. ಆ ಮಧ್ಯಾಹ್ನರೇಖೆ ಹಾದುಹೋಗುವ ಎಲ್ಲಾ ಸ್ಥಳಗಳಲ್ಲೂ ಒಂದೇ ಸ್ಥಾನಿಕ ವೇಳೆಯಿರುತ್ತದೆ. | 4 ಸ್ಥಾನಿಕ ವೇಳೆಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುವ ಗೊಂದಲವನ್ನು ನಿವಾರಿಸಲು ಇಡೀ ದೇಶದಲ್ಲಿ ಏಕರೂಪದ ವೇಳೆಯನ್ನು ಅನುಸರಿಸುತ್ತವೆ. |
| 5. ಎಲ್ಲಾ ರೇಖಾಂಶಗಳಲ್ಲಿಯೂ ಒಂದು ಸಾಮಯಲ್ಲಿ ಒಂದೇ ವೇಳೆ ಇರುವುದಿಲ್ಲ ಆದ್ದರಿಂದ ಇದಕ್ಕೆ ಸ್ಥಾನಿಕ ವೇಳ ಎನ್ನುವರು | 5. ಈ ವೇಳೆಯನ್ನು ದೇಶದ ಎಲ್ಲಾ ಭಾಗಗಳಲ್ಲೂ ಅನುಸರಿಸುವುದರಿಂದ ಇದನ್ನು ಆದರ್ಶ ವೇಳೆ ಎನ್ನುವರು. |

**5. ಅಂತಾರಾಷ್ಟ್ರೀಯ ದಿನಾಂಕ ರೇಖೆ ಎಂದರೇನು?**

ಪ್ರಪಂಚವನ್ನೇ ಪ್ರದಕ್ಷಿಣೆ ಹಾಕುವ ಪ್ರಯಾಣಿಕರಿಗೆ ವಾರದಲ್ಲಿನ ಸರಿಯಾದ ದಿನಾಂಕ ಮತ್ತು ದಿನಗಳನ್ನು ಸರಿಪಡಿಸಲು ಗ್ರೀನ್‌ವಿಚ್ ರೇಖಾಂಶದ ವಿರುದ್ಧವಾದ ದಿಕ್ಕಿನಲ್ಲಿರುವ 180° ರೇಖಾಂಶದ ಮೇಲೆ ಪ್ರಪಂಚ ಪರ್ಯಟನೆ ಮಾಡುವವರು ತಮ್ಮ ಸಂದರ್ಭಕ್ಕೆ ದಿನ ಮತ್ತು ದಿನಾಂಕವನ್ನು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಇದನ್ನೇ ಅಂತಾರಾಷ್ಟ್ರೀಯ ದಿನಾಂಕ ರೇಖೆ ಎನ್ನುವರು.

6. **ಪ್ರಮುಖ ಅಕ್ಷಾಂಶಗಳನ್ನು ಪಟ್ಟಿ ಮಾಡಿ.**

1) 0° ಅಕ್ಷಾಂಶ – ಸಮಭಾಜಕವೃತ್ತ
2) 23½° ಉತ್ತರ ಅಕ್ಷಾಂಶ – ಕರ್ಕಾಟಕ ಸಂಕ್ರಾಂತಿ ವೃತ್ತ.
3) 23½°ದಕ್ಷಿಣ ಅಕ್ಷಾಂಶ – ಮಕರ ಸಂಕ್ರಾಂತಿ ವೃತ್ತ.
4) 66½°ಉತ್ತರ ಅಕ್ಷಾಂಶ – ಉತ್ತರಧ್ರುವ ವೃತ್ತ (ಆರ್ಕ್ಟಿಕ್ ವೃತ್ತ).
5) 66½°ದಕ್ಷಿಣ ಅಕ್ಷಾಂಶ–ದಕ್ಷಿಣಧ್ರುವ ವೃತ್ತ. (ಅಂಟಾರ್ಕ್ಟಿಕ್ ವೃತ್ತ).
6) 90° ಉತ್ತರ ಅಕ್ಷಾಂಶ – ಉತ್ತರಧ್ರುವ.
7) 90° ದಕ್ಷಿಣ ಅಕ್ಷಾಂಶ – ದಕ್ಷಿಣಧ್ರುವ.

**III. ಈ ಕೆಳಗಿನವುಗಳ ಅರ್ಥ ಬರೆಯಿರಿ.**

**1. ವಿಶಿಷ್ಟ ಗ್ರಹ:–** ಸೌರವ್ಯೂಹದಲ್ಲಿರುವ ಗ್ರಹಗಳಲ್ಲಿ ಭೂಮಿಯು ಮಾತ್ರ ಜೀವಿಗಳನ್ನು ಹೊಂದಿದೆ. ಭೂಮಿ ಎಲ್ಲ ಬಗೆಯ ಅಂದರೆ ಸಸ್ಯಗಳು, ಪ್ರಾಣಿ ಮತ್ತು ಮಾನವ ಜೀವಿಗಳಿಗೆ ವಾಸಸ್ಥಾನವಾಗಿದೆ. 'ವಿಶಿಷ್ಟಗ್ರಹ' ಎಂದು ಕರೆಯಲಾಗಿದೆ.

**2. ಭೂಮಿಯ ಗಾತ್ರ :–** ಸೂರ್ಯನ ಪರಿವಾರದಲ್ಲಿ ಭೂಮಿಯು ಐದನೇ ದೊಡ್ಡ ಗ್ರಹವಾಗಿದೆ. ಭೂಮಿಯ ವ್ಯಾಸವು

ಚಂದ್ರನ ವ್ಯಾಸಕ್ಕಿಂತ ಸುಮಾರು ನಾಲ್ಕು ಪಟ್ಟು ದೊಡ್ಡದಾಗಿದೆ ಹಾಗೂ ಸೂರ್ಯನಿಗಿಂತ 107 ಪಟ್ಟು ಚಿಕ್ಕದಾಗಿದೆ.

3. **ಭೂಮ್ಯಾಕಾರ:–** ಭೂಮಿಯು ಧ್ರುವಗಳ ಬಳಿ ಸ್ವಲ್ಪ ಚಪ್ಪಟೆಯಾಗಿದ್ದು ಸಮಭಾಜಕವೃತ್ತದ ಬಳಿ ಉಬ್ಬಿದಂತಿದೆ. ಇದು ಭೂಮಿಯು ಗೋಳಾಕಾರವಾಗಿರುವುದನ್ನು ಸ್ಪಷ್ಟಪಡಿಸುವುದು. ಇದನ್ನೇ ಭೂಮ್ಯಾಕಾರ ಎನ್ನುವರು.

4. **ಭೂಖಂಡಗಳು:–** ಭೂಮಿಯ ನೆಲ ಭಾಗಗಳನ್ನು ಭೂ ಖಂಡಗಳೆಂದು ಕರೆಯುತ್ತಾರೆ. ಭೂ ನೆಲ ಭಾಗವನ್ನು ಏಳು ಭೂ ಖಂಡಗಳಾಗಿ ವಿಂಗಡಿಸಲಾಗಿದೆ.

5. **ಪ್ರಧಾನ ರೇಖಾಂಶ:–** ಇಂಗ್ಲೆಂಡಿನ ಗ್ರೀನ್‌ವಿಚ್‌ನ ಮೇಲೆ ಹಾದುಹೋಗುವ ರೇಖಾಂಶವನ್ನು 'ಪ್ರಧಾನ ರೇಖಾಂಶ'ವೆಂದು ಆಯ್ಕೆಮಾಡಲಾಗಿದೆ. ಇದನ್ನು $0^\circ$ ಎಂದು ಗುರುತಿಸಲಾಗಿದೆ.

6. **ಭಾರತದ ಆದರ್ಶವೇಳೆ:–** ಭಾರತದಲ್ಲಿ $82\frac{1}{2}^\circ$ ಪೂರ್ವ ರೇಖಾಂಶವನ್ನು ದೇಶದ ಅಥವಾ ಆದರ್ಶ ರೇಖಾಂಶವೆಂದು ನಿರ್ಧರಿಸಲಾಗಿದೆ. ಇದು ಉತ್ತರ ಪ್ರದೇಶ ರಾಜ್ಯದ ಅಲಹಾಬಾದ್ ನಗರದ ಮೂಲಕ ಹಾದುಹೋಗಿದೆ.

# ಅಧ್ಯಾಯ –2
## ಶಿಲಾಗೋಳ

**I. ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಿರಿ.**

1. 'ಭೂಖಂಡಗಳ' ಮೇಲ್ಪದರು ಎಂದು ________ ನ್ನು ಕರೆಯುತ್ತಾರೆ.
2. ತಗ್ಗಾದ, ವಿಸ್ತಾರವಾದ ಜ್ವಾಲಾಮುಖಿ ದ್ವಾರವನ್ನು ______ ಎನ್ನುವರು.
3. ಹೆಚ್ಚು ಹಾನಿಕಾರಕ ಭೂಕಂಪನ ಅಲೆಗಳೆಂದರೆ ______
4. ಆರೋಹಿ ಮತ್ತು ಅವರೋಹಿ ಶಂಕುಗಳು ________ ನಗ್ನೀಕರಣ ಕರ್ತೃವಿನಿಂದ ನಿರ್ಮಾಣವಾಗುತ್ತವೆ.
5. ಮರಳುದಂಡೆಗಳು____ಕಾರ್ಯದಿಂದ ನಿರ್ಮಿತವಾಗುತ್ತವೆ.
6. ನಮ್ಮ ಭೂಗ್ರಹವು ______ ವರ್ಷಗಳಿಗಿಂತ ಹಳೆಯದಾಗಿದೆ.
7. ನಾವು ಮನೆಯಲ್ಲಿ ಬಳಸುವ ಗ್ರಾನೈಟ್ ಕಲ್ಲುಗಳು ______ ಗೆ ಉದಾಹರಣೆಯಾಗಿದೆ.
8. ಗ್ರಾಫೈಟ್ ಶಿಲೆಯು ರೂಪಾಂತರ ಪ್ರಕ್ರಿಯೆಯಿಂದ ______ ಆಗಿ ಪರಿವರ್ತಿತವಾಗುತ್ತದೆ.
9. ಭೂಕಂಪ ಅಲೆಗಳ ಆರಂಭ ಸ್ಥಳ, ವೇಳೆ, ವೇಗ ಹಾಗೂ ದಿಕ್ಕನ್ನು ದಾಖಲಿಸುವ ಉಪಕರಣವನ್ನು _____ ಎನ್ನುವರು.
10. ಭಾರತದ ಸುಂದರ್‌ಬನ್ _______ ದ ಪ್ರಭಾವದಿಂದ ನಿರ್ಮಿತವಾದ ಭೂಸ್ವರೂಪವಾಗಿದೆ.

**ಉತ್ತರಗಳು:– 1) 'ಶಿಲಾಗೋಳ' / 'ಸಿಯಾಲ್' 2) ಕಾಲ್ಡೇರಾ 3) ಮೇಲ್ಮೈ ಅಲೆಗಳು 4) ಅಂತರ್ಜಲ 5) ಮಾರುತಗಳು 6) 4.6 ದಶಲಕ್ಷ ಕೋಟಿ 7) ಅಂತಸ್ಸರಣ ಶಿಲೆ 8) ವಜ್ರ 9) ಭೂಕಂಪಮಾಪಕ (Seismograph) 10) ನದಿಗಳ ಕೆಳಕಣಿವೆ ಪಾತ್ರ**

**II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಭೂಮಿಯ ಅಂತರಾಳದ ಮೂರು ಪ್ರಮುಖ ಪದರುಗಳನ್ನು ತಿಳಿಸಿ.**

ಭೂಮಿಯ ಅಂತರಾಳವನ್ನು 3 ಪ್ರಮುಖ ಪದರುಗಳೆಂದರೆ– ಭೂಕವಚ, ಮ್ಯಾಂಟಲ್ ಮತ್ತು ಕೇಂದ್ರ ಗೋಳ.

**i. ಭೂಕವಚ:** ಇದು ಭೂಮಿಯ ಅತ್ಯಂತ ಮೇಲ್ಭಾಗದ ಪದರವಾಗಿದೆ. ಇದು ಹೆಚ್ಚಾಗಿ ಸಿಲಿಕ, ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಂಗಳಿಂದ ಕೂಡಿದೆ. ಇದನ್ನು 'ಶಿಲಾಗೋಳ' ಎನ್ನುವರು.

**ii. ಮ್ಯಾಂಟಲ್ :** ಇದು ಭೂ ಮೇಲ್ಮೈನಿಂದ ಸುಮಾರು 2900 ಕಿ.ಮಿ.ಗಳ ಆಳದವರೆಗೆ ವಿಸ್ತರಿಸಿದೆ. ಇದರ ಮೇಲ್ಪದರದಲ್ಲಿನ ವಸ್ತಗಳು ಭಾಗಶಃ ದ್ರವ ಮತ್ತು ಘನ ಸ್ಥಿತಿಯಲ್ಲಿರುವುದರಿಂದ ಇದನ್ನು 'ಶಿಲಾಪಾಕ' (ಮ್ಯಾಗ್ಮಾ) ಎಂದು ಕರೆಯುವರು.

**iii. ಕೇಂದ್ರ ಗೋಳ(ಭೂ ತಿರುಳು):** ಇದು ಭೂಮಿಯ ಮೇಲ್ಮೈನಿಂದ 6,371 ಕಿ.ಮೀ ಆಳದವರೆಗೆ ಇರುವುದು. ಕೇಂದ್ರಗೋಳವು ಪ್ರಧಾನವಾಗಿ ನಿಕ್ಕಲ್ (Ni) ಮತ್ತು ಕಬ್ಬಿಣ (Fe) ಇರುವುದರಿಂದ 'ನಿಫೆ' ಎನ್ನುವರು.

**2. ಕಾರ್ಯಾಚರಣೆ ಆಧಾರದ ಮೇಲೆ ಜ್ವಾಲಾಮುಖಿಯ ವಿಧಗಳನ್ನು ಹೆಸರಿಸಿ.**

**i) ಜಾಗೃತ ಜ್ವಾಲಾಮುಖಿಗಳು:** ನಿರಂತರವಾಗಿ ಸ್ಫೋಟಗೊಂಡು ಲಾವಾರಸ, ಅನಿಲ, ಬೂದಿ ಇತ್ಯಾದಿಗಳನ್ನು ಹೊರಚಿಮ್ಮುವ ಜ್ವಾಲಾಮುಖಿಗಳಿಗೆ ಜಾಗೃತ ಜ್ವಾಲಾಮುಖಿಗಳು ಎನ್ನುವರು.

**ii) ಸುಪ್ತ ಜ್ವಾಲಾಮುಖಿಗಳು:** ಒಮ್ಮೆ ಸ್ಫೋಟಿಸಿ ಅನಂತರ ಬಹುಕಾಲ ಕಾರ್ಯಾಚರಣೆ ನಡೆಸದೆ ಸುಪ್ತವಾಗಿದ್ದು ಯಾವಾಗಲೋ ಒಮ್ಮೆ ಜಾಗೃತವಾಗಿ ಕಾರ್ಯಾಚರಣೆ ನಡೆಸುವ ಜ್ವಾಲಾಮುಖಿಗಳನ್ನು ಸುಪ್ತ ಜ್ವಾಲಾಮುಖಿ ಎನ್ನುವರು.

**iii) ಲುಪ್ತ ಜ್ವಾಲಾಮುಖಿಗಳು:** ಇವುಗಳು ಪುರಾತನ ಕಾಲದಲ್ಲಿ ಕಾರ್ಯಾಚರಣೆ ನಡೆಸಿದ್ದು ನಂತರದಲ್ಲಿ ಯಾವುದೇ ಕಾರ್ಯಾಚರಣೆ ನಡೆಸಿಲ್ಲ.

**3. ಪ್ರಪಂಚದ ಪ್ರಮುಖ ಭೂಕಂಪ ವಲಯಗಳನ್ನು ತಿಳಿಸಿ.**

- ಪೆಸಿಫಿಕ್ ಸಾಗರದ ಸುತ್ತಲಿನ ತೀರ ಪ್ರದೇಶ. ಇದು ನ್ಯೂಜಿಲ್ಯಾಂಡ್, ಫಿಲಿಫೈನ್ಸ್, ಕ್ಯೂರೈಲ್ ದ್ವೀಪಗಳು ಜಪಾನ್ ಅಮೆರಿಕ ಖಂಡಗಳ ಆಂಡೀಸ್, ಪೆರು, ಚಿಲಿ ಮೊದಲಾದವುಗಳನ್ನು ಒಳಗೊಂಡಿದೆ.
- ಮೆಡಿಟರೇನಿಯನ್ ಸಮುದ್ರದ ಸುತ್ತಲಿನ ತೀರ ಪ್ರದೇಶ.
- ಭಾರತದ ಹಿಮಾಲಯ ಪರ್ವತ ಪ್ರದೇಶ. (ಸಿವಾಲಿಕ್ ಪ್ರದೇಶ).

**4. ಶಿಥಿಲೀಕರಣ ಎಂದರೇನು? ಶಿಥಿಲೀಕರಣದ ಮೂರು ಮುಖ್ಯ ವಿಧಗಳನ್ನು ಹೆಸರಿಸಿ.**

ವಾಯುಗೋಲದಲ್ಲಿನ ಉಷ್ಣಾಂಶ, ಮಳೆ, ಗಾಳಿ ಮುಂತಾದವುಗಳಿಂದ ಶಿಲೆಗಳು ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಸ್ವಾಭಾವಿಕ ಪ್ರಕ್ರಿಯೆಯೇ ಶಿಥಿಲೀಕರಣ.

ಶಿಥಿಲೀಕರಣದ ವಿಧಗಳೆಂದರೆ:

1. ಭೌತಿಕ ಶಿಥಿಲೀಕರಣ:
2. ರಾಸಾಯನಿಕ ಶಿಥಿಲೀಕರಣ

ಎ) ಆಮ್ಲಜನಕ ಸಂಯೋಜನೆ (Oxidation):

ಬಿ) ಇಂಗಾಲದ ಸಂಯೋಜನೆ (Carbonation) :

ಸಿ) ಜಲಸಂಯೋಜನೆ (Hydration)

ಡಿ) ದ್ರಾವಣೀಕರಣ (Solution)

3. ಜೈವಿಕ ಶಿಥಿಲೀಕರಣ

**5. ಭೂನಗ್ನೀಕರಣದ ಕರ್ತೃವಾಗಿ ನದಿಗಳು ನಿರ್ಮಿಸುವ ಭೂಸ್ವರೂಪಗಳನ್ನು ಹೆಸರಿಸಿ.**

**ನದಿಗಳ ಮೇಲ್ಕಣಿವೆ** ಪಾತ್ರದಿಂದ ಆಳವಾದ ಕಂದರಗಳು,

- ಮಹಾಕಂದರ 'v' ಆಕಾರದ ಕಣಿವೆಗಳು,
- ಜಲಪಾತಗಳು, ಮತ್ತು
- ಕುಂಭಕಳಿಗಳು ಮೊದಲಾದ ಭೂಸ್ವರೂಪಗಳು ನಿರ್ಮಾಣವಾಗುತ್ತವೆ.

**ಮಧ್ಯಕಣಿವೆ** ಪಾತ್ರದಿಂದ ಮೆಕ್ಕಲು ಬೀಸಣಿಗೆ,

- ನದಿಯ ತಿರುವುಗಳು ಮೊದಲಾದವು.

**ಕೆಳಕಣಿವೆ ಪಾತ್ರದಲ್ಲಿ** ಪ್ರವಾಹ ಮೈದಾನ,

- ಸ್ವಾಭಾವಿಕ ದಡಕಟ್ಟೆ,
- ಶೃಂಗ ಸರೋವರ,
- ಮುಖಜಭೂಮಿ, ಮೊದಲಾದ ಭೂ ಸ್ವರೂಪಗಳು ನಿರ್ಮಿತವಾಗುತ್ತವೆ.

**6. ಭೂಕಂಪಗಳು ಉಂಟಾಗಲು ಕಾರಣಗಳು ಯಾವುವು?**

1) ಭೂರಚನಾ ಕಾರಣಗಳು :

1. ಜ್ವಾಲಾಮುಖಿ ಸ್ಫೋಟನೆಗಳು : ಜ್ವಾಲಾಮುಖಿಗಳಲ್ಲಿ ಅನಿಲಗಳ ಸ್ಫೋಟನೆಯಿಂದ ಭೂಕಂಪಗಳು ಉಂಟಾಗುತ್ತವೆ.
2. ಸ್ತರಭಂಗ: ಭೂಮಿಯ ಶಿಲಾಸ್ತರಗಳ ಮರುಹೊಂದಾಣಿಕೆಯಲ್ಲಿ ಅವುಗಳ ಸ್ಥಾನಪಲ್ಲಟ, ಭೂಕುಸಿತ ಇವುಗಳಿಂದ ಭೂಸ್ತರಗಳು ಮೇಲಕ್ಕೆ ಅಥವಾ ಕೆಳಮುಖವಾಗಿ ಜರುಗುವುದರಿಂದ ಉದ್ದವಾದ ಬಿರುಕುಗಳುಂಟಾಗುತ್ತವೆ. ಈ ರೀತಿ ಭೂಫಲಕಗಳು ಸ್ಥಾನಪಲ್ಲಟವಾಗುವುದರಿಂದ ಭೂಕಂಪಗಳುಂಟಾಗುತ್ತವೆ.

2) ಮಾನವ ನಿರ್ಮಿತ ಅಂಶಗಳು: ಗಣಿಗಾರಿಕೆ, ಬೃಹತ್ ಅಣೆಕಟ್ಟು ಮತ್ತು ಜಲಾಶಯಗಳ ನಿರ್ಮಾಣ ಮತ್ತು ಅಣುಪರೀಕ್ಷೆಗಳು ಇತ್ಯಾದಿ.

**III. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಸೈಮಾ | ಅ) ಭೂಕಂಪ |
| 2. ಮರಳುಗಲ್ಲು | ಆ) ಹಳದಿಮಣ್ಣು |
| 3. ಹೊರ ಕೇಂದ್ರ | ಇ) ಸಾಗರೀಕ ವಲಯದ ಮೇಲ್ಪದರು |
| 4. ಗೇಸರ್ | ಈ) ಕಣಶಿಲೆ |
| 5. ಲೋಯೆಸ್ | ಉ) ಅಂತರ್ಜಲ |

**ಉತ್ತರಗಳು:- 1- ಇ, 2- ಈ, 3- ಅ, 4- ಉ, 5- ಆ**

**IV. ಈ ಕೆಳಗಿನವುಗಳನ್ನು ಅರ್ಥೈಸಿ.**

1. **ಜಲಜಶಿಲೆಗಳು:-** ಸಾಮಾನ್ಯವಾಗಿ ಕಣಶಿಲೆಗಳು ಸಮುದ್ರ, ಸಾಗರ ಮೊದಲಾದ ಜಲರಾಶಿಗಳಲ್ಲಿ ಸಂಚಯಿತವಾಗಿ ನಿರ್ಮಿತವಾಗುವುದರಿಂದ ಇವುಗಳನ್ನು 'ಜಲಶಿಲೆ'ಗಳೆಂದೂ ಕರೆಯುವರು.
2. **ಪೆಸಿಫಿಕ್ ಅಗ್ನಿವೃತ್ತ:-** ಪೆಸಿಫಿಕ್ ಸಾಗರದ ಕರಾವಳಿಗಳಲ್ಲಿ ಅಂದರೆ ಫಿಲಿಫೈನ್ಸ್, ಜಪಾನ್, ಯುಎಸ್ಎ, ಮಧ್ಯ ಅಮೆರಿಕ, ದಕ್ಷಿಣ ಅಮೆರಿಕ ಇತ್ಯಾದಿಗಳಲ್ಲಿ ಜ್ವಾಲಾಮುಖಿಗಳಿವೆ.
3. **ಭೌತಿಕ ಶಿಥಿಲೀಕರಣ:** ಶಿಲೆಗಳು ಯಾವುದೇ ರಾಸಾಯನಿಕ ಬದಲಾವಣೆಯಾಗದೇ ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಕ್ರಿಯೆಯನ್ನು ಭೌತಿಕ ಶಿಥಿಲೀಕರಣವೆನ್ನುವರು.
4. **ಶಿಲಾನಿಚಯಗಳು:-** ಹಿಮನದಿಯು ಸಾಗಾಣಿಕೆ ಮತ್ತು ಸಂಚಯ ಕಾರ್ಯಗಳನ್ನು ಜೊತೆ ಜೊತೆಯಲ್ಲಿಯೇ ನಿರ್ವಹಿಸುವುದು. ಸಂಚಯ ಕಾರ್ಯದಿಂದ ನಿರ್ಮಿತವಾಗುವ ಮುಖ್ಯ ಸ್ವರೂಪಗಳೆಂದರೆ ಶಿಲಾನಿಚಯಗಳು. 'ಶಿಲಾನಿಚಯ'ಗಳು ಹಿಮೀಕರಣದ ಪ್ರದೇಶದಲ್ಲಿ ಕಂಡುಬರುವ ಅತಿ ಮುಖ್ಯ ಭೂ ಸ್ವರೂಪಗಳು.
5. **ಇಂಗಾಲಾಧಿಕ್ಯ ಶಿಲೆಗಳು:-** ಜೀವಾವಶೇಷಗಳಾದ ಜಲಚರಗಳ ಚಿಪ್ಪುಗಳು, ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಪಳೆಯುಳಿಕೆಗಳು ಮಣ್ಣಿನಲ್ಲಿ ಸೇರಿ ಗಟ್ಟಿಯಾಗಿ ಜೈವಿಕ ಕಣಶಿಲೆಗಳಾಗುತ್ತವೆ. ಜೈವಿಕ ಕ್ರಿಯೆಗಳಿಂದಾದ ಕಣಶಿಲೆಗಳಿಗೆ ಕಲ್ಲಿದ್ದಲು (ಇಂಗಾಲಾಧಿಕ್ಯಶಿಲೆ) ಉತ್ತಮ ಉದಾಹರಣೆಯಾಗಿದೆ.
6. **ಸುನಾಮಿ** : ಸಮುದ್ರ ಮತ್ತು ಸಾಗರ ತಳದಲ್ಲಿ ಉಂಟಾಗುವ ಭೂಕಂಪನಗಳಿಂದ ಸಾಗರಗಳಲ್ಲಿ ಅತಿ ಎತ್ತರವಾದ ದೈತ್ಯ ಅಲೆಗಳು ತೀರಕ್ಕೆ ಅಪ್ಪಳಿಸುತ್ತವೆ. ಇವುಗಳನ್ನು ಸುನಾಮಿ ಎಂದು ಕರೆಯುವರು
7. **ಖಂಡಾಂತರ ಹಿಮನದಿ** : ಧ್ರುವಪ್ರದೇಶಗಳಲ್ಲಿರುವ ವಿಸ್ತಾರವಾದ ಮಂಜುಗಡ್ಡೆಯ ಹಾಳೆಯನ್ನು ಖಂಡಾಂತರ ಹಿಮನದಿ ಎನ್ನುವರು. ಉದಾ: ಗ್ರೀನ್‌ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾ.
8. **ಬಿಸಿನೀರ ಚಿಲುಮೆ:-** ಪ್ರವೇಶ್ಯ ಶಿಲೆಗಳಲ್ಲಿ ಭರ್ತಿಯಾದ ನೀರು ಕೆಲವು ಸನ್ನಿವೇಶಗಳಲ್ಲಿ ಸ್ವಾಭಾವಿಕವಾಗಿ ಹೊರಬೀಳುವುದು. ಬಿಸಿನೀರಿನ ಚಿಲುಮೆಗಳಲ್ಲಿ ಬಿಸಿನೀರು ಹೊರಬೀಳುವುದು. ಇವು ಸಾಮಾನ್ಯವಾಗಿ ಜ್ವಾಲಾಮುಖಿ ಪ್ರದೇಶದಲ್ಲಿ ಕಂಡುಬರುತ್ತದೆ.

# ಅರ್ಥಶಾಸ್ತ್ರ

## ಅಧ್ಯಾಯ -1

## ಅರ್ಥಶಾಸ್ತ್ರ ಪರಿಚಯ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿಮಾಡಿ.**

1. 'ಅರ್ಥಶಾಸ್ತ್ರ' ಎಂಬ ಪದವು ಗ್ರೀಕ್ ಮೂಲ ಪದಗಳಾದ ________ ಮತ್ತು ______ಬಂದಿದೆ.
2. ________ ನೀಡುವ ಚಟುವಟಿಕೆಗಳನ್ನು ಮಾತ್ರ ಆರ್ಥಿಕ ಚಟುವಟಿಕೆ ಎಂದು ಕರೆಯುತ್ತೇವೆ.
3. ಸೂಕ್ಷ್ಮ ಅರ್ಥಶಾಸ್ತ್ರವು ________ ಘಟಕಗಳ ಅಧ್ಯಯನವಾಗಿದೆ.

4. ವಿಶಾಲಾತ್ಮಕ ಅರ್ಥಶಾಸ್ತ್ರವು ________ ಘಟಕಗಳ ಅಧ್ಯಯನವಾಗಿದೆ.

5. ಸರಕಾರವು ತಾನು ಒದಗಿಸುವ ಸರಕುಗಳಿಗೆ ಮತ್ತು ಸೇವೆಗಳಿಗೆ ________ ಗಳನ್ನು ವಿಧಿಸುತ್ತದೆ.

6. ನಮ್ಮ ಬಯಕೆಗಳನ್ನು ಹೆಚ್ಚು ಅಥವಾ ಕಡಿಮೆ ಮಹತ್ವದ್ದು ಎಂದು ವರ್ಗೀಕರಿಸುವುದನ್ನು ________ ನೀಡುವುದು ಎನ್ನುತ್ತೇವೆ.

7. ನಮಗೆ ಸರಕು ಸೇವೆಗಳನ್ನು ಕೊಳ್ಳಲು ಬೇಕಾದ ಹಣವು ಮಿತವಾಗಿರುವುದನ್ನು ________ ಎನ್ನುತ್ತೇವೆ.

8. ಅಗೋಚರವಾದ ವಿದ್ಯುಚ್ಛಕ್ತಿ, ಸಾರಿಗೆ, ಶಿಕ್ಷಣ, ವೈದ್ಯಕೀಯ, ಹೊಲಿಗೆ, ಸಂಗೀತ ಇವುಗಳನ್ನು ________ ಎನ್ನುವರು.

**ಉತ್ತರಗಳು:– 1) 'ಓಕೋಸ್' ಮತ್ತು 'ನೊಮೊಸ್' 2) ಹಣ/ ಲಾಭ/ ಸಂಪತ್ತು 3) ಚಿಕ್ಕ/ ಸೂಕ್ಷ್ಮ 4) ಒಟ್ಟು/ ದೊಡ್ಡ 5) 'ತೆರಿಗೆ' 6) 'ಆದ್ಯತೆ' 7) 'ಕೊರತೆ' 8) ಸೇವೆಗಳು**

## II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

**1. ಅರ್ಥಶಾಸ್ತ್ರ ಎಂದರೇನು?**

ಅರ್ಥಶಾಸ್ತ್ರವೆಂದರೇ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುವ ವಿಷಯ ಅಥವಾ ಉತ್ಪಾದನೆ, ವಿತರಣೆ ಮತ್ತು ಸರಕು–ಸೇವೆಗಳ ಬಳಕೆ ಕುರಿತು ಅಭ್ಯಸಿಸುವ ವಿಜ್ಞಾನ.

**2. ಕೊರತೆಯನ್ನು ವ್ಯಾಖ್ಯಾನಿಸಿ.**

ತಾನು ಬಯಸುವ ಎಲ್ಲ ಸರಕು ಮತ್ತು ಸೇವೆಗಳನ್ನು ಮನುಷ್ಯ ಹೊಂದಲು ಸಾಧ್ಯವಿಲ್ಲದ ಸ್ಥಿತಿ ಅಥವಾ ಅವುಗಳನ್ನು ಕೊಳ್ಳಲು ಬೇಕಾದ ಹಣವು ಮಿತವಾಗಿರುವ ಸ್ಥಿತಿಯೇ **"ಕೊರತೆ"** ಎನ್ನಬಹುದು.

**3. ವಿವಿಧ ಆರ್ಥಿಕ ಚಟುವಟಿಕೆಗಳನ್ನು ಪಟ್ಟಿ ಮಾಡಿ.**

ಆರ್ಥಿಕ ಚಟುವಟಿಕೆಗಳನ್ನು ನಾಲ್ಕು ವಿಧಗಳಲ್ಲಿ ವರ್ಗೀಕರಿಸಬಹುದು.

**i. ಉತ್ಪಾದನೆ, ii. ಅನುಭೋಗ, iii. ವಿನಿಮಯ, iv. ಹಂಚಿಕೆ.**

**4. ನೀವು ಒಂದು ಪೆನ್ನು ಖರೀದಿ ಮಾಡಿದಾಗ, ಅರ್ಥಶಾಸ್ತ್ರದ ಯಾವ ಶಾಖೆಯು ನಿಮ್ಮ ನಿರ್ಣಯವನ್ನು ವಿಶ್ಲೇಷಿಸುತ್ತದೆ?**

ಇಂತಹ ವೈಯಕ್ತಿಕ ನಿರ್ಧಾರಗಳನ್ನು ಸೂಕ್ಷ್ಮ ಅರ್ಥಶಾಸ್ತ್ರ ಶಾಖೆಯು ವಿಶ್ಲೇಷಿಸುತ್ತದೆ.

**5. ಸೂಕ್ಷ್ಮ ಅರ್ಥಶಾಸ್ತ್ರ ಎಂದರೇನು?**

ಸೂಕ್ಷ್ಮ (ಮೈಕ್ರೋ) ಎಂದರೆ ಅತ್ಯಂತ ಚಿಕ್ಕದು ಎಂದಾಗುತ್ತದೆ. ಸೂಕ್ಷ್ಮ ಅರ್ಥಶಾಸ್ತ್ರವು ಅತ್ಯಂತ ಚಿಕ್ಕ ಘಟಕಗಳ ಅಂದರೇ ಸಮಾಜದ ಅತಿ ಚಿಕ್ಕ ಘಟಕಗಳಾದಂತಹ ವ್ಯಕ್ತಿಗಳು, ಕುಟುಂಬಗಳು ಮತ್ತು ವ್ಯವಹಾರ ಸಂಸ್ಥೆಗಳ ಸಂಪನ್ಮೂಲಗಳ ಉಪಯೋಗದ ನಿರ್ಧಾರ ಕೈಗೊಳ್ಳುವಿಕೆಯಂತಹ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುತ್ತದೆ.

## III. ಕೆಳಗಿನ ಪ್ರತಿಯೊಂದನ್ನು 3–4 ವಾಕ್ಯಗಳಲ್ಲಿ ಉತ್ತರಿಸಿ

**1. ಆರ್ಥಿಕ ಚಟುವಟಿಕೆಗಳು ಯಾವುವು?**

ಈ ಆರ್ಥಿಕ ಚಟುವಟಿಕೆಗಳು ನಾಲ್ಕು–

**i. ಉತ್ಪಾದನೆ:** ಸರಕುಗಳು ಮತ್ತು ಸೇವೆಗಳನ್ನು ಉತ್ಪಾದಿಸುವ ಕಾರ್ಯಗಳು ಉತ್ಪಾದಕ ಚಟುವಟಿಕೆಗಳು.

**ii. ಅನುಭೋಗ:** ಮಾನವನು ತನ್ನ ಬಯಕೆಗಳನ್ನು ತೃಪ್ತಿಪಡಿಸಲು ಸರಕುಗಳನ್ನು ಮತ್ತು ಸೇವೆಗಳನ್ನು ಕೊಳ್ಳುವುದು ಅನುಭೋಗ.

**iii. ವಿನಿಮಯ:** ಉತ್ಪಾದಕರು ಉತ್ಪಾದಿಸಿದ ಸರಕು ಮತ್ತು ಸೇವೆಗಳನ್ನು ಅನುಭೋಗಿಗಳಿಗೆ ತಲುಪಿಸಲು ವ್ಯವಸ್ಥೆಯಲ್ಲಿ ಸರಕುಗಳ ಸಂಗ್ರಹ, ಸಾರಿಗೆ, ಮಾರಾಟ ಮತ್ತು ಕೊಳ್ಳುವಿಕೆ ಕಾರ್ಯಗಳು ಇರುತ್ತವೆ.

**iv. ಹಂಚಿಕೆ:** ಸೃಷ್ಟಿಯಾದ ಆದಾಯವನ್ನು ಎಲ್ಲ ಉತ್ಪಾದನಾಂಗಗಳಿಗೆ ಯೋಗ್ಯ ರೀತಿಯಲ್ಲಿ ಹಂಚಲು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

**2. ನಾವು ಅರ್ಥಶಾಸ್ತ್ರದ ಅಧ್ಯಯನವನ್ನು ಏಕೆ ಮಾಡಬೇಕು?**

- ಅಪರಿಮಿತ ಬಯಕೆಗಳ ಸನ್ನಿವೇಶದಲ್ಲಿ ಆದ್ಯತೆ ನೀಡಿ ಅವುಗಳಲ್ಲಿ ಯಾವುದು ಅಧಿಕ ಮಹತ್ವವಾದದ್ದು, ಮತ್ತು ಯಾವುದು ಕಡಿಮೆ ಮಹತ್ವವಾದುದು ಎಂದು ತೀರ್ಮಾನಿಸಲು ಅರ್ಥಶಾಸ್ತ್ರದ ಅಧ್ಯಯನ ಮಾಡಬೇಕು.
- ಸಂಪನ್ಮೂಲಗಳ ಉಪಯೋಗದಲ್ಲಿ ಮಿತವ್ಯಯ (ಉಳಿತಾಯ) ಮಾಡುವುದು ಮತ್ತು ದಕ್ಷ ಉಪಯೋಗಿಸಲು.
- ಪ್ರತಿ ವ್ಯಕ್ತಿಯು ತನ್ನ ಕುಟುಂಬ ಮತ್ತು ರಾಷ್ಟ್ರದ ಏಳ್ಗೆಗಾಗಿ ಅರ್ಥಿಕ ಚಟುವಟಿಕೆಯಲ್ಲಿ ತೊಡಗುವುದು;
- ಸರ್ಕಾರದ ಆದಾಯಕ್ಕೆ ಕೊಡುಗೆಯನ್ನು ನೀಡುವುದು ಮತ್ತು ಅದಕ್ಕೆ ಅಭಿವೃದ್ಧಿಪರ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡುವುದು;
- ರಾಷ್ಟ್ರದಲ್ಲಿನ ಸಾಮಾಜಿಕ–ಆರ್ಥಿಕ ಸಮಸ್ಯೆಗಳಾದಂತಹ ಬಡತನ, ನಿರುದ್ಯೋಗ, ಹಣದುಬ್ಬರ, ಮುಂತಾದವುಗಳನ್ನು ತಿಳಿಯಲು ಮತ್ತು ಅವುಗಳಿಗೆ ಪರಿಹಾರವನ್ನು ಒದಗಿಸಲು ಪ್ರಯತ್ನಿಸಲು;
- ರಾಷ್ಟ್ರದ ನಿರೀಕ್ಷಿತ ಪ್ರಗತಿ ಮತ್ತು ಅಭಿವೃದ್ಧಿಗೆ ಉತ್ತಮ ನೀತಿಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಉತ್ತಮ ಮಾರ್ಗಗಳನ್ನು ಸೂಚಿಸಲು.

**3. ಮೂಲ ಆರ್ಥಿಕ ಸಮಸ್ಯೆಗಳು ಯಾವುವು?**

ಅರ್ಥಶಾಸ್ತ್ರದಲ್ಲಿ ಸಮಸ್ಯೆಗಳು ಸಂಪನ್ಮೂಲಗಳ ಕೊರತೆಯಿಂದ ಉಂಟಾಗುತ್ತವೆ. ಅವುಗಳೆಂದರೆ–

1. **ಏನನ್ನು ಉತ್ಪಾದಿಸಬೇಕು?** ಒಬ್ಬ ವ್ಯಕ್ತಿ ಅಥವಾ ಒಂದು ಸಮಾಜವು ಯಾವ ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸಬೇಕು.
2. **ಹೇಗೆ ಉತ್ಪಾದಿಸಬೇಕು?** ಸರಕು, ಸೇವೆಯನ್ನು ಉತ್ಪಾದಿಸಲು ಶ್ರಮದ ಹೆಚ್ಚಿನ ಬಳಕೆಯ ತಂತ್ರಜ್ಞಾನ ಅಥವಾ ಬಂಡವಾಳದ ಹೆಚ್ಚಿನ ಬಳಕೆಯ ತಂತ್ರಜ್ಞಾನಗಳಲ್ಲಿ ಯಾವುದನ್ನು ಉಪಯೋಗಿಸಬೇಕು.
3. **ಯಾರಿಗಾಗಿ ಉತ್ಪಾದಿಸಬೇಕು?** ಉತ್ಪಾದಿಸಿದ ಸರಕುಗಳನ್ನು ಯಾರು ಪಡೆಯುತ್ತಾರೆ ಮತ್ತು ಯಾವ ಪ್ರಮಾಣದಲ್ಲಿ ಪಡೆಯುತ್ತಾರೆ?

**4. ಸೂಕ್ಷ್ಮ ಮತ್ತು ವಿಶಾಲಾತ್ಮಕ ಅರ್ಥಶಾಸ್ತ್ರಗಳ ನಡುವಿನ ವ್ಯತ್ಯಾಸ ತಿಳಿಸಿರಿ.**

| ಸೂಕ್ಷ್ಮ ಅರ್ಥಶಾಸ್ತ್ರ | ವಿಶಾಲಾತ್ಮಕ ಅರ್ಥಶಾಸ್ತ್ರ |
|---|---|

| | |
|---|---|
| 1. ಸೂಕ್ಷ್ಮ (ಮೈಕ್ರೋ) ಎಂದರೆ ಅತ್ಯಂತ ಚಿಕ್ಕದು ಎಂದಾಗುತ್ತದೆ.<br>2. ಸೂಕ್ಷ್ಮ ಅರ್ಥಶಾಸ್ತ್ರವು ಅತ್ಯಂತ ಚಿಕ್ಕ ಘಟಕಗಳ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುತ್ತದೆ.<br>3. ಇದು ಸರಕುಗಳನ್ನು ಮತ್ತು ಸೇವೆಗಳನ್ನು ಉಪಯೋಗಿಸುವ ಕುರಿತಾದ ನಿರ್ಣಯಗಳನ್ನು ಕೈಗೊಳ್ಳುವುದನ್ನು ಒಳಗೊಂಡಿದೆ.<br>4. ವ್ಯಕ್ತಿಗಳು, ಕುಟುಂಬಗಳು ಮತ್ತು ವ್ಯವಹಾರ ಸಂಸ್ಥೆಗಳ ಸಂಪನ್ಮೂಲಗಳ ಉಪಯೋಗದ ನಿರ್ಧಾರ ಕೈಗೊಳ್ಳುವಿಕೆಯ ಅಧ್ಯಯನವನ್ನು ಸೂಕ್ಷ್ಮ ಅರ್ಥಶಾಸ್ತ್ರ ಮಾಡುತ್ತದೆ.<br>5. ವ್ಯಕ್ತಿಯ ಅನುಭೋಗ, ಆದಾಯ, ವೆಚ್ಚ ವಿವರಿಸುತ್ತದೆ. | 1. ವಿಶಾಲಾತ್ಮಕ (ಮ್ಯಾಕ್ರೋ) ಎಂಬುದು ಒಟ್ಟು ಅಥವಾ ದೊಡ್ಡದು ಎಂದರ್ಥವಾಗುತ್ತದೆ.<br>2. ಇದು ಬೃಹತ್ ಘಟಕಗಳ ಆರ್ಥಿಕ ಚಟುವಟಿಕೆಗಳ ಅಧ್ಯಯನವನ್ನು ಮಾಡುತ್ತದೆ.<br>3. ಇದು ಇಡೀ ಆರ್ಥಿಕ ವ್ಯವಸ್ಥೆಯ ಮಟ್ಟದಲ್ಲಿ ಆರ್ಥಿಕ ನಿರ್ಧಾರಗಳು ಕೈಗೊಳ್ಳುವುದನ್ನು ಒಳಗೊಂಡಿದೆ.<br>4. ದೇಶ, ಸಮಾಜದ ತೆರಿಗೆಗಳ ಸಂಗ್ರಹ, ಸಾರ್ವಜನಿಕ ಸರಕುಗಳು ಹಾಗೂ ಕಲ್ಯಾಣ ಪರ ಚಟುವಟಿಕೆಗಳ ಮೇಲಿನ ವೆಚ್ಚ, ಹಣದುಬ್ಬರದ ನಿಯಂತ್ರಣ, ಆರ್ಥಿಕ ಪ್ರಗತಿಗೆ ಉತ್ತೇಜನ, ಇತ್ಯಾದಿಗಳು ವಿಶಾಲಾತ್ಮಕ ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ಬರುತ್ತವೆ.<br>5. ರಾಷ್ಟ್ರೀಯ ಆದಾಯ, ರಾಷ್ಟ್ರದ ಒಟ್ಟು ಅನುಭೋಗಿ ವೆಚ್ಚ, ಇತ್ಯಾದಿಗಳನ್ನು ವಿವರಿಸುತ್ತದೆ. |

**5. ಸರ್ಕಾರವು ಯಾವ ಪ್ರಮುಖ ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ?**

ಇಡೀ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಉಂಟು ಮಾಡುವಂತಹ ಆರ್ಥಿಕ ನಿರ್ಧಾರಗಳಾದಂತಹ ತೆರಿಗೆಗಳ ಸಂಗ್ರಹ, ಸಾರ್ವಜನಿಕ ಸರಕುಗಳು ಹಾಗೂ ಕಲ್ಯಾಣ ಪರ ಚಟುವಟಿಕೆಗಳ ಮೇಲಿನ ವೆಚ್ಚ, ಹಣದುಬ್ಬರದ ನಿಯಂತ್ರಣ, ಆರ್ಥಿಕ ಪ್ರಗತಿಗೆ ಉತ್ತೇಜನ, ಇತ್ಯಾದಿಗಳು ವಿಶಾಲಾತ್ಮಕ ಅರ್ಥಶಾಸ್ತ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಸಾಮಾನ್ಯವಾಗಿ ಅಂತಹ ನಿರ್ಧಾರಗಳನ್ನು ಸಮಾಜ ಅಥವಾ ದೇಶದ ಹಿತದೃಷ್ಟಿಯಿಂದ ಸರ್ಕಾರವು ತೆಗೆದುಕೊಳ್ಳುತ್ತದೆ.

## ಅಧ್ಯಾಯ –2

## ಅರ್ಥವ್ಯವಸ್ಥೆಯ ಅರ್ಥ ಮತ್ತು ಪ್ರಕಾರಗಳು

### I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಅರ್ಥವ್ಯವಸ್ಥೆಯು __________ ಸಂಘಟನೆಯ ಸ್ವರೂಪಕ್ಕೆ ಸಂಬಂಧಿಸಿದೆ.
2. ನೀತಿ ಆಯೋಗವನ್ನು __________ ರಲ್ಲಿ ರಚಿಸಲಾಗಿದೆ.
3. ಮುಕ್ತ ಉದ್ಯಮವು __________ ಅರ್ಥವ್ಯವಸ್ಥೆಯ ಮುಖ್ಯ ಲಕ್ಷಣವಾಗಿದೆ.
4. ಬಂಡವಾಳಶಾಹಿ ಅರ್ಥವ್ಯವಸ್ಥೆಗೆ __________ ಉತ್ತಮ ಉದಾಹರಣೆಯಾಗಿದೆ.
5. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹ ಅಸ್ತಿತ್ವವನ್ನು __________ ದಲ್ಲಿ ಕಾಣಬಹುದು.
6. ನಾವೆಲ್ಲರೂ ಅನುಭೋಗಿಗಳೇ, ಆದರೆ ನಮ್ಮಲ್ಲಿ ಕೆಲವರು __________ ರೂ ಇದ್ದಾರೆ.
7. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ __________ ವಲಯದ ಚಟುವಟಿಕೆಗಳು ಪ್ರಮುಖವಾಗಿ ಕಂಡುಬರುತ್ತವೆ

**ಉತ್ತರಗಳು:– 1) ಸಮಾಜದಲ್ಲಿನ ಆರ್ಥಿಕ ಚಟುವಟಿಕೆಗಳ 2) 2015 3) ಬಂಡವಾಳಶಾಹಿ 4) ಅಮೇರಿಕಾ ಮತ್ತು ಇತರೆ ಯುರೋಪ್ ದೇಶಗಳು 5) ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ 6) ಉತ್ಪಾದಕ 7) ಪ್ರಾಥಮಿಕ (ಸಂಪನ್ಮೂಲ ಆಧಾರಿತ) 8)**

### II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.

**1. ಅರ್ಥವ್ಯವಸ್ಥೆ ಎಂದರೇನು?**

ಮಾನವನ ಬಯಕೆಗಳನ್ನು ಈಡೇರಿಸಲು ರಚಿಸಿದ ಮಾನವ ನಿರ್ಮಿತ ಒಂದು ಸಂಘಟನೆ ಎಂದು ಅರ್ಥವ್ಯವಸೆಯನ್ನು ವಿವರಿಸಬಹುದು.

ವ್ಯಕ್ತಿಯ ಮತ್ತು ಸಮಾಜದ ಯೋಗಕ್ಷೇಮವನ್ನು ಹೆಚ್ಚಿಸುವ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲಾಗುವ ಆರ್ಥಿಕ ಸಂಸ್ಥೆಗಳ ಚೌಕಟ್ಟನ್ನು ಅರ್ಥವ್ಯವಸ್ಥೆ ಎಂದು ವ್ಯಾಖ್ಯಾನಿಸಬಹುದು.

**2. ಬಂಡವಾಳಶಾಹಿ ಅರ್ಥವ್ಯವಸ್ಥೆಯ ಲಕ್ಷಣಗಳನ್ನು ತಿಳಿಸಿರಿ.**

- **ಖಾಸಗಿ ಆಸ್ತಿ:** ಇಲ್ಲಿ ವ್ಯಕ್ತಿಗಳು ಅವರ ಇಚ್ಛೆಯ ಮೇರೆಗೆ ಆಸ್ತಿಯನ್ನು ಹೊಂದಲು, ಗಳಿಸಲು ಮತ್ತು ಮರಣದ ನಂತರ ಆಸ್ತಿಯನ್ನು ಬಿಟ್ಟು ಕೊಡಲು ಸ್ವತಂತ್ರರಾಗಿರುತ್ತಾರೆ.
- **ಉದ್ಯಮದ ಸ್ವಾತಂತ್ರ:** ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಯಾವುದೇ ಉದ್ಯೋಗ ಆಯ್ದುಕೊಳ್ಳಬಹುದಾಗಿದೆ.
- **ಅನುಭೋಗಿಯ ಸಾರ್ವಭೌಮತ್ವ:** ತಮಗೆ ಗರಿಷ್ಠ ತೃಪ್ತಿ ನೀಡುವ ಸರಕುಗಳು ಮತ್ತು ಸೇವೆಗಳ ಮೇಲೆ ವೆಚ್ಚ ಮಾಡಲು ಅವರು ಸ್ವತಂತ್ರರಿರುವರು.
- **ಲಾಭದ ಉದ್ದೇಶ:** ಉತ್ಪಾದಕರು ಕನಿಷ್ಠ ವೆಚ್ಚ ಮಾಡಿ ಗರಿಷ್ಠ ಆದಾಯ ಹಾಗೂ ಗರಿಷ್ಠ ಲಾಭ ಹೊಂದಲು ಪ್ರಯತ್ನಿಸುತ್ತಾರೆ.
- **ತೀವ್ರ ಪೈಪೋಟಿ ಇದ್ದು ಬೆಲೆ ನಿರ್ಧಾರದಲ್ಲಿ ಮಾರುಕಟ್ಟೆ** ಶಕ್ತಿಗಳಾದ ಬೇಡಿಕೆ ಮತ್ತು ಪೂರೈಕೆಗಳು ಮುಕ್ತವಾಗಿ ಕಾರ್ಯನಿರ್ವಹಿಸುತ್ತವೆ.
- **ಇಲ್ಲಿ ಸರ್ಕಾರದ ಹಸ್ತಕ್ಷೇಪ ಇರುವುದೇ ಇಲ್ಲ ಅಥವಾ ಅತಿ ಕಡಿಮೆ ಪ್ರಮಾಣದಲ್ಲಿರುತ್ತದೆ.**

**3. ಬಂಡವಾಳಶಾಹಿ ವ್ಯವಸ್ಥೆಯ ದೋಷಗಳು ಯಾವುವು?**

- ರಾಷ್ಟ್ರೀಯ ಆದಾಯದ ಅಸಮಾನ ಹಂಚಿಕೆ.
- ಉದ್ಯೋಗ ಒದಗಿಸುವಿಕೆಯಲ್ಲಿ ಏರಿಳಿತ.
- ವರ್ಗ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತದೆ.
- ಬೌದ್ಧಿಕ ಸಂಪತ್ತಿನ ಉಪಯೋಗಿಸದೇ ನಾಶ.
- ಹೆಚ್ಚಿನ ಪ್ರಚಾರದಿಂದಾಗಿ ಸರಕು ಸೇವೆಗಳ ಬೆಲೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ.
- ಸಮಾಜದ ಅನೇಕರಲ್ಲಿ ಮೂಲ ಸೌಕರ್ಯಗಳ ಕೊರತೆ.
- ಸಮಾಜ ಘಾತುಕ ಶಕ್ತಿಗಳು ಪ್ರಬಲಗೊಳ್ಳಬಹುದು.
- ಪ್ರಜಾಪ್ರಭುತ್ವ ವಿರೋಧಿಯಾಗಿದೆ.
- ಪರಿಸರ ಮಾಲಿನ್ಯಕ್ಕೆ ಕಾರಣವಾಗುವುದು.
- ನಿರಂಕುಶಪ್ರಭುತ್ವ ಉದಯಕ್ಕೆ ಅವಕಾಶ, ಯುದ್ಧ ಇತ್ಯಾದಿ.

**4. ಯೋಜನೆ ಎಂದರೇನು?**

ಅರ್ಥ ವ್ಯವಸ್ಥೆಯ ಅಭಿವೃದ್ಧಿಗಾಗಿ ಸರ್ಕಾರವು ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಪಾತ್ರಗಳನ್ನು ನಿರ್ಧರಿಸಲು ಮತ್ತು ದೇಶದಲ್ಲಿ ಅಭಿವೃದ್ಧಿಪರ ಕಾರ್ಯಕ್ರಮ ರೂಪಿಸಲು ಅನುಸರಿಸುವ ಕ್ರಮವೇ ಯೋಜನೆ ಎನ್ನಬಹುದು.

**5. ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಆರ್ಥಿಕ ವ್ಯವಸ್ಥೆಗಳನ್ನು ಹೇಗೆ ವಿಂಗಡಿಸಲಾಗುತ್ತದೆ?**

ಅಭಿವೃದ್ಧಿ ಮಟ್ಟದ ಆಧಾರದ ಮೇಲೆ ಅಂದರೆ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳನ್ನು ಆಧರಿಸಿ ಆರ್ಥಿಕ ವ್ಯವಸ್ಥೆಗಳನ್ನು ಎರಡು ವರ್ಗಗಳಲ್ಲಿ ವಿಂಗಡಿಸಲಾಗಿದೆ. ಅವುಗಳು

1) ಅಭಿವೃದ್ಧಿ ಹೊಂದಿದ ಅರ್ಥವ್ಯವಸ್ಥೆ :- ಸದೃಢವಾದ ಹಣಕಾಸು ಮತ್ತು ಬಂಡವಾಳ ಮಾರುಕಟ್ಟೆಗಳನ್ನು ಒಳಗೊಂಡಂತೆ ಅಭಿವೃದ್ಧಿ ಹೊಂದಿದ ಕೈಗಾರಿಕೆ ಮತ್ತು ಸಾಮಾಜಿಕ ಮೂಲಸೌಕರ್ಯಗಳನ್ನು ಹೊಂದಿರುತ್ತವೆ.

2) ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ:- ಕಡಿಮೆ ಜೀವನಮಟ್ಟ, ಅನಾರೋಗ್ಯ ಮತ್ತು ಅನ್ಯೆರ್ಮಲ್ಯತೆ, ಅಧಿಕ ಪ್ರಮಾಣದ ಶಿಶು ಮರಣ, ಅಧಿಕ ಜನನ ಮತ್ತು ಮರಣ ದರಗಳು ಮತ್ತು ದುರ್ಬಲ ಮೂಲಸೌಕರ್ಯಗಳಿಂದ ಬಾಧಿತವಾಗಿವೆ.

**6. ಮಿಶ್ರ ಅರ್ಥವ್ಯವಸ್ಥೆಯಲ್ಲಿ ಖಾಸಗಿ ವಲಯದ ಚಟುವಟಿಕೆಗಳನ್ನು ಸರ್ಕಾರವು ಹೇಗೆ ನಿಯಂತ್ರಿಸುತ್ತದೆ?**

1) ಸರ್ಕಾರವು ಆರ್ಥಿಕ ಯೋಜನೆಯ ಮೂಲಕ ಖಾಸಗಿ ಮತ್ತು ಸಾರ್ವಜನಿಕ ವಲಯಗಳ ಪಾತ್ರಗಳನ್ನು ನಿಯಂತ್ರಿಸಿ ನಿರ್ಧರಿಸುತ್ತದೆ. ಉತ್ಪಾದನೆಯ ಗುರಿಗಳಿಗೆ ಮತ್ತು ಯೋಜನೆಗಳ ಅನುಗುಣವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುತ್ತದೆ.

2) ಖಾಸಗಿ ವಲಯವನ್ನು ನಿಯಂತ್ರಿಸಲು ಹಲವಾರು ನೀತಿಗಳು ಮತ್ತು ನಿಯಮಗಳು ಸರ್ಕಾರ ಜಾರಿಗೆ ತಂದಿದೆ.

3) ಭಾರತ ಸರ್ಕಾರವು ಜಾರಿಗೊಳಿಸಿದ 1948 ಮತ್ತು 1956ರ ಕೈಗಾರಿಕೆ ನೀತಿಗಳು ಸಾರ್ವಜನಿಕ ವಲಯದ ವಿಸ್ತೃತ ಪಾತ್ರದೊಂದಿಗೆ ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಅಸ್ತಿತ್ವಕ್ಕೆ ಅವಕಾಶವನ್ನು ಮಾಡಿದೆ.

4) ಸಾರ್ವಜನಿಕ ವಲಯದ ಉದ್ದಿಮೆಗಳ ಸರಕು ಅಥವಾ ಸೇವೆಗಳ ಬೆಲೆಯನ್ನು ಸರ್ಕಾರವೇ ನಿರ್ಧರಿಸುತ್ತಿದೆ.

5) ಮಿಶ್ರ ಅರ್ಥವ್ಯವಸ್ಥೆಯಲ್ಲಿ ಮೂಲ ಮತ್ತು ಭಾರೀ ಕೈಗಾರಿಕೆಗಳನ್ನು ಖಾಸಗಿ ವಲಯಕ್ಕೆ ಕೊಡದೆ ಸಾರ್ವಜನಿಕ ವಲಯದಲ್ಲಿ ಇರುತ್ತದೆ.

6) ಖಾಸಗಿ ವಲಯದ ಚಟುವಟಿಕೆಗಳನ್ನು ಲೈಸೆನ್ಸ್, ತೆರಿಗೆ, ಬೆಲೆ, ಹಣಕಾಸು ಮತ್ತು ವಿತ್ತ ನೀತಿಗಳ ಮೂಲಕ ನಿಯಂತ್ರಣಕ್ಕೆ ಒಳಪಡಿಸುತ್ತದೆ.

**7. ಹೂಡಿಕೆ ಹಿಂತೆಗೆತ ಎಂದರೇನು?**

ಸರ್ಕಾರವು ಸಾರ್ವಜನಿಕ ಉದ್ದಿಮೆಗಳಲ್ಲಿನ ತನ್ನ ಷೇರುಗಳನ್ನು ಖಾಸಗಿಯವರಿಗೆ ಮಾರುವುದನ್ನು ಬಂಡವಾಳ ಹಿಂತೆಗೆತ ಎನ್ನುತ್ತಾರೆ.

**8. ಭಾರತವನ್ನು ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ ಎಂದು ಏಕೆ ಪರಿಗಣಿಸಲಾಗಿದೆ?**

1) ಈ ರಾಷ್ಟ್ರಗಳ ರಾಷ್ಟ್ರೀಯ ಮತ್ತು ತಲಾ ಆದಾಯಗಳು ಕಡಿಮೆ ಇರುತ್ತದೆ.

2) ಅವುಗಳು ಕಡಿಮೆ ಉಳಿತಾಯ, ಹೂಡಿಕೆ ಮತ್ತು ಬಂಡವಾಳ ನಿರ್ಮಾಣದೊಂದಿಗೆ ಹಿಂದುಳಿದ ಕೃಷಿ ಮತ್ತು ಕೈಗಾರಿಕೆ ವಲಯಗಳನ್ನು ಹೊಂದಿರುತ್ತವೆ.

3) ಈ ರಾಷ್ಟ್ರಗಳು ಸಾಮಾನ್ಯವಾಗಿ ಪ್ರಾಥಮಿಕ ಕೃಷಿ ಮತ್ತು ನೈಸರ್ಗಿಕ ಸಂಪನ್ಮೂಲ ಆಧಾರಿತ ವಸ್ತುಗಳನ್ನು ರಫ್ತು ಮಾಡುತ್ತವೆ.

4) ಅವು ಕಡಿಮೆ ಜೀವನಮಟ್ಟ, ಅನಾರೋಗ್ಯ ಮತ್ತು ಅನ್ಯೆರ್ಮಲ್ಯತೆ, ಅಧಿಕ ಪ್ರಮಾಣದ ಶಿಶು ಮರಣ, ಅಧಿಕ ಜನನ ಮರಣ ದರಗಳು ಮತ್ತು ದುರ್ಬಲ ಮೂಲಸೌಕರ್ಯಗಳಿಂದ ಬಾಧಿತವಾಗಿವೆ.

ಆರ್ಥಿಕ ಯೋಜನೆಯ ಸಲುವಾಗಿ ಇತ್ತೀಚೆಗೆ ಭಾರತವು ಅಭಿವೃದ್ಧಿಯತ್ತ ಸಾಗುತ್ತಿದೆ ಆದ ಕಾರಣ ಭಾರತವನ್ನು ಅಭಿವೃದ್ಧಿ ಹೊಂದುತ್ತಿರುವ ಅರ್ಥವ್ಯವಸ್ಥೆ ಎಂದು ಪರಿಗಣಿಸಲಾಗಿದೆ.

**9. ಅರ್ಥವ್ಯವಸ್ಥೆಗೆ ಒಂದು ವ್ಯಾಖ್ಯೆ ನೀಡಿ.**

ಎ.ಜೆ.ಬ್ರೌನ್‌ರವರ ಪ್ರಕಾರ ಜನರಿಗೆ ಜೀವನೋಪಾಯ ಅವಕಾಶಗಳನ್ನು ದೊರಕಿಸಲು ನಿರ್ಮಿಸಿದ ವ್ಯವಸ್ಥೆಯು ಅರ್ಥವ್ಯವಸ್ಥೆಯಾಗಿದೆ.

**10. ವ್ಯಕ್ತಿಗಳ ಮತ್ತು ರಾಷ್ಟ್ರಗಳ ಚಟುವಟಿಕೆಗಳನ್ನು ನಿಯಂತ್ರಿಸಿ ಪ್ರೋತ್ಸಾಹಿಸುವ ಸಂಸ್ಥೆಗಳು ಯಾವುವು?**

- ಭಾರತೀಯ ರಿಸರ್ವ ಬ್ಯಾಂಕ್ (RBI),
- ಭಾರತೀಯ ಷೇರು ವಿನಿಮಯ ಮಂಡಳಿ (SEBI),
- ಜಾಗತಿಕ ಬ್ಯಾಂಕು, ಅಂತಾರಾಷ್ಟ್ರೀಯ ಹಣಕಾಸು ನಿಧಿ(IMF),
- ವಿಶ್ವ ವ್ಯಾಪಾರ ಸಂಘಟನೆ (WTO),
- ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ (SAARC),
- ಏಷ್ಯನ್ ಅಭಿವೃದ್ಧಿ ಬ್ಯಾಂಕ (ADB), ಇತ್ಯಾದಿ

# ವ್ಯವಹಾರ ಅಧ್ಯಯನ

## ಅಧ್ಯಾಯ – 1

## ವಾಣಿಜ್ಯ ಅಧ್ಯಯನದ ಘಟಕಗಳು

**I. ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಗ್ರಾಹಕರಿಗೆ ಸಲ್ಲಿಸುವ ತಾಂತ್ರಿಕ ಅಥವಾ ವಿಶಿಷ್ಟ ವೈಯುಕ್ತಿಕ ಸೇವೆಗಳ ಆರ್ಥಿಕ ಚಟುವಟಿಕೆಯನ್ನು ________ ಎನ್ನುತ್ತಾರೆ.
2. ಪ್ರಾಚೀನ ಕಾಲದಲ್ಲಿ ವಸ್ತುಗಳ ವಿನಿಮಯ __________ ಜೊತೆಯಲ್ಲಿ ಆಗುತ್ತಿತ್ತು.
3. ಕಾಗದದ ಹಣಕ್ಕೆ ದೇಶದ ____________ ಪೂರ್ಣ ಜವಾಬ್ದಾರಿ ಹೊತ್ತಿರುತ್ತದೆ.
4. ವಾಣಿಜ್ಯ ವಿಕಸನದ _________ ಹಂತದಲ್ಲಿ ಗ್ರಾಮ ಮತ್ತು ಸಮುದಾಯಗಳು ಹುಟ್ಟಿಕೊಂಡವು.
5. ಅಂತಾರಾಷ್ಟ್ರೀಯ ವ್ಯಾಪಾರ ಹಂತಕ್ಕೆ ಮುಖ್ಯ ಕಾರಣ _______________ ಪ್ರಾರಂಭವಾಗಿದ್ದು.

6. ವ್ಯಾಪಾರ ಮತ್ತು ವಾಣಿಜ್ಯ ಸರ್ಕಾರಕ್ಕೆ ________ ಗಳನ್ನು ಕೊಡುವುದರಿಂದ ಆರ್ಥಿಕ ಬೆಳವಣಿಗೆಗೆ ಸಹಾಯವಾಗುತ್ತದೆ.

7. ವಸ್ತುಗಳು ಮತ್ತು ಸೇವೆಗಳು ಗ್ರಾಹಕರಿಗೆ ವಿತರಣೆಯಾಗುವುದಕ್ಕೆ ಎನ್ನುತ್ತೇವೆ.

8. ವ್ಯವಹಾರ ಎಂಬ ಪದವು ಸದಾ ಚಟುವಟಿಕೆಯಿಂದ ಕೂಡಿರುವ ________ ಎಂಬ ಪದದಿಂದ ಬಂದಿದೆ.

**ಉತ್ತರಗಳು:– 1) ವೃತ್ತಿ 2) ವಸ್ತುಗಳ 3) ಸರ್ಕಾರವು 4) ಕೃಷಿ ಅಥವಾ ಬೇಸಾಯ ಹಂತ 5) ಕೈಗಾರಿಕಾ ಕ್ರಾಂತಿ 6) ಕರ/ ಸುಂಕ/ ತೆರಿಗೆ 7) ವಿನಿಮಯ 8) ``BUSY'' 9)**

## II. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರ ಬರೆಯಿರಿ.

**1. ಆರ್ಥಿಕ ಚಟುವಟಿಕೆಗಳೆಂದರೇನು?**

ವಸ್ತುಗಳ ಉತ್ಪಾದನೆ, ಅವುಗಳ ವಿತರಣೆ ಹಾಗೂ ಗ್ರಾಹಕರಿಗೆ ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆಗಳೆನ್ನುತ್ತೇವೆ.

**2. ವ್ಯಾಪಾರ ಮತ್ತು ವಾಣಿಜ್ಯಗಳ ಅರ್ಥ ತಿಳಿಸಿ.**

ವ್ಯಾಪಾರವೆಂದರೆ ಸರಕುಗಳನ್ನು ಕೊಳ್ಳುವುದು & ಮಾರುವುದು.

ವ್ಯಾಪಾರ ಸುಗಮವಾಗಿ ನಡೆಯಲು ಪೂರಕವಾದ ಇತರೆ ಅಂಶಗಳಾದ ಸಾಗಾಣಿಕೆ, ವಿಮೆ, ಬ್ಯಾಂಕಿಂಗ್, ಉಗ್ರಾಣ ವ್ಯವಸ್ಥೆ, ಜಾಹೀರಾತು ಮುಂತಾದವುಗಳನ್ನು ವಾಣಿಜ್ಯ ಸೇವೆಗಳೆಂದು ಕರೆಯಬಹುದು.

**3. ಪದಾರ್ಥಗಳ ನೇರ ವಿನಿಮಯ ಪದ್ಧತಿ ಎಂದರೇನು?**

ಈ ಹಿಂದೆ ಉತ್ಪಾದಿಸಿದ ವಸ್ತುಗಳ ಬದಲಿಗೆ ಬೇಕಾದ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ವಸ್ತುಗಳನ್ನು ನೇರವಾಗಿ ವಸ್ತುಗಳಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿಗೆ 'ಪದಾರ್ಥಗಳ ನೇರ / ವಸ್ತು ವಿನಿಮಯ ಪದ್ಧತಿ' ಎನ್ನುತ್ತಾರೆ.

**4. ಉದ್ಯೋಗ ಎಂದರೇನು?**

ವೇತನ ಅಥವಾ ಕೂಲಿಯ ಪ್ರತಿಫಲಕ್ಕಾಗಿ ಉದ್ಯೋಗದಾತನು ವಹಿಸುವ ಕಾರ್ಯವನ್ನು ಉದ್ಯೋಗಿಯು ನಿರ್ವಹಿಸುವ ಚಟುವಟಿಕೆಯೇ ಉದ್ಯೋಗ.

**5. ವ್ಯಾಪಾರ ಪೂರಕಗಳೆಂದರೇನು? ಅವು ಯಾವುವು?**

ವ್ಯಾಪಾರ ಸುಗಮವಾಗಿ ನಡೆಯಲು ಬೇಕಾಗುವ ಪೂರಕವಾದ ಇತರೆ ಅಂಶಗಳನ್ನು ವ್ಯಾಪಾರ ಪೂರಕಗಳೆನ್ನುವರು.

ಈ ಪೂರಕ ಅಂಶಗಳಾವುವೆಂದರೆ ಸಾಗಾಣಿಕೆ, ವಿಮೆ, ಬ್ಯಾಂಕಿಂಗ್, ಉಗ್ರಾಣ ವ್ಯವಸ್ಥೆ, ಜಾಹೀರಾತು ಮುಂತಾದವು.

**6. ವೃತ್ತಿ ಸಂಘಗಳೆಂದರೇನು?**

ಕುಶಲ ಕರ್ಮಿಗಳು ತಮ್ಮ ಪ್ರಗತಿಗಾಗಿ, ತಮ್ಮಲ್ಲಿಯ ಕೊರತೆ, ಸಮಸ್ಯಾ ನಿದಾನಕ್ಕಾಗಿ ತಮ್ಮದೇ ಆದ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡರು. ಈ ರೀತಿಯ ಸಂಘಗಳನ್ನು ವೃತ್ತಿ ಸಂಘಗಳು ಎನ್ನುತ್ತೇವೆ.

## III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಉತ್ತರ ಬರೆಯಿರಿ.

**1 ನಮ್ಮ ದೈನಂದಿನ ಜೀವನದಲ್ಲಿ ವಸ್ತುಗಳ ಉತ್ಪಾದನೆ ಮತ್ತು ವಿತರಣೆ ಹೇಗೆ ಮುಖ್ಯ ಪಾತ್ರ ವಹಿಸುತ್ತದೆ?**

- ನಮಗೆ ಮೂಲಭೂತ ಅವಶ್ಯಕತೆಗಳ ಜೊತೆಗೆ ಪ್ರತಿನಿತ್ಯದ ಗೃಹೋಪಯೋಗಿ ವಸ್ತುಗಳು ಅವಶ್ಯವಾಗಿವೆ. ಇಂತಹ ಸರಕು ಸೇವೆಗಳು ವ್ಯವಸಾಯ ಮತ್ತು ಕೈಗಾರಿಕೆಗಳಿಂದ ವಸ್ತುಗಳ ಉತ್ಪಾದನೆಯಾಗುತ್ತದೆ.
- ಇವುಗಳನ್ನು ನಾವು ವ್ಯಾಪಾರಿಗಳಿಂದ ಪಡೆಯುತ್ತೇವೆ.
- ಈ ವ್ಯಾಪಾರಿಗಳಾದ ಚಿಲ್ಲರೆ ವ್ಯಾಪಾರಿಗಳು ಸಗಟು ವ್ಯಾಪಾರಿಗಳಿಂದ ಅಥವಾ ಉತ್ಪಾದಕರಿಂದ ಪಡೆಯುತ್ತಾರೆ.
- ವ್ಯವಹಾರವು ಒಂದು ಆರ್ಥಿಕ ಚಟುವಟಿಕೆಯಾಗಿದ್ದು ವಸ್ತುಗಳ ಉತ್ಪಾದನೆ ಮತ್ತು ವಿತರಣೆಯು ನಿರಂತರವಾಗಿ ನಡೆಯುತ್ತ ನಮ್ಮ ಬಯಕೆಗಳನ್ನು ಪೂರೈಸುತ್ತವೆ.

**2 ವಿವಿಧ ಬಗೆಯ ಆರ್ಥಿಕ ಚಟುವಟಿಕೆಗಳನ್ನು ವಿವರಿಸಿ.**

ಆರ್ಥಿಕ ಚಟುವಟಿಕೆಗಳಲ್ಲಿ ಮೂರು ವಿಧ–

1. ವ್ಯವಹಾರ:– ಇದು ಮುಖ್ಯವಾಗಿ ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಅವುಗಳನ್ನು ಗ್ರಾಹಕರಿಗೆ ಒದಗಿಸುವ ಚಟುವಟಿಕೆಯಾಗಿದೆ. ಉದಾ: ಅಂಗಡಿಗಳು
2. ವೃತ್ತಿ:– ಇದು ಮುಖ್ಯವಾಗಿ ವಿಶಿಷ್ಟವಾದ ತಾಂತ್ರಿಕ ಹಾಗೂ ತಜ್ಞ ಪರಿಣಿತ ಸೇವೆಗಳನ್ನು ಸಲ್ಲಿಸುವ ಚಟುವಟಿಕೆಯಾಗಿದೆ. ಉದಾ: ವಕೀಲರು, ಲೆಕ್ಕಪರಿಶೋಧಕರು, ವೈದ್ಯರು, ಆಡಳಿತ ಸಲಹೆಗಾರರು,ಇತ್ಯಾದಿ.
3. ಉದ್ಯೋಗ ಅಥವಾ ಸೇವೆಗಳು:– ಇದು ವೇತನ ಅಥವಾ ಕೂಲಿಯ ಪ್ರತಿಫಲಕ್ಕಾಗಿ ಉದ್ಯೋಗದಾತನು ವಹಿಸುವ ಕಾರ್ಯವನ್ನು ಉದ್ಯೋಗಿಯು ನಿರ್ವಹಿಸುವ ಚಟುವಟಿಕೆಯಾಗಿದೆ. ಉದಾ: ಬೇಸಾಯ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು.

**3. ವಸ್ತು ವಿನಿಮಯ ಪದ್ಧತಿಯ ಸಮಸ್ಯೆಗಳಾವುವು? ಹಣ ಮಾಧ್ಯಮ ಇದನ್ನು ಹೇಗೆ ನಿವಾರಿಸುತ್ತದೆ?**

ವಸ್ತು ವಿನಿಮಯ ಪದ್ಧತಿಯ ಸಮಸ್ಯೆಗಳು– ಅವುಗಳ ಹಣದ ಮಾಧ್ಯಮದ ಮೂಲಕ ನಿವಾರಣೆ–

1) **ಬಯಕೆಗಳ ಮರು ಹೊಂದಾಣಿಕೆಯ ಕೊರತೆ–** ವಸ್ತು ವಿನಿಮಯ ಪದ್ಧತಿಯಲ್ಲಿ ಅನೇಕ ವೇಳೆ ಒಂದು ಪದಾರ್ಥಕ್ಕೆ ಬದಲಾಗಿ ಇನ್ನೊಂದು ಪದಾರ್ಥ ಪಡೆಯಲು ಬಯಕೆಗಳು ಸರಿ ಹೊಂದುತ್ತಿರಲಿಲ್ಲ. ಹಣ ಮಾಧ್ಯಮವು ಎಲ್ಲಾ ವಸ್ತುವಿಗೆ ಮೌಲ್ಯ ಗುರುತಿಸುವ ಮತ್ತು ಭರಿಸುವ ಶಕ್ತಿ ಹೊಂದಿರುವುದರಿಂದ **ಬಯಕೆಗಳ ಮರು ಹೊಂದಾಣಿಕೆಯ ಕೊರತೆ ಇಲ್ಲ.**

2) **ಮೌಲ್ಯದ ಅಳತೆ ಸಮರ್ಪಕವಾಗಿ ಇಲ್ಲದೆ ಇರುವುದು :** ವಸ್ತು ವಿನಿಮಯ ಪದ್ಧತಿಯಲ್ಲಿ ಒಂದು ಮಾಪನ ಭತ್ತಕ್ಕೆ ಎಷ್ಟು ಮಾಪನ ಗೋಧಿ ಅಥವಾ ಒಂದು ಹಸುವಿಗೆ ಎಷ್ಟು ಕುರಿಗಳು ಎಂಬ ಕಿಮ್ಮತ್ತನ್ನು/ಮೌಲ್ಯ ನಿಗದಿಪಡಿಸಲು ಸಾಧ್ಯವಿರಲಿಲ್ಲ. ಆದರೆ ಹಣ ಮಾಧ್ಯಮವು ಮೌಲ್ಯ ಗುರುತಿಸಲು ಅತಿ ಸಣ್ಣ ಮೌಲ್ಯದ ನಾಣ್ಯದಿಂದ ವಿವಿಧ ಮೌಲ್ಯದ ಕರೆನ್ಸಿ ಇರುವುದರಿಂದ ಸಮಸ್ಯೆ ಇಲ್ಲ.

3) **ವಸ್ತುಗಳನ್ನು ವಿಭಜಿಸುವ ಕೊರತೆ–** ಒಂದು ಹಸುವಿಗೆ ಸರಿ ಹೊಂದುವಂತೆ ಕುರಿಗಳನ್ನು ವಿಭಜಿಸಲು ಸಾಧ್ಯವಿರಲಿಲ್ಲ. ಹಣದ ಮಾಧ್ಯಮವು ವಸ್ತುವಿನ ಮೌಲ್ಯಕ್ಕೆ ತಕ್ಕಂತೆ ಮೌಲ್ಯ ನೀಡುವುದರಿಂದ ಈಗ ಆ ಸಮಸ್ಯೆ ಇಲ್ಲ.

4) ಅಗ **ವಸ್ತುಗಳ ಸಾಗಾಣಿಕೆಯ ಮತ್ತು ಸಂಗ್ರಹದ ಸಮಸ್ಯೆ** ಇತ್ತು: ಈಗ ಹಣವು ಅತಿ ಕಡಿಮೆ ಭಾರವನ್ನು ಹೊಂದಿದ್ದು ಸಾಗಿಸಲು ಸಮಸ್ಯೆ ಇಲ್ಲ ಹಾಗೂ ಹೆಚ್ಚು ಕಾಲ ಸಂಗ್ರಹಿಸಲು ಅವಕಾಶ ಇದೆ.

**4. ವಾಣಿಜ್ಯ ವಿಕಸನದ ಹಂತಗಳಲ್ಲಿ ಮುಖ್ಯವಾದುವು ಯಾವುವು? ಸಂಕ್ಷಿಪ್ತವಾಗಿ ಯಾವುದಾದರೂ ಒಂದನ್ನು ವಿವರಿಸಿ.**

ವ್ಯವಹಾರದ ವಿಕಸನವು ಅನೇಕ ಹಂತಗಳಿವೆ. ಅವು ಯಾವುವೆಂದರೆ :

1. ಬೇಟೆಗಾರಿಕೆ ಮತ್ತು ಮೀನು ಹಿಡಿಯುವ ಹಂತ
2. ಪ್ರಾಣಿ ಸಾಕಾಣಿಕೆಯ ಹಂತ
3. ಕೃಷಿ ಅಥವಾ ಬೇಸಾಯದ ಹಂತ
4. ಕುಶಲ ಕರ್ಮಿಗಳ ಹಂತ
5. ವಸ್ತು ವಿನಿಮಯ ಹಂತ
6. ಹಣದ ಆರ್ಥಿಕತೆಯ ಹಂತ
7. ಪಟ್ಟಣದ ಆರ್ಥಿಕ ಹಂತ
8. ಅಂತಾರಾಷ್ಟ್ರೀಯ ವ್ಯಾಪಾರದ ಹಂತ.

**1. ಬೇಟೆಗಾರಿಕೆ ಮತ್ತು ಮೀನು ಹಿಡಿಯುವ ಹಂತ :** ಮೊದಲ ಹಂತವಾದ ಈ ಅವಧಿಯಲ್ಲಿ ಮಾನವರು ಅಲೆಮಾರಿಗಳಾಗಿದ್ದು ಒಂದು ನಿರ್ಧಿಷ್ಟ ಸ್ಥಳದಲ್ಲಿ ನೆಲೆಸಿರಲಿಲ್ಲ. ಅಲೆಮಾರಿಯಾಗಿ ಬೇಟೆಯಾಡುತ್ತಿದ್ದರು. ಪ್ರಾಣಿಗಳ ಮಾಂಸ, ಗೆಡ್ಡೆ ಗೆಣಸುಗಳು, ಮೀನು ಅವರ ಆಹಾರವಾಗಿತ್ತು. ಈ ಹಂತದಲ್ಲಿ ಯಾವುದೇ ಆರ್ಥಿಕ ಚಟುವಟಿಕೆಗಳು ಕಂಡು ಬರುತ್ತಿರಲಿಲ್ಲ.

**5. ಆರ್ಥಿಕ ಬೆಳವಣಿಗೆಯಲ್ಲಿ ವಾಣಿಜ್ಯದ ಪಾತ್ರ ಮತ್ತು ಪ್ರಾಮುಖ್ಯತೆಯನ್ನು** ತಿಳಿಸಿ.

- ವಾಣಿಜ್ಯವು ಗ್ರಾಹಕರಿಗೆ ಬೇಕಾದ ವಸ್ತುಗಳನ್ನು ಸರಿಯಾದ ಸಮಯಕ್ಕೆ ಒದಗಿಸುವ ಜವಾಬ್ದಾರಿ ಹೊತ್ತಿದೆ.
- ಕೈಗಾರಿಕೆಗಳು ಸ್ಥಾಪನೆಯಾಗಬೇಕಾದರೆ ಅದಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸುತ್ತದೆ.
- ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ಹಂಚಿರುವ ಜನರನ್ನು ಒಟ್ಟುಗೂಡಿಸುತ್ತದೆ.
- ಬೆಲೆಗಳನ್ನು ಹತೋಟಿಯಲ್ಲಿಡಲು ಸಹಕರಿಸುತ್ತದೆ.
- ವಿಷಯಗಳ ವಿನಿಮಯದ ಮೂಲಕ ಸಾಂಸ್ಕೃತಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ.
- ಎಲ್ಲಕ್ಕಿಂತ ಮಿಗಿಲಾಗಿ ದೇಶದ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡುತ್ತದೆ.
- ಸರ್ಕಾರದ ಆದಾಯಕ್ಕೆ ಕರ ತೆರಿಗೆ ಮತ್ತು ಸುಂಕಗಳನ್ನು ನೀಡುವುದರ ಮೂಲಕ ತನ್ನ ಪಾಲನ್ನು ನೀಡುತ್ತದೆ.

# 8ನೇ ತರಗತಿ ಸಮಾಜ ವಿಜ್ಞಾನ ಪ್ರಶ್ನೋತ್ತರ ಮಾಲಿಕೆ
## (ಹೊಸ ಪಠ್ಯಾನುಸಾರ) 2ನೇ ಸೆಮಿಸ್ಟರ್- 2018-19

ವೀರೇಶ್ ಪಿ ಅರಕೇರಿ,
ಸಹ ಶಿಕ್ಷಕರು,
ಸರ್ಕಾರಿ (ಮಾಜಿ ಪುರಸಭೆ) ಪ್ರೌಢಶಾಲೆ,
ದಾವಣಗೆರೆ ಉತ್ತರ.


| ಕ್ರ.ಸಂ | ವಿಷಯಗಳು | ಪುಟ ಸಂಖ್ಯೆ |
|---|---|---|
| | **ಇತಿಹಾಸ** | |
| 1 | ಮೌರ್ಯರು ಮತ್ತು ಕುಶಾಣರು | |
| 2 | ಗುಪ್ತರು ಮತ್ತು ವರ್ಧನರು | |
| 3 | ದಕ್ಷಿಣ ಭಾರತ – ಶಾತವಾಹನರು, ಕದಂಬರು ಮತ್ತು ಗಂಗರು | |
| 4 | ಬಾದಾಮಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು | |
| 5 | ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು | |
| 6 | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | |
| | | |
| | **ರಾಜ್ಯಶಾಸ್ತ್ರ** | |
| 1 | ಮಾನವ ಹಕ್ಕುಗಳು | |
| 2 | ಸ್ಥಳೀಯ ಸರ್ಕಾರಗಳು | |
| | | |
| | **ಸಮಾಜಶಾಸ್ತ್ರ** | |
| 1 | ಸಾಮಾಜಿಕ ಸಂಸ್ಥೆಗಳು | |
| 2 | ಸಮಾಜಗಳ ಪ್ರಕಾರಗಳು | |
| | | |
| | **ಭೂಗೋಳ ವಿಜ್ಞಾನ** | |
| 1 | ವಾಯುಗೋಳ | |
| 2 | ಜಲಗೋಳ | |
| 3 | ಜೀವಗೋಳ | |
| | | |
| | **ಅರ್ಥಶಾಸ್ತ್ರ** | |
| 1 | ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳು | |
| 2 | ಸರ್ಕಾರ ಮತ್ತು ಅರ್ಥವ್ಯವಸ್ಥೆ | |
| | | |
| | **ವ್ಯವಹಾರ ಅಧ್ಯಯನ** | |
| 1 | ವ್ಯವಹಾರ ಮತ್ತು ಕೈಗಾರಿಕೆ | |
| 2 | ವಿವಿಧ ವ್ಯವಹಾರ ಸಂಘಟನೆಗಳು | |

# ಇತಿಹಾಸ

## ಅಧ್ಯಾಯ – 7

# ಮೌರ್ಯರು ಮತ್ತು ಕುಶಾಣರು

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಚಾಣಕ್ಯನು __________ ಎಂದು ಪ್ರಖ್ಯಾತನಾದವನು.
2. ಮೆಗಸ್ತಾನಿಸನ ಕೃತಿ ______________
3. ಮೌರ್ಯರ ರಾಜಧಾನಿ __________
4. ಕುಶಾಣ ರಾಜ ಮನೆತನದ ಸಂಸ್ಥಾಪಕ __________
5. ಕನಿಷ್ಕನ ರಾಜಾಳ್ವಿಕೆಯ ಹೊಸ ಯುಗವನ್ನು ________ ಎಂದು ಕರೆಯುತ್ತಾರೆ.
6. ______ ನು ಮೌರ್ಯ ಸಾಮ್ರಾಜ್ಯದ ಸ್ಥಾಪಕನಾಗಿದ್ದಾನೆ.
7. ಕನಿಷ್ಕನ ಕಾಲದಲ್ಲಿ __________ ಶಿಲ್ಪಕಲೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು.
8. ಅಶೋಕನು __________ ರನ್ನು ಧರ್ಮ ಪ್ರಸಾರಕ್ಕಾಗಿ ನೇಮಕ ಮಾಡಿದ್ದನು.
9. ಚಿನ್ನದ ನಾಣ್ಯಗಳನ್ನು ಟಂಕಿಸಿದ ದೊರೆ ________

**ಉತ್ತರಗಳು:– 1) ಕೌಟಿಲ್ಯ/ ವಿಷ್ಣುಗುಪ್ತ 2) ಇಂಡಿಕಾ 3) ಪಾಟಲೀಪುತ್ರ 4) ಕುಜಲ ಕಡ್‌ಫೀಸಸ್ 5) ಶಕ ಯುಗ 6) ಚಂದ್ರಗುಪ್ತ ಮೌರ್ಯ 7) ಗಾಂಧಾರ 8) ಧರ್ಮ ಮಹಾ ಮಾತ್ರರು 9) ವಿಮಾ ಕಡ್ ಫೀಸಸ್**

**II. ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಮೌರ್ಯರ ಇತಿಹಾಸವನ್ನು ತಿಳಿಸುವ ಆಕರಗಳ ಪಟ್ಟಿ ಮಾಡಿ.**

ಮೌರ್ಯರ ಇತಿಹಾಸವನ್ನು ತಿಳಿಸುವ ಆಕರಗಳು–

- ಮೆಗಸ್ತನಿಸನ 'ಇಂಡಿಕಾ'
- ಕೌಟಿಲ್ಯನ ಅರ್ಥಶಾಸ್ತ್ರ,
- ವಿಶಾಖದತ್ತನ ಮುದ್ರಾರಾಕ್ಷಸ,
- ಶ್ರೀಲಂಕಾದ ಬೌದ್ಧ ಸಾಹಿತ್ಯ ಕೃತಿಗಳಾದ ದೀಪವಂಶ ಮತ್ತು ಮಹಾವಂಶ,
- ಅಶೋಕನ ಶಾಸನಗಳು.

**2. ಅಶೋಕನ ಕಾಲದ ಪ್ರಮುಖ ನಗರಗಳನ್ನು ಹೆಸರಿಸಿ.**

ಪಾಟಲಿಪುತ್ರ, ತಕ್ಷಶಿಲೆ, ಉಜ್ಜೈನಿ, ದೌಲಿ, ಸುವರ್ಣಗಿರಿ ಮತ್ತು ಗಿರ್ನಾರ್.

**3. ಅಶೋಕನನ್ನು ಒಬ್ಬ ಮಹಾಶಯನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಕಾರಣವನ್ನು ವಿಶ್ಲೇಷಿಸಿ.**

ಈ ಕೆಳಗಿನ ಕೆಲವು ಕಾರಣಗಳಿಂದ ಅಶೋಕನನ್ನು ಇತಿಹಾಸಕಾರರು ಮಹಾಶಯ ಎಂದು ಹೇಳಿದ್ದಾರೆ.

● ಕರುಣೆಯಂತಹ ಮಾನವೀಯ ಮೌಲ್ಯಗಳ ರಕ್ಷಕ– ಅಶೋಕನು ಕಳಿಂಗ ರಾಜ್ಯವನ್ನು ಆಕ್ರಮಿಸಿಕೊಳ್ಳಲು ಸಾ.ಶ.ಪೂ. 261ರಲ್ಲಿ ಯುದ್ಧ ಸಾರಿದನು. ಕಳಿಂಗವನ್ನು ಅಶೋಕ ಗೆದ್ದನಾದರೂ, ಯುದ್ಧದ ಸಾವು ನೋವು ಅವನ ಮನಕಲಕಿತು.

● ಶಾಂತಿ ಸ್ಥಾಪಕ– ಕಳಿಂಗ ಯುದ್ಧದ ನಂತರ ಮತ್ತೆಂದೂ ಯುದ್ಧ ಮಾಡದಿರಲು ನಿರ್ಧರಿಸಿದನು. ದಿಗ್ವಿಜಯಕ್ಕಿಂತ ಧರ್ಮದ ವಿಜಯವೇ ಅತ್ಯುನ್ನತ ವಿಜಯವೆಂದು ಅಶೋಕನು ಭಾವಿಸಿದನು.

● ಬೌದ್ಧಧರ್ಮ ರಕ್ಷಕ– ಬೌದ್ಧ ಧಮ್ಮದ ಕಡೆಗೆ ಪ್ರೇರಿತನಾಗಿ ತನ್ನ ಉಳಿದ ಜೀವನವನ್ನು ಶಾಂತಿ ಪ್ರತಿಪಾದನೆಗೆ ಮೀಸಲಿಟ್ಟನು.

● ಅಹಿಂಸಾವಾದಿ– ತನ್ನ ಸಾಮ್ರಾಜ್ಯದಲ್ಲಿ ಪ್ರಾಣಿ, ಪಕ್ಷಿಗಳ ಹತ್ಯೆಯನ್ನು ನಿಷೇಧಿಸಿದನು.

● ಉತ್ತಮ ರಾಜ– ಅಶೋಕನು, ಪ್ರಜೆಗಳೆಲ್ಲರೂ ನನ್ನ ಮಕ್ಕಳಿದ್ದಂತೆ ಎಂದು ಸಾರಿದನು.

● ಮೌಲ್ಯಾಧಾರಿತ ಜೀವನ ನಡೆಸಿದ ರಾಜ– ತಂದೆ ತಾಯಿಗಳಿಗೆ ವಿಧೇಯರಾಗಿರಬೇಕೆಂದೂ, ಗುರು ಹಿರಿಯರನ್ನು ಗೌರವಿಸಬೇಕೆಂದು ಹೇಳಿದನು. ಅಲ್ಲದೆ, ದೀನರು ಮತ್ತು ಗುಲಾಮರ ಬಗೆಗೆ ದಯೆಯನ್ನು ತೋರುವಂತೆಯೂ ಹೇಳಿದನು. ತಾವೂ ಬದುಕಿ, ಇತರರನ್ನು ಬದುಕಲು ಬಿಡಿ ಎಂದು ಬೋಧಿಸಿದನು.

● ಬೌದ್ಧ ಧರ್ಮ ಪ್ರಚಾರಕ– ಸಿಲೋನಿಗೆ ತನ್ನ ಮಗ ರಾಹುಲ ಮತ್ತು ಮಗಳು ಸಂಘಮಿತ್ರೆಯನ್ನು ಕಳುಹಿಸಿಕೊಟ್ಟನು. ಸಾ.ಶ.ಪೂ. 250ರಲ್ಲಿ ಮೂರನೇ ಬೌದ್ಧ ಸಮ್ಮೇಳನವನ್ನು ಪಾಟಲೀಪುತ್ರದಲ್ಲಿ ನೆರವೇರಿಸಿದನು.

● ಕಲೆ ವಾಸ್ತುಶಿಲ್ಪಕ್ಕೆ ಮಹತ್ವ– ಶಾಸನಗಳ ಪಿತಾಮಹ ಎಂದು ಕರೆದಿದ್ದಾರೆ.

● ಭಾರತದಂತಹ ದೊಡ್ಡ ದೇಶವನ್ನು ಒಗ್ಗೂಡಿಸಿ ಆಳಿದ್ದನು.

ಈ ಎಲ್ಲಾ ಕಾರಣಗಳಿಂದ ಅಶೋಕನನ್ನು ಒಬ್ಬ ಮಹಾಶಯ ಎಂದು ಇತಿಹಾಸಕಾರರು ಬಣ್ಣಿಸಿದ್ದಾರೆ.

**4. ಅಶೋಕನ ಆಡಳಿತದ ಬಗ್ಗೆ ವಿವರಣೆ ಕೊಡಿರಿ.**

- ಮೌರ್ಯ ಸಾಮ್ರಾಜ್ಯವು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು.
- ಅಧಿಕಾರವು ರಾಜನಲ್ಲಿ ಕೇಂದ್ರೀಕೃತವಾಗಿತ್ತು.
- ವಿಶಾಲ ಮೌರ್ಯ ಸಾಮ್ರಾಜ್ಯವನ್ನು ಆಳುವ ಸಲುವಾಗಿ ಅಧಿಕಾರಿ ವರ್ಗವು ಅಸ್ತಿತ್ವಕ್ಕೆ ಬಂದಿತು.
- ಬಲಿಷ್ಠ ಗೂಢಚಾರ ವ್ಯವಸ್ಥೆ ಅಸ್ತಿತ್ವದಲ್ಲಿತ್ತು.
- ರಾಜನ ಅಧೀನದಲ್ಲಿ ಮಂತ್ರಿ, ಪುರೋಹಿತ, ಸೇನಾಪತಿ ಮತ್ತು ಯುವರಾಜ ಅತ್ಯುನ್ನತ ಅಧಿಕಾರಿಗಳಾಗಿದ್ದರು.
- ಸಾಮ್ರಾಜ್ಯವನ್ನು ಪ್ರಾಂತ್ಯಗಳಾಗಿ ವಿಂಗಡಿಸಲಾಗಿತ್ತು. ಪ್ರಾಂತ್ಯಗಳನ್ನು ಯುವರಾಜ ಅಥವಾ ರಾಜ ಪರಿವಾರಕ್ಕೆ ಸಂಬಂಧಿಸಿದವರು ಆಳುತ್ತಿದ್ದರು.
- ತಕ್ಷಶಿಲೆ, ಉಜ್ಜೈನಿ, ದೌಲಿ, ಸುವರ್ಣಗಿರಿ ಮತ್ತು ಗಿರ್ನಾರ್‌ಗಳು ಪ್ರಾಂತೀಯ ಆಡಳಿತ ಕೇಂದ್ರಗಳಾಗಿದ್ದವು.
- ರಜುಕ (ನ್ಯಾಯಿಕ ಅಧಿಕಾರಿ), ಯುಕ್ತ (ಮಾಹಿತಿಗಳನ್ನು ದಾಖಲಿಸುವ ಅಧಿಕಾರಿ) ಮೊದಲಾದ ಅಧಿಕಾರಿಗಳಿದ್ದರು.
- ರಾಜಧಾನಿ ಪಾಟಲೀಪುತ್ರದ ಆಡಳಿತವನ್ನು 30 ಅಧಿಕಾರಿಗಳನ್ನು ಒಳಗೊಂಡ ಆರು ಸಮಿತಿಗಳು ನಿರ್ವಹಿಸುತ್ತಿದ್ದವು.

**5. ಕುಶಾಣರು ಯಾವ ಸಂತತಿಗೆ ಸೇರಿದವರು?**

ಕುಶಾಣರು ಯೂಚಿ ಸಂತತಿಗೆ ಸೇರಿದವರು. ಇವರು ಮಧ್ಯ ಏಷ್ಯಾದಿಂದ ಭಾರತಕ್ಕೆ ವಲಸೆ ಬಂದ ಅಲೆಮಾರಿ ಜನಾಂಗದ ಮೂಲ ಹೊಂದಿದವರಾಗಿದ್ದರು.

**6. ಕನಿಷ್ಕನ ಸಾಮ್ರಾಜ್ಯದ ವಿಸ್ತರಣೆ ಎಲ್ಲಿಯವರೆಗೆ ಹರಡಿತ್ತು?**

ಭಾರತದಲ್ಲಿ ಕನಿಷ್ಕನ ಆಳ್ವಿಕೆಯ ವ್ಯಾಪ್ತಿಯು ದಕ್ಷಿಣದ ಸಾಂಚಿ ಹಾಗೂ ಪೂರ್ವದ ಬನಾರಸ್ಸಿನವರೆಗೆ ಹರಡಿತ್ತು. ಮಧ್ಯ ಏಷ್ಯಾವನ್ನು ಒಳಗೊಂಡ ಇವನ ಆಳ್ವಿಕೆಯು ವಿಶಾಲವಾದ ಸಾಮ್ರಾಜ್ಯವನ್ನು ಹೊಂದಿತ್ತು.

**7. ಮೌರ್ಯ ಸಾಮ್ರಾಜ್ಯದ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ಬರೆಯಿರಿ.**

- ಪಾಟಲೀಪುತ್ರದಲ್ಲಿ ಮೌರ್ಯರ ವೈಭವಪೂರ್ಣ ಅರಮನೆಯನ್ನು ಕುರಿತು ದಾಖಲೆ ಇದೆ.
- ಅರಮನೆ ಮತ್ತು ಸುತ್ತುವರೆದ ಮರದ ಕೋಟೆಯ ಕೆಲವು ಅವಶೇಷಗಳು ಉತ್ಖನನದ ವೇಳೆ ದೊರೆತಿದೆ.
- ಅಶೋಕನ ಕಾಲದಲ್ಲಿ ಅನೇಕ ಸ್ತೂಪಗಳು ಮತ್ತು ಸ್ತಂಭಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಇಂದು ದೊರೆತಿರುವ ಅತ್ಯಂತ ದೊಡ್ಡ ಸ್ತೂಪ ಸಾಂಚಿ ಸ್ತೂಪ.
- 30ಕ್ಕೂ ಹೆಚ್ಚು ಸ್ತಂಭಗಳು ದೊರೆತಿದ್ದು, ಸ್ತಂಭದ ಮೇಲೆ ಸಿಂಹ ಅಥವಾ ಗೂಳಿಯ ಶಿಲ್ಪಗಳನ್ನು ಕಡೆಯಲಾಗಿದೆ.
- ನಮ್ಮ ರಾಷ್ಟ್ರ ಲಾಂಛನ ನಾಲ್ಕು ತಲೆಯ ಸಿಂಹವನ್ನು ಸಾರನಾಥದ ಅಶೋಕ ಸ್ತಂಭದಿಂದ ಪಡೆಯಲಾಗಿದೆ.
- ಇವಲ್ಲದೆ, ಅಶೋಕನು ಬರಾಬರ್ ಬೆಟ್ಟದಲ್ಲಿ ಮೂರು ಶಿಲಾಚ್ಛೇದಿತ ಗುಹೆ (Rock Cut Caves)ಗಳನ್ನು ಹಾಗೂ ಅವನ ಮಗ ದಶರಥನು ನಾಗಾರ್ಜುನಿ ಬೆಟ್ಟದಲ್ಲಿ ಮೂರು ಶಿಲಾಚೇದಿತ ಗುಹೆಗಳನ್ನು ನಿರ್ಮಿಸಿದ್ದಾನೆ.
- ಅಶೋಕನನ್ನು 'ಶಾಸನಗಳ ಪಿತಾಮಹ' ಎಂದು ಕರೆಯಲಾಗುತ್ತದೆ.

**8. ಕುಶಾಣ ರಾಜ ಕನಿಷ್ಕನ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.**

- ಕನಿಷ್ಕನ ಆಳ್ವಿಕೆಯಡಿಯಲ್ಲಿ ಕುಶಾಣರ ಮನೆತನವು ವ್ಯಾಪಕವಾಗಿ ಬೆಳೆಯಿತು.
- ಇವನು ಸಾ.ಶ. 78ರಲ್ಲಿ ರಾಜಾಳ್ವಿಕೆಯನ್ನು ಪ್ರಾರಂಭಿಸಿ ಹೊಸ ಯುಗ 'ಶಕ'ಯುಗಕ್ಕೆ ನಾಂದಿಹಾಡಿದನು.
- ಮಧ್ಯ ಏಷ್ಯಾವನ್ನು ಒಳಗೊಂಡ ಇವನ ಆಳ್ವಿಕೆಯು ವಿಶಾಲವಾದ ಸಾಮ್ರಾಜ್ಯವನ್ನು ಹೊಂದಿತ್ತು.
- ಪುರುಷಪುರವು ಕನಿಷ್ಕನ ರಾಜಧಾನಿ. ಇವನ ಕಾಲದ ಮತ್ತೊಂದು ಮುಖ್ಯನಗರ ಮಥುರಾ.
- ಕನಿಷ್ಕನು ಬೌದ್ಧಧರ್ಮಕ್ಕೆ ನೀಡಿದ ಆಶ್ರಯದಿಂದಾಗಿ ಅದು ಮತ್ತಷ್ಟು ಸಮೃದ್ಧಿಯಿಂದ ಬೆಳೆಯಲು ಸಾಧ್ಯವಾಯಿತು.
- ಅಶ್ವಘೋಷ, ವಸುಮಿತ್ರ, ಸಂಗರಕ್ಷ ಮುಂತಾದ ಬೌದ್ಧ ವಿದ್ವಾಂಸರನ್ನು ಇವನ ಕಾಲದಲ್ಲಿ ಕಾಣುತ್ತೇವೆ.
- ನಾಲ್ಕನೆಯ ಬೌದ್ಧ ಸಮಾವೇಶವನ್ನು ಕಾಶ್ಮೀರದಲ್ಲಿ ಕನಿಷ್ಕನ ನೇತೃತ್ವದಲ್ಲಿಯೇ ನಡೆಸಲಾಯಿತು.
- ಈತನೂ ಅಶೋಕನ ರೀತಿಯಲ್ಲಿಯೇ ಬೌದ್ಧಧರ್ಮ ಪ್ರಚಾರಕ್ಕಾಗಿ ಮಧ್ಯಏಷ್ಯ ಹಾಗೂ ಚೀನಾಗಳಿಗೆ ನಿಯೋಗಗಳನ್ನು ಕಳುಹಿಸಿದ್ದನು.
- ಇವನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಸಹ ಪ್ರೋತ್ಸಾಹವನ್ನು ಪಡೆಯಿತು.

## ಅಧ್ಯಾಯ – 8

# ಗುಪ್ತರು ಮತ್ತು ವರ್ಧನರು.

**I. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

1. ಗುಪ್ತರು ತಮ್ಮ ನೆಲೆಯನ್ನು ________ ಪ್ರದೇಶದಿಂದ ಕಂಡುಕೊಂಡರು.
2. ಮೊದಲನೆಯ ಚಂದ್ರಗುಪ್ತನು ________ ಎಂದು ಕರೆಸಿಕೊಂಡನು.
3. ಕಾಳಿದಾಸನ ಶ್ರೇಷ್ಠ ನಾಟಕಗಳಲ್ಲಿ ________ ಒಂದು.
4. ವಿಶಾಖದತ್ತನ ಕೃತಿ ________
5. ಶೂದ್ರಕನು ಬರೆದ ಕೃತಿ ________
6. ವರ್ಧನ ವಂಶದ ಸ್ಥಾಪಕ ________
7. ಪುಲಕೇಶಿಯು ಹರ್ಷನನ್ನು ಸೋಲಿಸಿದನು ಎಂದು ______ ನ ಪ್ರಶಸ್ತಿಯಲ್ಲಿ ಉಲ್ಲೇಖವಾಗಿದೆ.
8. ________ ರ ದಾಳಿಗೆ ಒಳಗಾಗಿ ಗುಪ್ತ ಸಾಮ್ರಾಜ್ಯ ನಶಿಸಿತು.
9. ________ ನು ವಿಕ್ರಮಾದಿತ್ಯನೆಂಬ ಬಿರುದು ಪಡೆದನು.

**ಉತ್ತರಗಳು:– 1) ಪ್ರಯಾಗ 2) ಮಹಾರಾಜಾಧಿರಾಜ 3) ಮೇಘದೂತ 4) ಮುದ್ರಾರಾಕ್ಷಸ 5) ಮೃಚ್ಛಕಟಿಕ 6) ಪುಷ್ಯಭೂತಿ 7) ರವಿಕೀರ್ತಿ 8) ಹೂಣರ 9) 2ನೇ ಚಂದ್ರಗುಪ್ತ**

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.**

**1. ಎರಡನೇ ಚಂದ್ರಗುಪ್ತನ ಬಗ್ಗೆ ವಿವರಿಸಿ.**

- ಗುಪ್ತ ಸಾಮ್ರಾಜ್ಯದಲ್ಲಿಯೇ ಎರಡನೇ ಚಂದ್ರಗುಪ್ತನು ಅತ್ಯಂತ ಪ್ರಸಿದ್ಧ ಅರಸನಾಗಿದ್ದಾನೆ.
- ಸಮುದ್ರಗುಪ್ತನ ಸಾಮ್ರಾಜ್ಯವನ್ನು ಎರಡನೇ ಚಂದ್ರಗುಪ್ತನು ಮತ್ತಷ್ಟು ವಿಸ್ತರಿಸಿ ಸ್ಥಿರತೆಯನ್ನು ತಂದನು.
- ಇವನು ಶಕರನ್ನು ಸೋಲಿಸಿ ಪಶ್ಚಿಮ ಭಾರತವನ್ನು ಗುಪ್ತರ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.
- ಭಾರತದ ಅನೇಕ ರಾಜ ಮನೆತನಗಳೊಂದಿಗೆ ಈತನು ಮದುವೆ ಮೂಲಕ ಸಂಬಂಧವನ್ನು ಬೆಳೆಸಿ ಪ್ರಭಾವಿಯಾಗಿ ವಿಕ್ರಮಾದಿತ್ಯನೆಂಬ ಬಿರುದನ್ನು ಪಡೆದನು.
- ಇವನ ಕಾಲದಲ್ಲಿ ಯುದ್ಧಗಳಿಗಿಂತ ಸಾಹಿತ್ಯ ಹಾಗೂ ಕಲೆಗೆ ನೀಡಿದ ಪೋಷಣೆಯು ಸ್ಮರಣೀಯವಾಗಿದೆ.
- ಸುಪ್ರಸಿದ್ಧ ಸಂಸ್ಕೃತ ಕವಿ ಹಾಗೂ ನಾಟಕಕಾರ ಕಾಳಿದಾಸನು ಇವರ ಕಾಲಕ್ಕೆ ಸೇರಿದವನು.

**2. ಗುಪ್ತರ ಸಾಮ್ರಾಜ್ಯದ ಪತನಕ್ಕೆ ಕಾರಣಗಳೇನು?**

- ಹೂಣರ ದಾಳಿಗೆ ನಿರಂತರವಾಗಿ ಒಳಗಾಗಿ ಗುಪ್ತರ ಸಾಮ್ರಾಜ್ಯವು ಪತನ ಕಂಡಿತು.
- ಗುಪ್ತರು ಬೃಹತ್ ಸುಸಜ್ಜಿತ ಸೇನೆಯನ್ನೇನೂ ಹೊಂದಿರಲಿಲ್ಲ.

- ಸಾಮಂತರು ಸೈನ್ಯದ ಅವಶ್ಯಕತೆಯನ್ನು ಯುದ್ಧಗಳ ಸಮಯದಲ್ಲಿ ನೀಗುತ್ತಿದ್ದರು.
- ಸಾಮಂತರು ಇವರ ಕಾಲದಲ್ಲಿ ಬಹಳಷ್ಟು ಅಧಿಕಾರವನ್ನು ಪಡೆದು ದುರುಪಯೋಗಪಡಿಸಿಕೊಂಡರು.
- ಪುರೋಹಿತರು ದಾನದತ್ತಿ ಪಡೆದು ಆರ್ಥಿಕ ವಿನಾಯಿತಿ ಪಡೆದರು.
- ಕ್ರಮೇಣವಾಗಿ ಆ ಪ್ರದೇಶದ ನಿವಾಸಿಗಳು, ಕೃಷಿಕರು, ಕುಶಲಕರ್ಮಿಗಳು, ಭೂಮಾಲೀಕರ ಕಟ್ಟುಪಾಡಿಗೆ ಅಧೀನರಾದರು. ಹೀಗೆ ಸಮಾಜವು ಸಂಕೀರ್ಣ ಹಾದಿಯತ್ತ ಸಾಗಿತ್ತು.

**3. ಗುಪ್ತರ ಕಾಲದ ಶ್ರೇಷ್ಠ ವಿಜ್ಞಾನಿಗಳನ್ನು ಹೆಸರಿಸಿ.**

ವರಾಹಮಿಹಿರ, ಭಾಸ್ಕರ, ಆರ್ಯಭಟ, ಚರಕ ಹಾಗೂ ಶುಶ್ರುತ ಇವರು ಗುಪ್ತರ ಕಾಲದ ಶ್ರೇಷ್ಠ ವಿಜ್ಞಾನಿಗಳು.

**4. ವರ್ಧನರ ಆಡಳಿತವು ಯಾವ ರೀತಿ ನಡೆಯುತ್ತಿತ್ತು?**

- ರಾಜನ ಆಳ್ವಿಕೆಯಲ್ಲಿ ಮಂತ್ರಿಮಂಡಲವು ಸಹಕರಿಸುತ್ತಿತು. ಮಹಾಸಂಧಿವಿಗ್ರಹ (ಅನುಸಂಧಾನಗಳನ್ನು ಮಾಡುವವ), ಮಹಾಬಲಾಧಿಕೃತ (ಮಹಾಸೇನಾಪತಿ), ಭೋಗಪತಿ (ಕಂದಾಯ ಅಧಿಕಾರಿ), ದೂತ ಮುಂತಾದವರಿಂದ ಅಧಿಕಾರ ವರ್ಗವು ಕೂಡಿತ್ತು.
- ರಾಜ್ಯವು ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿತ್ತು.
- ಭೂಕಂದಾಯವೇ ರಾಜ್ಯದ ಮುಖ್ಯ ಆದಾಯವಾಗಿತ್ತು.
- ಸಾಮಂತ ರಾಜರುಗಳು ಇವನಿಗೆ ಕಪ್ಪವನ್ನು ಕೊಡುತ್ತಿದ್ದರು.
- ರಾಜನು ಇವರಿಗೆ ಭೂಮಿಯನ್ನು ಕೊಡುಗೆಯಾಗಿ ಕೊಟ್ಟು ಪ್ರತಿಯಾಗಿ ಸೈನ್ಯದ ಸಹಾಯವನ್ನು ಪಡೆಯುತ್ತಿದ್ದನು.
- ಅರಸನು ದುರ್ಬಲಗೊಂಡಾಗ ಸಾಮಂತರು ಸ್ವತಂತ್ರರಾದರು.

**5. ಗುಪ್ತರ ಇತಿಹಾಸ ತಿಳಿಯಲು ನಮಗೆ ದೊರಕುವ ಆಕರಗಳು ಯಾವುವು?**

ಗುಪ್ತರ ಇತಿಹಾಸ ತಿಳಿದುಕೊಳ್ಳಲು ಸಹಾಯಕವಾಗುವ ಆಕರಗಳು–

1. ಅಲಹಾಬಾದ್ ಸ್ತಂಭ ಶಾಸನ
2. ಮೆಹುರೂಲಿಯ ಸ್ತಂಭ ಶಾಸನ
3. ವಿಶಾಖದತ್ತನ ಮುದ್ರಾರಾಕ್ಷಸ ಮತ್ತು ದೇವಿ ಚಂದ್ರಗುಪ್ತ
4. ರಾಜಶೇಖರನ ಕಾವ್ಯಮೀಮಾಂಸೆ
5. ಕಾಳಿದಾಸನ ಕೃತಿಗಳು
6. ವಿಜ್ಜಿಕೆಯ ಕೌಮುದಿಮಹೋತ್ಸವ
7. ಫಾಹಿಯಾನ ಮತ್ತು ಇತ್ಸಿಂಗ್‌ರ ಬರವಣಿಗೆಗಳ.

6. “ಗುಪ್ತರ ಕಾಲವು ಸಾಹಿತ್ಯದ ಸುವರ್ಣಯುಗ” ಪ್ರತಿಪಾದಿಸಿ.

- ಸಮುದ್ರಗುಪ್ತನು ಸ್ವತಃ ಕವಿಯಾಗಿದ್ದನು.
- ಎರಡನೇ ಚಂದ್ರಗುಪ್ತನು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿ ಸುಪ್ರಸಿದ್ಧ ಸಂಸ್ಕೃತ ಕವಿ ಹಾಗೂ ನಾಟಕಕಾರ ಕಾಳಿದಾಸನ ಆಶ್ರಯದಾತನಾಗಿದ್ದನು.
- ಮೇಘದೂತ, ರಘುವಂಶ, ಕುಮಾರಸಂಭವ ಹಾಗೂ ಋತುಸಂಹಾರ ಅವನ ಕಾವ್ಯಗಳು. ಅಭಿಜ್ಞಾನ ಶಾಕುಂತಲವು ಅವನ ಶ್ರೇಷ್ಠ ನಾಟಕಗಳಲ್ಲಿ ಒಂದು.
- ಶೂದ್ರಕನ ಮೃಚ್ಛಕಟಿಕ ಹಾಗೂ ವಿಶಾಖದತ್ತನ ಮುದ್ರಾರಾಕ್ಷಸ ಈ ಕಾಲದ ಇತರ ಕೃತಿಗಳು.
- ಭಕ್ತಿಯನ್ನು ಆಧರಿಸಿದ ವಿವಿಧ ಧರ್ಮಗ್ರಂಥಗಳಾದ ಧರ್ಮಶಾಸ್ತ್ರಗಳು ಹಾಗೂ ಪುರಾಣಗಳು ಸೃಷ್ಟಿಯಾದವು.
- ವರಾಹಮಿಹಿರ, ಭಾಸ್ಕರ, ಆರ್ಯಭಟ, ಚರಕ ಹಾಗೂ ಶುಶ್ರುತ ಈ ಕಾಲದ ಶ್ರೇಷ ವಿಜ್ಞಾನಿಗಳು. ವರಾಹಮಿಹಿರ, ಭಾಸ್ಕರ ಮತ್ತು ಆರ್ಯಭಟ ಜ್ಯೋತಿಷ್ಯಶಾಸ್ತ್ರ, ಖಗೋಳ ಹಾಗೂ ಗಣಿತ ಅಧ್ಯಯನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದವರು.
- ಚರಕ ಹಾಗೂ ಶುಶ್ರುತರು ವೈದ್ಯಕೀಯ ಅಧ್ಯಯನವನು ಮಾಡಿದರು. ಚರಕನು ಚರಕ ಸಂಹಿತೆಯನ್ನು ರಚಿಸಿದನು. ಶುಶ್ರುತನು ಶಸ್ತ್ರಚಿಕಿತ್ಸೆಯನ್ನು ಕುರಿತಾದ ಶುಶ್ರುತ ಸಂಹಿತೆಯನ್ನು ರಚಿಸಿದನು.

## ಅಧ್ಯಾಯ – 9

# ದಕ್ಷಿಣ ಭಾರತ

**(ಸಾ.ಶ.ಪೂ. 3ನೇ ಶತಮಾನದಿಂದ ಸಾ.ಶ. 13ನೇ ಶತಮಾನದವರೆಗೆ)**

**I. ಕೆಳಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ.**

1. ಸೀಮುಖನು ______________ ನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು.
2. ಹಾಲನು ಬರೆದ ಗ್ರಂಥ ________________
3. ಕನ್ನಡದಲ್ಲಿ ದೊರೆತ ಮೊದಲ ಶಾಸನ _________
4. ಕದಂಬರ ರಾಜಧಾನಿ ಬನವಾಸಿಯು ಈಗಿನ _________ ಜಿಲ್ಲೆಯಲ್ಲಿದೆ.
5. ಗಂಗರ ಪ್ರಮುಖ ರಾಜ ________________
6. ಚಾವುಂಡರಾಯನು ರಚಿಸಿದ ಗ್ರಂಥ ____________
7. _________ ನಿರಂತರ ದಾಳಿಯಿಂದಾಗಿ ಶಾತವಾಹನ ಸಾಮ್ರಾಜ್ಯವು ಪತನಗೊಂಡಿತು.
8. ಕದಂಬರ ನಾಡಿನಲ್ಲಿ ________ಮತ್ತು _______ಬೌದ್ಧಧರ್ಮದ ಎರಡು ಕೇಂದ್ರಗಳಾಗಿದ್ದವು.
9. ಶ್ರವಣಬೆಳಗೊಳದ ಗೊಮ್ಮಟೇಶ್ವರ ಮೂರ್ತಿಗೆ ಇಂದಿಗೂ _______ ವರ್ಷಕ್ಕೊಮ್ಮೆ ಮಹಾಮಸ್ತಕಾಭಿಷೇಕ ನಡೆಯುತ್ತದೆ.

**ಉತ್ತರಗಳು:– 1) ಶ್ರೀ ಕಾಕುಲಮ್ 2) ಗತಶಪ್ತಸತಿ 3) ಹಲ್ಮಿಡಿ 4) ಉತ್ತರ ಕನ್ನಡ 5) ಧುರ್ವಿನಿತ 6) ಚಾವುಂಡ ಪುರಾಣ 7) ಶಕಪತ್ರಪರವು 8) ಅಜಂತ ಮತ್ತು ಬನವಾಸಿ 9) 12**

**II. ಸಂಕ್ಷೇಪವಾಗಿ ಉತ್ತರಿಸಿ.**

**1 ಶಾತವಾಹನರ ಕೊನೆಯ ಅರಸನಾರು? ಈ ಸಂತತಿಯು ಹೇಗೆ ಕ್ಷೀಣಿಸಿತು?**

ಯಜ್ಞಶ್ರೀ ಶಾತಕರ್ಣಿಯು ಶಾತವಾಹನರ ವಂಶದ ಕೊನೆಯರಸ.

ಅವನ ಕಾಲದಲ್ಲಿ ಶಕಕ್ಷತ್ರಪರವು ನಿರಂತರ ದಾಳಿಯಿಂದಾಗಿ ಸಾಮ್ರಾಜ್ಯವು ಪತನಗೊಂಡಿತು.

**2 ಶಾತವಾಹನ ಕಲೆಯ ಬಗ್ಗೆ ಬರೆಯಿರಿ.**

- ಶಾತವಾಹನರ ಕಾಲದಲ್ಲಿ ಅಜಂತ ಮತ್ತು ಅಮರಾವತಿಯ ಚಿತ್ರಕಲೆಗಳು ರಚನೆಗೊಂಡವು.
- ದೇವಾಲಯ, ವಿಹಾರ ಮತ್ತು ಚೈತ್ಯಾಲಯಗಳನ್ನು ಕಟ್ಟಲಾಯಿತು.
- ಕಾರ್ಲೆಯಲ್ಲಿ ಚೈತ್ಯಾಲಯವನ್ನು ಬನವಾಸಿಯ ಶ್ರೀಮಂತ ವರ್ತಕ ಭೂತಪಾಲನು ನಿರ್ಮಿಸಿದನು.
- ಶಾತವಾಹನರ ಭಾರತದ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿ ಶ್ರೀಮಂತಗೊಳಿಸಿದ್ದಾರೆ.

**3 ಗಂಗರ ಸಮಾಜವು ಯಾವ ಮೌಲ್ಯಗಳಿಂದ ಪ್ರಭಾವಿತವಾಗಿದ್ದಿತು?**

- ಗಂಗರ ಸಮಾಜದಲ್ಲಿ ಸತ್ಯಶೀಲತೆ, ಸ್ವಾಮಿನಿಷ್ಠೆ, ಶೌರ್ಯ ಮತ್ತು ತಾಳ್ಮೆ ಎಂಬ ಸಾಮಾಜಿಕ ಮೌಲ್ಯಗಳು ಪ್ರಭಾವಿಯಾಗಿದ್ದವು.
- ಗಂಗರ ಕಾಲದ ಸಮಾಜ ಹಲವು ಪಂಗಡ ಜಾತಿಗಳಾಗಿವಿಭಜಿತವಾಗಿದ್ದರೂ ಪರಸ್ಪರಾವಲಂಬಿಗಳಾಗಿದ್ದರು.
- ಪಿತೃ ಪ್ರಧಾನ ಅವಿಭಕ್ತ ಕುಟುಂಬ ಪದ್ಧತಿ ಸಾಮಾನ್ಯವಾಗಿತ್ತು.

**4 ಗಂಗರ ಕಾಲದ ನಾಲ್ಕು ಗ್ರಂಥಗಳನ್ನು ಹೆಸರಿಸಿ.**

ಸಾಹಿತ್ಯಾಭಿಮಾನಿಗಳಾದ ಗಂಗರಾಜರು ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಪ್ರೋತ್ಸಾಹ ನೀಡಿದ್ದರಿಂದ ಗ್ರಂಥ ರಚನೆಗಳಾದುವು.

1. ಇಮ್ಮಡಿ ಮಾಧವನ 'ದತ್ತಕ ಸೂತ್ರ'ಕ್ಕೆ ಟಿಪ್ಪಣಿ,
2. ದುರ್ವಿನೀತನು 'ಶಬ್ದಾವತಾರ',
3. ಗುಣಾಢ್ಯನ 'ವಡ್ಡಕತೆ'ಯನ್ನು,
4. ಶ್ರೀ ಪುರುಷನು 'ಗಜಶಾಸ್ತ್ರ'ವನ್ನು,
5. ಎರಡನೇ ಶಿವಮಾಧವನು 'ಗಜಾಷ್ಟಕ',
6. ಹೇಮಸೇನನು 'ರಾಘವ ಪಾಂಡವೀಯ'ವನ್ನು,
7. ವಾದೀಬಸಿಂಹನು 'ಗದ್ಯ ಚಿಂತಾಮಣಿ' ಮತ್ತು 'ಷಾತ್ರ ಚೂಡಾಮಣಿ'ಯನ್ನು,
8. ನೇಮಿಚಂದ್ರನು 'ದ್ರವ್ಯಸಾರ ಸಂಗ್ರಹ'ವನ್ನು,
9. ಚಾವುಂಡರಾಯನು 'ಚಾವುಂಡ ಪುರಾಣ'ವನ್ನು ರಚಿಸಿದರು.

**5. ಕರ್ನಾಟಕ ಮತ್ತು ಭಾರತದ ಸಂಸ್ಕೃತಿಗೆ ಕದಂಬರ ಕೊಡುಗೆ ಏನು?**

- ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿಗೆ ಕದಂಬರ ಕೊಡುಗೆ ವೈಶಿಷ್ಟ್ಯಪೂರ್ಣವಾಗಿದೆ.
- ಕದಂಬರು ಆಳಿದ ಪ್ರದೇಶವು ಸುಮಾರು ಮೂರು ಶತಮಾನಗಳ ಕಾಲ ರಾಜಕೀಯ ಐಕ್ಯತೆಗೆ ಒಳಗಾಗಿತ್ತು.
- ಆಡಳಿತದಲ್ಲಿ ಮಾಂಡಲಿಕರು, ರಾಜ ಪುರೋಹಿತರು, ಮಂತ್ರಿಗಳು, ಸೇನಾಧಿಪತಿಗಳು ಪ್ರಮುಖ ಪಾತ್ರವಹಿಸಿದ್ದರು.
- ಆಡಳಿತದ ಅನುಕೂಲಕ್ಕಾಗಿ ಪ್ರಾಂತಾಧಿಕಾರಿಗಳನ್ನು ಪ್ರಾಂತ್ಯವನ್ನು ನೋಡಿಕೊಳ್ಳುವಂತೆ ನೇಮಿಸುತ್ತಿದ್ದರು.

**6. ಗಂಗರ ಆಡಳಿತದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.**

- ರಾಜನಿಗೆ ಸಹಾಯಕವಾಗಿ ಮಂತ್ರಾಲೋಚನೆ ಸಭೆಯಿತ್ತು. ಮಂತ್ರಿಗಳು ವಿವಿಧ ಆಡಳಿತ ಶಾಖೆಗಳ ಮೇಲ್ವಿಚಾರಣೆ ನಡೆಸುತ್ತಿದ್ದರು.
- ಗ್ರಾಮಾಡಳಿತವು ಸುವ್ಯವಸ್ಥಿತವಾಗಿತ್ತು.
- ಗ್ರಾಮಸಭೆಯು ಭೂಕಂದಾಯ, ತೆರಿಗೆ, ನ್ಯಾಯ, ನೈರ್ಮಲ್ಯ, ರಕ್ಷಣೆಗಳನ್ನು ಗಮನಿಸುತ್ತಿದ್ದಿತು.
- ವ್ಯವಸಾಯವು ಮುಖ್ಯ ಕಸುಬಾಗಿದ್ದಿತು. ನೇಯ್ಗೆ, ಕಮ್ಮಾರಿಕೆ ಮುಂತಾದ ಕಸುಬುಗಳಿದ್ದವು.
- ಇತರ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು.

**7. ಶಿಕ್ಷಣಕ್ಕೆ ಗಂಗರ ಕೊಡುಗೆಯನ್ನು ತಿಳಿಸಿ.**

ಚೈತ್ಯಾಲಯ, ದೇವಾಲಯ, ಮಠ ಹಾಗೂ ಅಗ್ರಹಾರಗಳು ಶಿಕ್ಷಣ ನೀಡುವ ಕೇಂದ್ರಗಳಾಗಿದ್ದವು. ಉನ್ನತ ವಿದ್ಯಾಭ್ಯಾಸಕ್ಕೆ ಬ್ರಹ್ಮಪುರಿ ಮತ್ತು ಘಟಿಕ ಸ್ಥಾನಗಳಿದ್ದವು. ತಲಕಾಡು, ಶ್ರವಣಬೆಳಗೊಳ, ಬಂಕಾಪುರ ಮತ್ತು ಪೆರೂರುಗಳನ್ನು ಜ್ಞಾನಾರ್ಜನೆಯ ಕೇಂದ್ರಗಳೆಂದು ಹೆಸರಿಸಲಾಗಿದೆ.

**8. ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳು ಯಾವುವು?**

ನಾಸಿಕ್, ಕಲ್ಯಾಣ, ಬ್ರೋಚ್ ಮತ್ತು ಭಟ್ಕಳಗಳು ಶಾತವಾಹನರ ಕಾಲದ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು.

**ಅಧ್ಯಾಯ – 10**

# ಬಾದಾಮಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿ.**

1. ಪುಲಿಕೇಶಿಯು ಸೋಲಿಸಿದ ಪಲ್ಲವರ ದೊರೆ ________
2. ಕರ್ನಾಟಕ ಎಂಬ ಹೆಸರನ್ನು ಕೊಟ್ಟ ರಾಜವಂಶದವರು ______
3. 'ಹರ ಪಾರ್ವತೀಯ' ಸಂಸ್ಕೃತ ನಾಟಕದ ಕರ್ತೃ ________
4. 'ವಾತಾಪಿಕೊಂಡ' ಎಂಬ ಬಿರುದು ಪಡೆದ ಪಲ್ಲವರ ರಾಜ ________
5. 'ಅರ್ಜುನನ ತಪಸ್ಸು' ಎಂಬ ಕಲಾಕೃತಿಯು ________ ದಲ್ಲಿದೆ.
6. ಇಮ್ಮಡಿ ಪುಲಕೇಶಿಯು ಹರ್ಷವರ್ಧನನನ್ನು ________ ನದಿಯ ದಂಡೆಯಲ್ಲಿ ತಡೆಗಟ್ಟಿ ಸೋಲಿಸಿದನು.
7. ಚೀನಿ ಯಾತ್ರಿಕ ________ ನು ಚಾಳುಕ್ಯ ರಾಜಧಾನಿಗೆ ಭೇಟಿ ನೀಡಿದ್ದನು.
8. ಪಲ್ಲವರ ದೊರೆಯಾದ ________ ನು ಪುಲಕೇಶಿಯನ್ನು ಸೋಲಿಸಿ ಚಾಳುಕ್ಯರ ಮೇಲೆ ಸೇಡು ತೀರಿಸಿಕೊಂಡನು.
9. ಚಾಳುಕ್ಯರು ಪ್ರಾರಂಭಿಸಿದ ವಿಶಿಷ್ಟ ಶಿಲ್ಪಕಲಾ ಶೈಲಿ ________
10. ________ಗಳು ಪಲ್ಲವರ ಕಾಲದ ತಮಿಳು ಸಾಹಿತ್ಯದ ನಿಧಿ.

**ಉತ್ತರಗಳು– 1) ಮಹೇಂದ್ರವರ್ಮ 2) ಚಾಳುಕ್ಯ 3) ಶಿವಭಟ್ಟಾರಕ 4) ನರಸಿಂಹ ವರ್ಮ 5) ಮಹಬಲಿಪುರಂ 6) ನರ್ಮದಾ 7) ಹ್ಯೂಯೆನ್‌ತ್ಸಾಂಗ 8) ಪ್ರಥಮ ನರಸಿಂಹವರ್ಮ 9) ಚಾಳುಕ್ಯ ಶೈಲಿ 10) ತಮಿಳಿನಲ್ಲಿ ಶ್ಲೋಕ**

**II. ಸಂಕ್ಷೇಪವಾಗಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.**

**1. ಎರಡನೇ ಪುಲಿಕೇಶಿ ಸಾಮ್ರಾಜ್ಯವನ್ನು ಹೇಗೆ ವಿಸ್ತರಿಸಿದನು?**

- ಬಾದಾಮಿ ಚಾಲುಕ್ಯರ ರಾಜವಂಶದ ಅತ್ಯಂತ ಶಕ್ತಿಶಾಲಿಯಾದ ಇಮ್ಮಡಿ ಪುಲಿಕೇಶಿಯು ಗಂಗರು, ಕದಂಬರು ಮತ್ತು ಅಳುಪರನ್ನು ಗೆದ್ದು ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿದನು.
- ದೊರೆ ಮಹೇಂದ್ರವರ್ಮನು ಪುಲಿಕೇಶಿಯ ಪರಮಾಧಿಕಾರತ್ವವನ್ನು ಒಪ್ಪಿಕೊಳ್ಳದ ಕಾರಣ ಪುಲಿಕೇಶಿಯು ಆತನನ್ನು ಸೋಲಿಸಿದನು.
- ಉತ್ತರ ಭಾರತವನ್ನು ಆಳುತ್ತಿದ್ದ ಹರ್ಷವರ್ಧನನನ್ನು ನರ್ಮದಾ ನದಿಯ ದಂಡೆಯಲ್ಲಿ ತಡೆಗಟ್ಟಿ ಸೋಲಿಸಿ, 'ದಕ್ಷಿಣಾ ಪಥೇಶ್ವರ', 'ತ್ರಿಸಾಗರಗಳಿಂದಾವೃತವಾದ ಪ್ರದೇಶದ ಅಧಿಪತಿ' ಎಂಬ ಬಿರುದಾಂಕಿತನಾದನು.

**2. ಚಾಳುಕ್ಯರ ಆಡಳಿತ ವ್ಯವಸ್ಥೆ ಬಗ್ಗೆ ತಿಳಿಸಿ.**

- ಚಾಲುಕ್ಯರ ರಾಜರು ಸಕ್ರಿಯವಾಗಿ ಆಡಳಿತದಲ್ಲಿ ಭಾಗವಹಿಸುತ್ತಿದ್ದನು.
- ರಾಜ್ಯವನ್ನು ವಿಷಯ (ಜಿಲ್ಲೆ) ಎಂಬುದಾಗಿ ವಿಂಗಡಿಸಿ ವಿಷಯಾಧಿಪತಿಯು ನೋಡಿಕೊಳ್ಳುತ್ತಿದ್ದನು.
- ಗ್ರಾಮವು ಆಡಳಿತ ಘಟಕಗಳಲ್ಲಿ ಅತ್ಯಂತ ಚಿಕ್ಕದು.
- ಗ್ರಾಮ ಮುಖ್ಯಸ್ಥರು ಲೆಕ್ಕಪತ್ರಗಳ ವಹಿವಾಟನ್ನು ನೋಡಿಕೊಳ್ಳುತ್ತಿದ್ದರು.

**3. ಚಾಳುಕ್ಯರು ಸಾಹಿತ್ಯ ಪ್ರಿಯರು ಎನ್ನುವುದನ್ನು ಉದಾಹರಣೆ ಸಹಿತ ವಿವರಿಸಿ.**

- ಬಾದಾಮಿಯ ಚಾಳುಕ್ಯರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಸಾಹಿತ್ಯಪ್ರಿಯರಾಗಿದ್ದರು.
- ಕನ್ನಡ ಹಾಗೂ ಸಂಸ್ಕೃತ ಭಾಷೆಗಳು ಚೆನ್ನಾಗಿ ಬೆಳೆದವು. ಕನ್ನಡವು ಅವರ ದೇಶ ಭಾಷೆಯಾಗಿತ್ತು.
- ಈ ಕಾಲದ ಕಾವ್ಯದಲ್ಲಿ ತ್ರಿಪದಿ ಶೈಲಿಯು ಬೆಳವಣಿಗೆಯಾಯಿತು.
- ಕನ್ನಡದಲ್ಲಿ ಕೃತಿಗಳು ಇಲ್ಲವಾದರೂ ಅನೇಕ ಶಾಸನಗಳು ಕನ್ನಡದಲ್ಲಿ ಬರೆಯಲ್ಪಟ್ಟಿವೆ.
- ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದ ಒಂದು ಪದ್ಯವು ತ್ರಿಪದಿ ಶೈಲಿಯಲ್ಲಿರುವುದು ಕಂಡುಬರುತ್ತದೆ.
- ಈ ಕಾಲದ ಸಂಸ್ಕೃತ ವಿದ್ವಾಂಸರುಗಳೆಂದರೆ ರವಿಕೀರ್ತಿ, ವಿಜ್ಜಿಕ ಮತ್ತು ಅಕಳಂಕರು.
- ಎರಡನೇ ಪುಲಿಕೇಶಿಯ ಸೊಸೆಯಾದ ವಿಜ್ಜಿಕ ಎಂಬ ಕವಿಯತ್ರಿಯು ಬರೆದ 'ಕೌಮುದೀಮಹೋತ್ಸವ', ಶಿವಭಟ್ಟಾರಕನ 'ಹರ ಪಾರ್ವತೀಯ' ಮುಖ್ಯವಾದ ಸಂಸ್ಕೃತ ನಾಟಕಗಳಾಗಿವೆ.

**4. ಕಂಚಿಯನ್ನಾಳಿದ ಪಲ್ಲವ ಅರಸರುಗಳನ್ನು ಹೆಸರಿಸಿ.**

ಶಿವಸ್ಕಂದವರ್ಮ,
ಮಹೇಂದ್ರವರ್ಮ,
ನರಸಿಂಹವರ್ಮ

**5. ಸಂಸ್ಕೃತಕ್ಕೆ ಮತ್ತು ತಮಿಳಿಗೆ ಪಲ್ಲವರು ಯಾವ ರೀತಿ ಪ್ರೋತ್ಸಾಹ ನೀಡಿದರು?**

- ಪಲ್ಲವರು ಸಂಸ್ಕೃತ ಮತ್ತು ತಮಿಳು ಭಾಷೆಗಳೆರಡಕ್ಕೂ ಪ್ರೋತ್ಸಾಹ ನೀಡಿದರು.
- ಕಂಚಿಯು ಸಂಸ್ಕೃತ ಸಾಹಿತ್ಯದ ಕೇಂದ್ರವಾಗಿತ್ತು.
- ಪಲ್ಲವರ ಆಸ್ಥಾನದಲ್ಲಿದ್ದ ಕವಿಗಳು ಭಾರವಿ (ಕಿರಾತಾರ್ಜುನೀಯ) ಹಾಗೂ ದಂಡಿ (ದಶಕುಮಾರ ಚರಿತ).
- ರಾಜ ಮಹೇಂದ್ರವರ್ಮನು ಸ್ವತಃ 'ಮತ್ತ ವಿಲಾಸ ಪ್ರಹಸನ' ಎಂಬ ಸಾಮಾಜಿಕ ನಾಟಕವನ್ನು ಹಾಗೂ 'ಭಗವದುಜ್ಜುಕ' ಗ್ರಂಥವನ್ನು ರಚಿಸಿದ್ದಾನೆ.

**6. ಎರಡನೇ ಪುಲಕೇಶಿಯು ಚಾಲುಕ್ಯರ ಮಹಾನ್ ಅರಸ ಎಂದು ಸಮರ್ಥಿಸಿ.**

- ಬಾದಾಮಿ ಚಾಲುಕ್ಯರ ಅತ್ಯಂತ ಶಕ್ತಿಶಾಲಿ ಚಕ್ರವರ್ತಿಯಾದ ಇಮ್ಮಡಿ ಪುಲಿಕೇಶಿಯು ಗಂಗರು, ಕದಂಬರು ಮತ್ತು ಅಳುಪರನ್ನು ಗೆದ್ದು, ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿದನು.
- ದಕ್ಷಿಣ ದಖ್ಖನ್ನಿನಲ್ಲಿ ಪಲ್ಲವರು ತಮ್ಮ ವೈಭವ ಕಾಲದಲ್ಲಿದ್ದರು. ದೊರೆ ಮಹೇಂದ್ರವರ್ಮನು ಪುಲಿಕೇಶಿಯ ಪರಮಾಧಿಕಾರತ್ವವನ್ನು ಒಪ್ಪಿಕೊಳ್ಳದ ಕಾರಣ ಪುಲಿಕೇಶಿಯು ಆತನನ್ನು ಸೋಲಿಸಿದನು.
- ಉತ್ತರ ಭಾರತವನ್ನು ಆಳುತ್ತಿದ್ದ ಹರ್ಷವರ್ಧನನನ್ನು ನರ್ಮದಾ ನದಿಯ ದಂಡೆಯಲ್ಲಿ ತಡೆಗಟ್ಟಿ ಸೋಲಿಸಿ, 'ದಕ್ಷಿಣಾ ಪಥೇಶ್ವರ', 'ತ್ರಿಸಾಗರಗಳಿಂದಾವೃತವಾದ ಪ್ರದೇಶದ ಅಧಿಪತಿ' ಎಂಬ ಬಿರುದಾಂಕಿತನಾದನು.
- ಇಮ್ಮಡಿ ಪುಲಿಕೇಶಿಗೆ ತನ್ನ ಚಕ್ರಾಧಿಪತ್ಯವೆಲ್ಲವನ್ನೂ ಒಂದೇ ಕೇಂದ್ರದಿಂದ ಆಳಲು ಸಾಧ್ಯವಾಗಲಿಲ್ಲ. ಆದುದರಿಂದ ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನನ್ನು ವೆಂಗಿ ಮತ್ತು ಜಯಸಿಂಹನನ್ನು ಗುಜರಾತ್ ಪ್ರಾಂತ್ಯದ ಅಧಿಕಾರಿಗಳನ್ನಾಗಿ ನೇಮಿಸಿದನು.
- ಹ್ಯೂಯೆನ್‌ತ್ಸಾಂಗನು ಚಾಳುಕ್ಯ ರಾಜಧಾನಿಗೆ ಭೇಟಿ ನೀಡಿದ್ದನು.
- ಇವನ ಪ್ರಕಾರ ದೊರೆಯು ನ್ಯಾಯವಾದಿ ಹಾಗೂ ಕರುಣಾಳುವಾಗಿದ್ದನು ಅಂತೆಯೇ ರಾಜನಿಗೆ ಪ್ರಜೆಗಳಲ್ಲಿ ಅಪಾರ ಪ್ರೀತಿ ಇದ್ದಿತು ಎಂದು ಬರೆದಿದ್ದಾನೆ.
- ಇಮ್ಮಡಿ ಪುಲಿಕೇಶಿಯು ಆಶಾವಾದಿ ಚಕ್ರವರ್ತಿ ಆಗಿದ್ದನು. ವಿದೇಶಿ ದೊರೆಗಳೊಂದಿಗೂ ಕೂಡ ಸ್ನೇಹಮಯ ಸಂಬಂಧಗಳನ್ನು ಈತನು ಹೊಂದಿದ್ದನು.
- ಪರ್ಶಿಯನ್ ದೊರೆಯಾದ ಇಮ್ಮಡಿ ಖುಸ್ರುವಿನೊಡನೆ ರಾಯಭಾರಿ ಸಂಬಂಧಗಳನ್ನು ಹೊಂದಿದ್ದನೆಂದು ಅರಬ್ ಇತಿಹಾಸಕಾರರು ತಿಳಿಸುತ್ತಾರೆ.

**7. ಚಾಲುಕ್ಯರ ಆಸ್ಥಾನಕ್ಕೆ ಬೇಟಿ ನೀಡಿದ್ದ ಚೀನಿಯಾತ್ರಿಕನ ಬಗ್ಗೆ ಟಿಪ್ಪಣಿ ಬರೆಯಿರಿ.**

- ಹ್ಯೂಯೆನ್‌ತ್ಸಾಂಗನು ಚಾಳುಕ್ಯ ರಾಜಧಾನಿಗೆ ಭೇಟಿ ನೀಡಿದ್ದನು.

- ಇಮ್ಮಡಿ ಪುಲಿಕೇಶಿ ಮತ್ತು ಚಾಳುಕ್ಯ ರಾಜ್ಯದ ಬಗ್ಗೆ ವಿವರಣೆಗಳನ್ನು ನೀಡಿದ್ದಾನೆ.
- ದೊರೆಯು ನ್ಯಾಯವಾದಿ ಹಾಗೂ ಕರುಣಾಳುವಾಗಿದ್ದನು.
- ಸೈನ್ಯವು ಶಿಸ್ತಿನಿಂದ ಕೂಡಿದ್ದು, ಸೈನಿಕರು ಮರಣಕ್ಕೆ ಹೆದರದೆ ಮೈಮರೆತು ಕಾದಾಡುವ ಯೋಧರಾಗಿದ್ದರು.
- ಪ್ರಜೆಗಳು ಸತ್ಯಪ್ರಿಯರಾಗಿದ್ದರು. ಸಂತೋಷಚಿತ್ತರು, ಸ್ವಾಭಿಮಾನಿಗಳು, ಸಂಪದ್ಭರಿತರೂ, ಗೌರವ ಪ್ರಿಯರು ಮತ್ತು ರಾಜನಿಷ್ಠರಾಗಿದ್ದರು.
- ರಾಜನಲ್ಲಿ ಅತ್ಯಂತ ಗೌರವ, ಅಂತೆಯೇ ರಾಜನಿಗೆ ಪ್ರಜೆಗಳಲ್ಲಿ ಅಪಾರ ಪ್ರೀತಿ ಇದ್ದಿತು ಎಂದು ಬರೆದಿದ್ದಾನೆ.

## ಅಧ್ಯಾಯ –11
# ಮಾನ್ಯಖೇಟದ ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಳುಕ್ಯರು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿ.**

1. ರಾಷ್ಟ್ರಕೂಟರ ವಂಶದ ಸಂಸ್ಥಾಪಕ ____________
2. ರಾಷ್ಟ್ರಕೂಟರ ಅವನತಿಗೆ ಕಾರಣನಾದ ಕಲ್ಯಾಣದ ಚಾಲುಕ್ಯರ ಅರಸ ____________
3. 'ಕವಿರಹಸ್ಯ' ಕೃತಿಯನ್ನು ಬರೆದವನು ____________
4. ಪೊನ್ನನು ರಚಿಸಿದ ಪ್ರಸಿದ್ಧ ಕಾವ್ಯ ____________
5. ಕಲ್ಯಾಣ ಚಾಳುಕ್ಯರ ಪ್ರಸಿದ್ಧ ದೊರೆ ____________
6. 'ಸಾಮಾಜಿಕ ಕ್ರಾಂತಿಯ ಹರಿಕಾರ' ಎಂದು ಕರೆಯಬಹುದಾದವರು ____________
7. ಕನ್ನಡದ ಮೊದಲ ಗ್ರಂಥ ____________
8. ರಾಷ್ಟ್ರಕೂಟರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ಅರಬ್ ಯಾತ್ರಿಕ ____________
9. ಕಲ್ಯಾಣವೆಂಬ ಹೊಸ ನಗರವನ್ನು ಕಟ್ಟಿ ರಾಜಧಾನಿಯನ್ನಾಗಿ ಮಾಡಿದ ಕೀರ್ತಿ ________ ಸಲ್ಲುತ್ತದೆ.
10. ಆರನೆಯ ವಿಕ್ರಮಾದಿತ್ಯನು ಸಾ.ಶ. 1076ರಲ್ಲಿ ________ ಶಕೆಯನ್ನು ಆರಂಭಿಸಿದನು.

**ಉತ್ತರಗಳು– 1) ದಂತಿದುರ್ಗ 2) 2ನೇ ತೈಲಪ 3) ಹಾಲಾಯುಧ 4) ಶಾಂತಿಪುರಾಣ 5) ವಿಕ್ರಮಾಧಿತ್ಯ 6) ಬಸವೇಶ್ವರ/ ಬಸವಣ್ಣ 7) 'ಕವಿರಾಜಮಾರ್ಗ' 8) ಸುಲೈಮಾನ್ 9) ಒಂದನೇ ಸೋಮೇಶ್ವರನಿಗೆ 10. ಚಾಳುಕ್ಯ ವಿಕ್ರಮ**

**II. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಉತ್ತರಿಸಿ.**

**1. ರಾಷ್ಟ್ರಕೂಟರ ಆಡಳಿತ ವ್ಯವಸ್ಥೆ ಹೇಗಿತ್ತು?**

- ರಾಷ್ಟ್ರಕೂಟರ ರಾಜತ್ವವು ವಂಶಪಾರಂಪರ್ಯವಾಗಿತ್ತು.
- ಅರಸರಿಗೆ ಸಹಾಯ ಮಾಡಲು ಮಂತ್ರಿ ಮಂಡಲವಿರುತ್ತಿತ್ತು. ಮಂತ್ರಿ ಮಂಡಲದಲ್ಲಿ ವಿದೇಶೀ ವ್ಯವಹಾರ ನೋಡಿಕೊಳ್ಳುವ ಮಹಾ ಸಂಧಿವಿಗ್ರಹಿಯೆಂಬ ಗಣ್ಯನು ಇದ್ದನು.
- ಆಡಳಿತದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ರಾಷ್ಟ್ರ (ಮಂಡಲ), ವಿಷಯ, ನಾಡು, ಗ್ರಾಮಗಳಾಗಿ ವಿಭಜಿಸಲಾಗಿತ್ತು.
- ಗ್ರಾಮದ ಮುಖ್ಯಸ್ಥನಿಗೆ ಗ್ರಾಮಪತಿ ಅಥವಾ ಪ್ರಭುಗಾವುಂಡ ಎಂದು ಕರೆಯುತ್ತಿದ್ದರು. ಗ್ರಾಮ ಸೈನ್ಯಕ್ಕೆ ಈತನೇ ಮುಖ್ಯಸ್ಥ. ಗ್ರಾಮ ಲೆಕ್ಕಿಗ ಈತನ ಸಹಾಯಕ. ಗ್ರಾಮ ಸಭೆಗಳೂ ಇದ್ದವು.
- ನಾಡುಗಳಲ್ಲಿ ನಾಡಗಾವುಂಡ ಎಂಬ ಅಧಿಕಾರಿ ಇರುತ್ತಿದ್ದನು.
- ಇದೇ ರೀತಿ ವಿಷಯ ಮತ್ತು ರಾಷ್ಟ್ರಗಳ ಮೇಲೂ ಅಧಿಕಾರಿಗಳಿದ್ದರು. ವಿಷಯಪತಿ ಮತ್ತು ರಾಷ್ಟ್ರಪತಿ ಜಿಲ್ಲೆ ಅಥವಾ ವಿಷಯಕ್ಕೂ ಹಾಗೂ ರಾಷ್ಟ್ರಕ್ಕೂ ಅಧಿಕಾರಿಗಳಾಗಿದ್ದರು.
- ಭೂಕಂದಾಯ, ಸರಕು, ಮನೆ, ಅಂಗಡಿಗಳ ಮೇಲಿನ ಸುಂಕ, ನದಿ ದಾಟಿಸುವಂತಹ ವೃತ್ತಿಗಳ ಮೇಲಿನ ತೆರಿಗೆ ಮೊದಲಾದವು ರಾಜ್ಯದ ಆದಾಯವಾಗಿದ್ದವು.
- ವಿದೇಶಿ ವ್ಯಾಪಾರದಿಂದ ರಾಜ್ಯಕ್ಕೆ ಅಪಾರ ಸುಂಕ ಬರುತ್ತಿತ್ತು.

**2. ರಾಷ್ಟ್ರಕೂಟರ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ ಬರೆಯಿರಿ.**

- ಅಗ್ರಹಾರಗಳು, ಮಠಗಳು ರಾಷ್ಟ್ರಕೂಟರ ಪ್ರಮುಖ ಶೈಕ್ಷಣಿಕ ಕೇಂದ್ರಗಳಾಗಿದ್ದವು.
- ಸಂಸ್ಕೃತ, ವೇದ, ಜ್ಯೋತಿಷ್ಯ, ತರ್ಕಶಾಸ್ತ್ರ, ಪುರಾಣಗಳಲ್ಲಿ ಶಿಕ್ಷಣ ನೀಡುತ್ತಿದ್ದರು.
- ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಾಲೊಟಗಿ ಪ್ರಮುಖ ವಿದ್ಯಾ ಕೇಂದ್ರಗಳಲ್ಲೊಂದಾಗಿತ್ತು.

**3. ಎಲ್ಲೋರದ ಕೈಲಾಸ ದೇವಸ್ಥಾನದ ಬಗ್ಗೆ ಬರೆಯಿರಿ.**

- ರಾಷ್ಟ್ರಕೂಟ ಅರಸರು ಎಲ್ಲೋರದಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿರುವ ದೇವಾಲಯಗಳು ಭಾರತೀಯ ಕಲೆಗೆ ಇವರು ನೀಡಿರುವ ಮಹಾನ್ ಕಾಣಿಕೆಗಳಾಗಿವೆ.
- ಒಂದನೇ ಕೃಷ್ಣನು ಕೊರೆಸಿದ ಎಲ್ಲೋರಾದ ಕೈಲಾಸ ಮಂದಿರವು ಏಕಶಿಲೆಯ ಅದ್ಭುತ ರಚನೆಯಾಗಿದೆ.
- 100 ಅಡಿ ಎತ್ತರ, 276 ಅಡಿ ಉದ್ದ ಹಾಗೂ 154 ಅಡಿ ಅಗಲವಾಗಿದ್ದು, ಬೃಹತ್ ಬಂಡೆಯನ್ನು ಕೊರೆದು ಕಟ್ಟಲಾಗಿದೆ.
- ಇಲ್ಲಿ ಪ್ರಸಿದ್ಧ ದಶಾವತಾರ ಗುಹಾಲಯವಿದೆ.

**4. ಕಲ್ಯಾಣ ಚಾಳುಕ್ಯರು ಸಾಹಿತ್ಯಕ್ಕೆ ಯಾವ ರೀತಿ ಉತ್ತೇಜನ ನೀಡಿದರು?**

- ಕಲ್ಯಾಣ ಚಾಲುಕ್ಯರು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಬೆಳವಣಿಗೆಗೆ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಟ್ಟರು.
- ಜೈನ ವಿದ್ವಾಂಸರ ನೆರವಿನಿಂದ ಕನ್ನಡ ಸಾಹಿತ್ಯವು ಅಭಿವೃದ್ಧಿ ಹೊಂದಿತು.
- ರನ್ನನು ಬರೆದ 'ಗದಾಯುದ್ಧ' (ಸಾಹಸಭೀಮ ವಿಜಯ), ದುರ್ಗಸಿಂಹನ 'ಪಂಚತಂತ್ರ', ಬಿಲ್ಹಣನ 'ವಿಕ್ರಮಾಂಕದೇವ ಚರಿತ', ನಯಸೇನನ 'ಧರ್ಮಾಮೃತ' ಹಾಗೂ ವಿಜ್ಞಾನೇಶ್ವರನು ಬರೆದ ಕಾನೂನು ಗ್ರಂಥ 'ಮಿತಾಕ್ಷರ' ಮುಖ್ಯವಾದ ಗ್ರಂಥಗಳಾಗಿವೆ.
- ರಾಜ ಮೂರನೆಯ ಸೋಮೇಶ್ವರನು ಬರೆದ 'ಮಾನಸೋಲ್ಲಾಸ' ಸಂಸ್ಕೃತ ವಿಶ್ವಕೋಶವೆನಿಸಿದೆ.
- ಜಗದೇಕಮಲ್ಲನು 'ಸಂಗೀತ ಚೂಡಾಮಣಿ' ಗ್ರಂಥದ ಕರ್ತೃ.

- ಚಾಲುಕ್ಯರ ಕಾಲದ ವಿಶಿಷ್ಟ ಕೊಡುಗೆ ವಚನ ಸಾಹಿತ್ಯ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಾಚಯ್ಯ ಮುಂತಾದವರು ಗಣ್ಯವಚನಕಾರರಾಗಿದ್ದರು.

**5. ಕಲ್ಯಾಣ ಚಾಳುಕ್ಯರು ಕಲಾರಾಧಕರಾಗಿದ್ದರು ಎಂದು ಸಮರ್ಥಿಸಿ.**

- ಕಲ್ಯಾಣ ಚಾಳುಕ್ಯರು ಕಲಾರಾಧಕರಾಗಿದ್ದರು. ಕಲೆಯ ಕ್ಷೇತ್ರದಲ್ಲಿ ನೀಡಿದ ಕೊಡುಗೆ ಅಪಾರ.
- ಲಕ್ಕುಂಡಿಯ ಕಾಶಿವಿಶ್ವೇಶ್ವರ, ಇಟಗಿಯ ಮಹಾದೇವ ದೇವಾಲಯ, ಕುರುವತ್ತಿಯ ಮಲ್ಲಿಕಾರ್ಜುನ ಮಂದಿರ, ಗದಗಿನ ತ್ರಿಕೂಟೇಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳು ಇವರ ಕೊಡುಗೆಯಾಗಿವೆ.
- ಈ ವಂಶದ ಅರಸರು ನೂರಾರು ದೇವಾಲಯಗಳನ್ನು ನಿರ್ಮಿಸಿ ಕನ್ನಡ ನಾಡನ್ನು ಕಲೆಗಳ ಬೀಡನ್ನಾಗಿ ಪರಿವರ್ತಿಸುವಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ.
- ಇವರ ಕಾಲದಲ್ಲಿ ಸಂಗೀತ ನೃತ್ಯಗಳೂ ಅಭಿವೃದ್ಧಿಗೊಂಡವು. ಸಂಗೀತ, ನೃತ್ಯ ಸೇವೆಗೆ ಕಲಾವಿದರನ್ನು ನೇಮಿಸುತ್ತಿದ್ದರು.
- ಮಹಾರಾಣಿ ಚಂದ್ರಲೇಖೆಯು ಅನೇಕ ಸಂಗೀತ ವಿದ್ವಾಂಸರಿಗೆ ಮತ್ತು ನೃತ್ಯಗಾರ್ತಿಯರಿಗೆ ಆಶ್ರಯ ನೀಡಿದ್ದಳು.
- ಸಂಗೀತ, ನೃತ್ಯ, ಕಲೆ, ಆಭರಣ ಮುಂತಾದ ವಿಷಯಗಳು 'ಮಾನಸೋಲ್ಲಾಸ' ಹಾಗೂ ಎರಡನೆಯ ಜಗದೇಕಮಲ್ಲನ 'ಸಂಗೀತ ಚೂಡಾಮಣಿ' ಗ್ರಂಥಗಳಲ್ಲಿ ವ್ಯಕ್ತವಾಗಿವೆ.

## ಅಧ್ಯಾಯ –12

## ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು

**I. ಬಿಟ್ಟ ಸ್ಥಳಗಳಲ್ಲಿ ಭರ್ತಿ ಮಾಡಿರಿ.**

1. ಚೋಳರ ರಾಜಧಾನಿ ________
2. ಚೋಳರ ಕಾಲದಲ್ಲಿದ್ದ ಪ್ರತಿ ಗ್ರಾಮಗಳ ಪ್ರಜಾಪ್ರತಿನಿಧಿಗಳ ಸಭೆಗೆ ________ ಎನ್ನುತ್ತಿದ್ದರು.
3. ಅತ್ಯಂತ ಪ್ರಸಿದ್ಧವಾದ ಚೋಳ ವಿದ್ಯಾಕೇಂದ್ರ ಅಥವಾ ಅಗ್ರಹಾರ ________ ಆಗಿತ್ತು.
4. ಚೋಳರು ಕಟ್ಟಿಸಿದ ಬೆಂಗಳೂರು ಬಳಿ ಇರುವ ಬೇಗೂರಿನ ದೇವಾಲಯ ________
5. ಹೊಯ್ಸಳರ ಕಾಲದ ಅಂಗರಕ್ಷಕ ಪಡೆ ________
6. ರಾಘವಾಂಕನು ರಚಿಸಿದ ಕಾವ್ಯ ________
7. ಹೊಯ್ಸಳರು ಶಿಲ್ಪಕಲೆಗೆ ________ ಕಲ್ಲನ್ನು ಬಳಸಿದರು.
8. ಚೋಳರ ಕಾಲದಲ್ಲಿ ಪ್ರತಿಗ್ರಾಮದಲ್ಲೂ ______ ಎಂಬ ಪ್ರಜೆಗಳ ಸಭೆ ಇತ್ತು.

**ಉತ್ತರಗಳು:– 1) ತಂಜಾವೂರು 2) ಮಹಾಸಭೆ 3) ಉತ್ತರ ಮೇರೂರು 4) ಚೋಳೇಶ್ವರ 5) ಗರುಡ 6) ಹರಿಶ್ಚಂದ್ರ ಕಾವ್ಯ 7) ಬಳಪದ ಮೃದು 8) ಊರ್.**

**II. ಕೆಳಕಂಡ ಪ್ರತಿ ಪ್ರಶ್ನೆಗೂ ಸಂಕ್ಷೇಪವಾಗಿ ಉತ್ತರಿಸಿ.**

**1. ಚೋಳ ಸಾಮ್ರಾಜ್ಯದ ಶಿಲ್ಪಿ ಯಾರು?**

ಚೋಳರ ಪ್ರಮುಖ ರಾಜ ಒಂದನೆಯ ರಾಜರಾಜನನ್ನು ಚೋಳ ಸಾಮ್ರಾಜ್ಯದ ಶಿಲ್ಪಿ ಎಂದು ಕರೆಯುತ್ತಾರೆ.

**2. ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣಗಳ ಬಗ್ಗೆ ಬರೆಯಿರಿ.**

- ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣವೆಂದರೆ ಗ್ರಾಮದ ಸ್ವಯಮಾಧಿಪತ್ಯದ ಬೆಳವಣಿಗೆ.
- ಗ್ರಾಮ ಸಭೆಗಳು ಪ್ರಥಮ ಸಭೆಗಳಾಗಿದ್ದವು.
- ತರ–ಕುರ್‍ರಂ ಒಂದು ಹಳ್ಳಿ. ಪ್ರತಿ ಕುರ್‍ರಂಗೂ 'ಮಹಾಸಭಾ' ಎನ್ನುವ ಗ್ರಾಮಸಭೆ ಇದ್ದಿತು. ಇದನ್ನು 'ಪೆರುಂಗುರಿ' ಎಂದು, ಅದರ ಸದಸ್ಯರನ್ನು 'ಪೆರುಮಕ್ಕಳ್' ಎಂದು ಕರೆಯಲಾಗುತ್ತಿತ್ತು.
- ಸದಸ್ಯರನ್ನು ಚುನಾವಣೆ ಮೂಲಕ ಆರಿಸಲಾಗುತ್ತಿತ್ತು. ಸಂಸ್ಕೃತ ವಿದ್ವಾಂಸರು ಹಾಗೂ ಶ್ರೀಮಂತರು ಮಾತ್ರ ಈ ಚುನಾವಣೆಗೆ ಅರ್ಹರಾಗಿದ್ದರು.

**3. ಹೊಯ್ಸಳರು ಸಾಹಿತ್ಯಕ್ಕೆ ಯಾವ ರೀತಿ ಪ್ರೋತ್ಸಾಹ ನೀಡಿದ್ದರು ಎಂಬುದನ್ನು ತಿಳಿಸಿ.**

- ಹೊಯ್ಸಳರ ಸಾಮ್ರಾಜ್ಯದಲ್ಲಿ ಕನ್ನಡ ಸಾಹಿತ್ಯವು ವಿಪುಲವಾಗಿ ಬೆಳೆಯಿತು.
- ರುದ್ರಭಟ್ಟನು 'ಜಗನ್ನಾಥ ವಿಜಯ'ವನ್ನು, ಕವಿಚಕ್ರವರ್ತಿ ಜನ್ನನು 'ಯಶೋಧರ ಚರಿತೆ'ಯನ್ನು, ಹರಿಹರನು 'ಗಿರಿಜಾ ಕಲ್ಯಾಣ' ಎಂಬ ಚಂಪೂಕಾವ್ಯವನ್ನು, ರಾಘವಾಂಕನು 'ಹರಿಶ್ಚಂದ್ರ ಕಾವ್ಯ' ಹಾಗೂ ಕೇಶೀರಾಜನು 'ಶಬ್ದಮಣಿ ದರ್ಪಣ'ವನ್ನು ರಚಿಸಿದ್ದಾರೆ.
- ಸಂಸ್ಕೃತದಲ್ಲೂ ರಾಮಾನುಜಾಚಾರ್ಯರ ಶ್ರೀಭಾಷ್ಯ, ಪರಾಶರಭಟ್ಟರ ಶ್ರೀಗುಣ ರತ್ನಕೋಶ ಮುಂತಾದವುಗಳು ರಚಿತವಾದವು.

**4. ಚೋಳರ ಒಂದನೆಯ ರಾಜರಾಜ ಪ್ರಸಿದ್ಧ ಅರಸನಾಗಿದ್ದಾನೆ. ಸಮರ್ಥಿಸಿ.**

- ಒಂದನೆಯ ರಾಜರಾಜನು ಶೂರ, ಶ್ರೇಷ್ಠ ಯೋಧ ಹಾಗೂ ದಕ್ಷ ಆಡಳಿತಗಾರನಾಗಿದ್ದನು.
- ಚೋಳ ರಾಜ್ಯದ ಶಿಲ್ಪಿಯಾಗಿ ಅದರ ತಳಹದಿಯನ್ನು ಭದ್ರಮಾಡಿ ತನ್ನ ರಾಜ್ಯವನ್ನು ವಿಸ್ತರಿಸಿದನು.
- ಚೇರರನ್ನು, ಗಂಗರನ್ನು ಮತ್ತು ಪಾಂಡ್ಯರನ್ನು ಸೋಲಿಸಿದನು.
- ನೌಕಾ ಸೈನ್ಯವನ್ನು ನಿರ್ಮಿಸಿ ಶ್ರೀಲಂಕಾವನ್ನು ವಶಪಡಿಸಿಕೊಂಡನು.
- ಮಲೇಶಿಯಾ, ಸಿಂಗಪುರಗಳಲ್ಲಿ ಇಂದಿಗೂ ತಮಿಳರ ಪ್ರಾಬಲ್ಯವನ್ನು ಗಮನಿಸಬಹುದು.
- ಈ ಮೂಲಕ ಸಾಗರೋತ್ತರ ವಾಣಿಜ್ಯ ವ್ಯವಹಾರಗಳನ್ನು ಪ್ರಾರಂಭಿಸಿ ಇಂದಿಗೂ ಮುಂದುವರಿಸಿಕೊಂಡು ಬಂದಿದೆ.
- ಈತನು ಕಟ್ಟಿದ ತಂಜಾವೂರಿನ ಬೃಹದೀಶ್ವರ ದೇವಾಲಯವು ಅತ್ಯಂತ ಪ್ರಸಿದ್ಧವಾದುದು.

**5. ಹೊಯ್ಸಳ ರಾಜ ವಿಷ್ಣುವರ್ಧನನ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.**

- ಈ ವಂಶದ ಶ್ರೇಷ್ಠ ದೊರೆಯಾದ ಈತನು ಚೋಳರಿಂದ ಗಂಗವಾಡಿಯನ್ನು ಗೆದ್ದು 'ತಲಕಾಡುಗೊಂಡ' ಎಂಬ ಬಿರುದು ಪಡೆದನು.

- ಈ ವಿಜಯದ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯವನ್ನು ಹಾಗೂ ಬೇಲೂರಿನ ಚೆನ್ನಕೇಶವ (ವಿಜಯ ನಾರಾಯಣ) ದೇವಾಲಯವನ್ನು ಕಟ್ಟಿಸಿದನು.
- ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿ ಚಾಲುಕ್ಯರ 6ನೇ ವಿಕ್ರಮಾದಿತ್ಯನಿಂದ ಸೋತನು.
- ರಾಮಾನುಜಾಚಾರ್ಯರು ತಮ್ಮ ವಿಶಿಷ್ಟಾದ್ವೈತ ತತ್ವವನ್ನು ಚೋಳ ರಾಜ್ಯದಲ್ಲಿ ಪ್ರಚಾರ ಮಾಡಲಾಗದೇ ಬಿಟ್ಟಿದೇವನ (ವಿಷ್ಣುವರ್ಧನ) ಆಶ್ರಯದಲ್ಲಿ ಬಂದು ನೆಲೆ ನಿಂತು ಕರ್ನಾಟಕದಾದ್ಯಂತ ಪ್ರಚಾರ ಮಾಡಿದರು.

# ರಾಜ್ಯಶಾಸ್ತ್ರ

## ಅಧ್ಯಾಯ –3

## ಮಾನವ ಹಕ್ಕುಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಭರ್ತಿ ಮಾಡಿರಿ.**

1. ಮಾನವ ಹಕ್ಕುಗಳ ಘೋಷಣೆ ________ರಲ್ಲಿ ಮಾಡಲಾಯಿತು.
2. ಮ್ಯಾಗ್ನಕಾರ್ಟಕ್ಕೆ ____________ ರಾಜನು ಸಹಿ ಮಾಡಿದನು.
3. ಪ್ರಸ್ತುತ ____________ ಮೂಲಭೂತ ಹಕ್ಕುಗಳಿವೆ.
4. ಆಸ್ತಿ ಹಕ್ಕು ____________ ಹಕ್ಕಾಗಿದೆ.
5. ಮಾನವ ಹಕ್ಕುಗಳ ಆಯೋಗ ಅಧ್ಯಕ್ಷರನ್ನು ____________ ನೇಮಕ ಮಾಡುತ್ತಾರೆ.
6. ಮಾನವನ ಹಕ್ಕುಗಳ ಮೂಲವನ್ನು ____________ ನಗರಗಳಲ್ಲಿ ಗುರುತಿಸಲಾಗುತ್ತದೆ.
7. ವ್ಯಕ್ತಿಯ ನೈಸರ್ಗಿಕ ಹಕ್ಕುಗಳ ಪ್ರತಿಪಾದಕ ______________
8. ಮಾನವ ಹಕ್ಕುಗಳ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯವು ________ ಹೊರಡಿಸುವ ಮೂಲಕ ರಕ್ಷಿಸುತ್ತವೆ.
9. ಭಾರತ ದೇಶದಲ್ಲಿ ಮಾಹಿತಿ ಹಕ್ಕು ಕಾಯಿದೆಯನ್ನು _______ ರಲ್ಲಿ ಜಾರಿಗೊಳಿಸಲಾಗಿದೆ.

**ಉತ್ತರಗಳು:– 1) 1948 2) ಇಂಗ್ಲೇಂಡಿನ ರಾಜ ಜಾನ್ 3) ಆರು 4) ಸಂವಿಧಾನಾತ್ಮಕ 5) ರಾಷ್ಟ್ರಪತಿ 6) ಅಥೆನ್ಸ್ ಮತ್ತು ಸ್ಪಾರ್ಟಾ 7) ಜಾನ್‌ಲಾಕ್ 8) ಆಜ್ಞೆ(ರಿಟ್) 9) 2005**

**II. ಕೆಳಗಿನ ಪ್ರಶ್ನೆಗಳಿಗೆ ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

**1. ಮಾನವ ಹಕ್ಕುಗಳ ಬೆಳವಣಿಗೆಯನ್ನು ವಿವರಿಸಿರಿ.**

- ಮಾನವನ ಹಕ್ಕುಗಳ ಮೂಲವನ್ನು ಪ್ರಾಚೀನ ಗ್ರೀಕ್ ಮತ್ತು ರೋಮನ್ ನಗರ ರಾಜ್ಯಗಳಾದ ಅಥೆನ್ಸ್ ಮತ್ತು ಸ್ಪಾರ್ಟಾಗಳಲ್ಲಿ ಗುರುತಿಸಲಾಗುತ್ತದೆ.
- ಕ್ರಿ.ಶ. 1215ರಲ್ಲಿ ಮ್ಯಾಗ್ನಕಾರ್ಟ ಅಥವಾ ಮಹಾಸನ್ನದು ಇಂಗ್ಲಿಷ್ ಸಾಂವಿಧಾನಿಕ ಕಾನೂನುಗಳ ರಚನೆಯ ಮೇಲೆ ಪ್ರಭಾವ ಬೀರಿರುವ ಐತಿಹಾಸಿಕ ಮಹತ್ವಪೂರ್ಣವಾದ ಸನ್ನದು ಆಗಿದೆ.
- ವ್ಯಕ್ತಿಯ ನೈಸರ್ಗಿಕ ಹಕ್ಕುಗಳ ಕುರಿತು ಜಾನ್‌ಲಾಕ್ ಮೊದಲ ಬಾರಿಗೆ ವ್ಯವಸ್ಥಿತವಾದ ಚಿಂತನೆಯನ್ನು ಮಾಡಿದರು.
- ಇಂಗ್ಲೆಂಡಿನಲ್ಲಿ ನಡೆದ ರಕ್ತರಹಿತ ಕ್ರಾಂತಿಯ ಪ್ರತಿಫಲವಾಗಿ 1689ರಲ್ಲಿ 'ಬಿಲ್ ಆಫ್ ರೈಟ್ಸ್' ಜಾರಿಗೊಳಿಸಲಾಯಿತು.
- 15 ಡಿಸೆಂಬರ್ 1791ರಂದು ಮಾನವ ಹಕ್ಕುಗಳ ಪಟ್ಟಿಯನ್ನು ಅಮೆರಿಕ ಸಂವಿಧಾನಕ್ಕೆ ಸೇರ್ಪಡೆ ಮಾಡಲಾಯಿತು.
- 1789ರಲ್ಲಿ ಫ್ರಾನ್ಸ್ ಮಾನವ ಹಕ್ಕುಗಳ ಘೋಷಣೆಯು ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲಾಗಿದೆ.
- ವಿಶ್ವಸಂಸ್ಥೆ 1948 ಡಿಸೆಂಬರ್ 10ರಂದು ಪ್ರತಿಯೊಂದು ರಾಷ್ಟ್ರಗಳು ಕಡ್ಡಾಯವಾಗಿ ಎಲ್ಲಾ ರೀತಿಯ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಕುರಿತು ನಿರ್ದೇಶಿಸಿದೆ.

**2. ಮಾನವ ಹಕ್ಕುಗಳು ಮಾನವರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿವೆ ಸಮರ್ಥಿಸಿರಿ.**

- ಮಾನವ ಹಕ್ಕುಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾಗಿರುತ್ತವೆ ಹಾಗೂ ವಿಶಾಲವಾಗಿರುತ್ತವೆ.
- ಪ್ರಕೃತಿದತ್ತವಾಗಿ ಮಾನವನಿಗೆ ದೊರೆತವುಗಳಾಗಿರುತ್ತವೆ.
- ಇವುಗಳು ಮಾನವನ ಘನತೆ ಗೌರವಗಳನ್ನು ಹೆಚ್ಚಿಸುತ್ತವೆ.
- ಇದು ಮಾನವನ ಅಭಿವೃದ್ಧಿ ಮತ್ತು ಶಾಂತಿ ಹಾಗೂ ಸಹಬಾಳ್ವೆಯ ಜೀವನ ನಿರ್ವಹಣೆಗೆ ಅಗತ್ಯವಾಗಿದೆ.
- ಹಕ್ಕುಗಳು ಪ್ರಜಾಪ್ರಭುತ್ವ ರಾಷ್ಟ್ರದ ಆಧಾರಸ್ತಂಭಗಳಾಗಿರುತ್ತವೆ.
- ಮಾನವ ಹಕ್ಕುಗಳಿಂದ ಪ್ರತಿಯೊಬ್ಬರು ಉತ್ತಮ ಜೀವನ ನಡೆಸಲು ಸಾಧ್ಯವಾಗುತ್ತದೆ.
- ಇದರಿಂದ ಉತ್ತಮ ಸಮಾಜ ನಿರ್ಮಾಣವಾಗಲು ಸಹಕಾರಿಯಾಗುತ್ತದೆ.
- ಪ್ರತಿಯೊಬ್ಬ ಮಾನವನು ಗೌರವ ಮತ್ತು ಘನತೆಯಿಂದ ಬದುಕಲು ಮಾನವ ಹಕ್ಕುಗಳು ಅಗತ್ಯವಾಗಿರುತ್ತವೆ.
- ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಅಂಶಗಳೇ ಮಾನವನ ಹಕ್ಕುಗಳಾಗಿರುತ್ತವೆ.

**3. ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳ ಸಂರಕ್ಷಕವಾಗಿದೆ ವಿಮರ್ಶಿಸಿರಿ.**

- ಮೂಲಭೂತ ಹಕ್ಕುಗಳು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾಗಿದ್ದು, ದೇಶದ ಸಂವಿಧಾನದಿಂದ ರಕ್ಷಿಸಲ್ಪಟ್ಟಿರುತ್ತವೆ.
- ಇವುಗಳ ಉಲ್ಲಂಘನೆಯಾದಾಗ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಆಜ್ಞೆ(ರಿಟ್) ಹೊರಡಿಸುವ ಮೂಲಕ ರಕ್ಷಿಸುತ್ತವೆ.
- ಇವುಗಳು ನಿರ್ದಿಷ್ಟವಾಗಿದ್ದು, ಸಂವಿಧಾನದಿಂದ ನೀಡಲ್ಪಟ್ಟಿರುತ್ತವೆ.

**4. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಾನವ ಹಕ್ಕುಗಳ ಸಂರಕ್ಷಕ. ಸಮರ್ಥಿಸಿರಿ.**

- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಶಾಸನಾತ್ಮಕ ಸಂಸ್ಥೆಯಾಗಿದೆ.

- 1993ರಲ್ಲಿ ಸಂಸತ್ತಿನ ಶಾಸನದ ಮೂಲಕ ರಚಿಸಲಾಗಿದೆ. ಇದು ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರಣೆಯನ್ನು ಮಾಡುತ್ತದೆ.
- ಇದು ಒಬ್ಬ ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿರುತ್ತದೆ. ಅಧ್ಯಕ್ಷರು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಿರಬೇಕು.
- ಈ ಆಯೋಗವು ರಾಷ್ಟ್ರದ ಮಾನವ ಹಕ್ಕುಗಳ ಸಂರಕ್ಷಕನಾಗಿದೆ.
- ಇದು ನಿಷ್ಪಕ್ಷಪಾತವಾಗಿ, ಸ್ವತಂತ್ರವಾಗಿ ಮತ್ತು ಸ್ವಾಯತ್ತವಾಗಿ ಕಾರ್ಯನಿರ್ವಹಿಸುವಂತೆ ಅಧಿಕಾರಗಳನ್ನು ನೀಡಲಾಗಿದೆ.

**5. ರಾಜ್ಯ ಮಾನವ ಹಕ್ಕುಗಳ ಆಯೋಗ ಕುರಿತು ವಿವರಿಸಿರಿ.**

- ಮಾನವ ಹಕ್ಕುಗಳ ಕಾಯ್ದೆ 1993ರನ್ವಯ ರಾಜ್ಯಗಳಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿರುತ್ತದೆ.
- ಇದು ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರಣೆಯನ್ನು ಮಾಡುತ್ತದೆ.
- ಈ ಆಯೋಗವು ಒಬ್ಬ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಒಳಗೊಂಡಿರುತ್ತದೆ. ಅಧ್ಯಕ್ಷರು ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿರಬೇಕು. ಸದಸ್ಯರು ಉಚ್ಚ ನ್ಯಾಯಾಲಯದ ಸೇವೆಯಲ್ಲಿರುವ ಅಥವಾ ನಿವೃತ್ತ ನ್ಯಾಯಾಧೀಶರಾಗಿರಬೇಕು. ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಕನಿಷ್ಠ 7 ವರ್ಷಗಳು ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು.
- ಇವರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ.

## ಅಧ್ಯಾಯ – 4

# ಸ್ಥಳೀಯ ಸರ್ಕಾರ

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಗ್ರಾಮಸಭಾ ಅಧ್ಯಕ್ಷತೆಯನ್ನು ____________ ವಹಿಸುತ್ತಾರೆ.
2. ಗ್ರಾಮಪಂಚಾಯಿತಿ ಅಧ್ಯಕ್ಷರ ಅಧಿಕಾರವಧಿ _____ ವರ್ಷಗಳು.
3. ಗ್ರಾಮ ಪಂಚಾಯಿತಿಯಲ್ಲಿ ____________ ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ.
4. ಬೆಂಗಳೂರು ನಗರ ಜಿಲ್ಲೆಯಲ್ಲಿ ____________ ಜನಸಂಖ್ಯೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡುತ್ತಾರೆ.
5. ಕರ್ನಾಟಕದಲ್ಲಿ ಒಟ್ಟು __________ ಮಹಾನಗರ ಪಾಲಿಕೆಗಳಿವೆ.
6. ನಗರಪಾಲಿಕೆ ಸದಸ್ಯರು: ಕೌನ್ಸಿಲರ್: : ಮಹಾನಗರ ಪಾಲಿಕೆ: __________
7. 50 ಸಾವಿರದಿಂದ 3 ಲಕ್ಷದೊಳಗಿನ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶವನ್ನು ______ ಎಂದು ವರ್ಗೀಕರಿಸಲಾಗಿದೆ.
8. ನಗರವು ಚಿಕ್ಕಚಿಕ್ಕ ಚುನಾವಣಾ ವಿಭಾಗಗಳಾಗಿ ವಿಂಗಡಣೆಗೊಂಡು __________ ಎಂದು ಕರೆಯಲ್ಪಟ್ಟಿವೆ.
9. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (CEO) ಯನ್ನಾಗಿ ___________ ನೇಮಿಸುತ್ತದೆ.
10. ಗ್ರಾಮ ಪಂಚಾಯಿತಿಯ ಕಾರ್ಯಪಾಲನೆಗಾಗಿ ____________ ಯನ್ನು ನೇಮಿಸಲಾಗುತ್ತದೆ.

**ಉತ್ತರಗಳು– 1) ಗ್ರಾಮ ಪಂಚಾಯತಿ ಅಧ್ಯಕ್ಷ/ ಉಪಾಧ್ಯಕ್ಷ 2) 2.5 ವರ್ಷ 3) 400 4) 20,000 5) 11 6) ಪಾಲಿಕೆ ಸದಸ್ಯ/ ಕಾರ್ಪೋರೇಟರ್ 7) ನಗರ 8) ಬಡಾವಣೆ ಅಥವಾ ವಾರ್ಡ್ 9) ರಾಜ್ಯ ಸರ್ಕಾರ 10) ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO).**

**II. ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರ ಬರೆಯಿರಿ.**

**1. ಸ್ಥಳೀಯ ಸ್ವಯಂ ಸರ್ಕಾರದ ಕಾರ್ಯಗಳೇನು?**

1. ಪಂಚಾಯಿತಿಯ ಆಸ್ತಿಯನ್ನು ರಕ್ಷಿಸಿ ಕಾಪಾಡಿಕೊಳ್ಳುವುದು.
2. ಸ್ಥಳೀಯ ಮಂಡಳಿಯ ವಾರ್ಷಿಕ ಆಯವ್ಯಯದ ಮುಂಗಡ ಪತ್ರ ತಯಾರಿಸುವುದು.
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳುವುದು.
4. ರಸ್ತೆ ನಿರ್ಮಾಣ, ವಿದ್ಯುತ್ತೀಕರಣ, ಗೃಹನಿರ್ಮಾಣ ಮತ್ತು ಕುಡಿಯುವ ನೀರಿನ ಸರಬರಾಜು ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು.
5. ಪ್ರಾಥಮಿಕ, ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
6. ತಮ್ಮ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ನಿರ್ಮಲೀಕರಣವನ್ನು ಕಾಪಾಡುವುದು.
7. ಎಲ್ಲಾ ಪ್ರಕಾರದ ಮಾಲಿನ್ಯಗಳನ್ನು ತಡೆಗಟ್ಟಿ ಉತ್ತಮ ಆರೋಗ್ಯಕರ ಸವಲತ್ತುಗಳನ್ನು ಒದಗಿಸುವುದು.
8. ಅವಶ್ಯಕ ಪಡಿತರಗಳಾದ ಆಹಾರಧಾನ್ಯ, ಸೀಮೆಎಣ್ಣೆ ಇತ್ಯಾದಿಗಳ ವಿತರಣೆಗೆ ಸೂಕ್ತ ವ್ಯವಸ್ಥೆಯನ್ನು ನಿರ್ಮಿಸಿ ಸವಲತ್ತುಗಳನ್ನು ಒದಗಿಸುವುದು.
9. ಜನನ ಮತ್ತು ಮರಣಗಳ ನೋಂದಣಿ ಪ್ರಾಮಾಣಿಕವಾಗಿ ಆಗುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.
10. ಕೃಷಿ, ಪಶುಸಂಗೋಪನೆ, ಖಾದಿ ಮತ್ತು ಕರಕುಶಲ ಉದ್ಯೋಗಗಳನ್ನು ಪ್ರೋತ್ಸಾಹಿಸುವುದು.

**2. ಗ್ರಾಮಪಂಚಾಯಿತಿ ರಚನೆ ಕುರಿತು ಬರೆಯಿರಿ.**

- ಗ್ರಾಮ ಪಂಚಾಯಿತಿಗಳು ಸಾಮಾನ್ಯವಾಗಿ ಜನಸಂಖ್ಯೆಯ ಆಧಾರದ ಮೇಲೆ ರಚಿತಗೊಳ್ಳುತ್ತವೆ.
- ಒಟ್ಟು 5000 ದಿಂದ 7000 ಜನಸಂಖ್ಯೆಗಳಿರುವ ಗ್ರಾಮ ಅಥವಾ ಗ್ರಾಮಗಳು ಸಮೂಹಕ್ಕೆ ಗ್ರಾಮ ಪಂಚಾಯಿತಿ ರಚಿಸಲಾಗುತ್ತದೆ.
- ಮಲೆನಾಡು ಜಿಲ್ಲೆಗಳಲ್ಲಿ 2500ಕ್ಕಿಂತ ಹೆಚ್ಚು ಜನಸಂಖ್ಯೆಗಳಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹಕ್ಕೆ ಗ್ರಾಮ ಪಂಚಾಯಿತಿಯನ್ನು ರಚಿಸಿಲಾಗುತ್ತದೆ.
- ಗ್ರಾಮ ಪಂಚಾಯಿತಿಯ ಸದಸ್ಯರುಗಳು ತಮ್ಮ ಪಂಚಾಯಿತಿಯ ಮಿತಿಗೊಳಪಟ್ಟ ಪ್ರದೇಶದಲ್ಲಿನ ವಯಸ್ಕಮತದಾರರಿಂದ ಚುನಾವಣೆಯಲ್ಲಿ ಆಯ್ಕೆಗೊಳ್ಳುತ್ತಾರೆ.
- ಪ್ರತಿ 400 ಜನಸಂಖ್ಯೆಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುತ್ತದೆ.
- ಈ ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲು ಸ್ಥಾನಗಳಿವೆ.

**3. ಸ್ಥಳೀಯ ಸ್ವಯಂ ಸರ್ಕಾರಗಳ ಆದಾಯದ ಮೂಲಗಳು ಯಾವುವು?**

1. ನೀರು, ಆರೋಗ್ಯ, ಶಿಕ್ಷಣ, ಗ್ರಂಥಾಲಯ ಮತ್ತು ವಾಚನಾಲಯಗಳ ಮೇಲಿನ ಉಪಕರದಿಂದ ಸಂಗ್ರಹವಾಗುವ ಮೊತ್ತ.
2. ಕಟ್ಟಡ ತೆರಿಗೆ, ಖಾಲಿ ಜಾಗದ ತೆರಿಗೆ, ವ್ಯಾವಹಾರಿಕ ಸಂಸ್ಥೆಗಳ ಮೇಲಿನ ತೆರಿಗೆ, ಮಾರುಕಟ್ಟೆ, ಮನರಂಜನಾಮಂದಿರ ಮತ್ತು ಜಾಹೀರಾತುಗಾರರಿಂದ ವಸೂಲಾಗುವ ಒಟ್ಟು ತೆರಿಗೆ ಮೊತ್ತ.
3. ಪ್ರವಾಸಿ ತಾಣಗಳಿಂದ ಸಂಗ್ರಹಿಸಿದ ತೆರಿಗೆ.
4. ಪಂಚಾಯತ್ ಆಸ್ತಿಗಳಿಂದ ಬರುವ ಬಾಡಿಗೆ ಹಣ.
5. ರಾಜ್ಯಸರ್ಕಾರದ ಧನ ಸಹಾಯ ಅಥವಾ ಅನುದಾನ ಮೊತ್ತ.

**4. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಗಳ ಕುರಿತು ಟಿಪ್ಪಣಿ ಬರೆಯಿರಿ.**

- ಆಯ-ವ್ಯಯ ಪಟ್ಟಿ ತಯಾರಿಸಿ ಮಂಡಳಿಯಿಂದ ಅನುಮೋದನೆ ಪಡೆಯುವುದು.
- ನಗರ ಅಥವಾ ಪಟ್ಟಣದ ಸಂಪೂರ್ಣ ಆಡಳಿತ ನೋಡಿಕೊಳ್ಳುವುದು.
- ಉತ್ತಮ ನಗರ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದು.
- ಉತ್ತಮವಾದ ರಸ್ತೆ, ಸಾರಿಗೆ ವ್ಯವಸ್ಥೆ, ನೀರು ಸರಬರಾಜು, ಶಿಕ್ಷಣ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆರೋಗ್ಯ ಹಾಗೂ ಇನ್ನಿತರೆ ಸವಲತ್ತುಗಳನ್ನು ಉತ್ತಮ ರೀತಿಯಲ್ಲಿ ಒದಗಿಸುವುದು.
- ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸೌಕರ್ಯ ಕಲ್ಪಿಸಿ ಸ್ವಚ್ಛತೆ ಕಾಪಾಡುವುದು.
- ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವುದು, ನಗರ ಸಭೆಯ ಕಟ್ಟಡಗಳು ಹಾಗೂ ಆಸ್ತಿಯನ್ನು ರಕ್ಷಿಸುವುದು.
- ಜನನ ಮರಣಗಳ ನೋಂದಣಿ ಮಾಡಿಕೊಳ್ಳುವುದು.
- ಕ್ರೀಡಾಂಗಣ, ಮನರಂಜನಾ ಮಂದಿರ, ಉದ್ಯಾನವನಗಳನ್ನು ನಿರ್ಮಿಸಿ ಅವುಗಳನ್ನು ನಿರ್ವಹಿಸುವುದು.
- ನಗರದ ಕೊಳೆಗೇರಿವಾಸಿಗಳಿಗೆ ಸೌಕರ್ಯ ಒದಗಿಸುವುದರ ಮೂಲಕ ಅಲ್ಲಿನ ನಿವಾಸಿಗಳ ಜೀವನಮಟ್ಟ ಸುಧಾರಿಸುವಂತೆ ನೋಡಿಕೊಳ್ಳುವುದು.

**5. ಮಹಾನಗರ ಪಾಲಿಕೆಯ ಕುರಿತು ಬರೆಯಿರಿ.**

- ಎರಡು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಮತ್ತು ಕೋಟಿಗಿಂತಲೂ ಹೆಚ್ಚು ಆದಾಯವಿರುವ ನಗರಪ್ರದೇಶಗಳಲ್ಲಿ ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ.
- ನಗರ ಪಾಲಿಕೆಯ ಸದಸ್ಯರುಗಳು ಚುನಾವಣೆಗಳ ಮೂಲಕ ಚುನಾಯಿತರಾಗಿ ಪಾಲಿಕೆ ಸದಸ್ಯ (ಅಂಡಿರಿಂಡಿಚಿಣಂಡಿ) ಎನಿಸಿಕೊಳ್ಳುತ್ತಾರೆ.
- ಈ ಸದಸ್ಯರುಗಳ ಸಂಖ್ಯೆ ಜನಸಂಖ್ಯೆ ಆಧಾರಿತವಾಗಿದ್ದು ಸಾಧಾರಣವಾಗಿ 30ರಿಂದ 100ರವರೆಗೆ ಇರುತ್ತದೆ. ಪಾಲಿಕೆ ಗಾತ್ರವನ್ನು ಸರ್ಕಾರ ನಿರ್ಧರಿಸುತ್ತದೆ.
- ನಗರವು ಚಿಕ್ಕಚಿಕ್ಕ ಚುನಾವಣಾ ವಿಭಾಗಗಳಾಗಿ ವಿಂಗಡಣೆಗೊಂಡು ಬಡಾವಣೆ ಅಥವಾ ವಾರ್ಡ್ ಎಂದು ಕರೆಯಲ್ಪಟ್ಟಿವೆ.
- ಪ್ರತಿ ವಾರ್ಡಿನಿಂದ ಒಬ್ಬ ಪಾಲಿಕೆ ಸದಸ್ಯ ಚುನಾಯಿತನಾಗುತ್ತಾನೆ. ಈ ಸದಸ್ಯರುಗಳು ಪ್ರತ್ಯಕ್ಷವಾದ ಮತದಾನದ ಮೂಲಕ ಚುನಾಯಿತರಾಗುತ್ತಾರೆ.
- ಪಾಲಿಕೆಗಳಲ್ಲೂ ಸಹ ನಿಯಮಾನುಸಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳಾ ಮಿಸಲಾತಿ ಅನುಪಾಲನೆಯಾಗುತ್ತಿದೆ.
- ಮಹಾಪೌರ ಮತ್ತು ಉಪ-ಮಹಾಪೌರರು ಪಾಲಿಕೆಯ ನಾಯಕರುಗಳು ಎನಿಸಿಕೊಳ್ಳುತ್ತಾರೆ. ಇವರುಗಳು ಪಾಲಿಕೆಯ ಸದಸ್ಯರುಗಳಿಂದ ಚುನಾಯಿಸಲ್ಪಡುತ್ತಾರೆ. ಇವರುಗಳ ಅಧಿಕಾರಾವಧಿಯು ಒಂದು ವರ್ಷವಾಗಿರುತ್ತದೆ.
- ಮಹಾಪೌರರು ಪಾಲಿಕೆಯ ಸಭೆಗಳ ಅಧ್ಯಕ್ಷತೆ ವಹಿಸಿ, ಸಭೆಯು ಕೈಗೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವ ಕ್ರಮ ತೆಗೆದುಕೊಳ್ಳುತ್ತಾರೆ.
- ಮಹಾಪೌರರು ಪಾಲಿಕೆಯ ಕಾರ್ಯನಿರ್ವಹಣೆಯನ್ನು ನಿಯಂತ್ರಿಸುತ್ತಾರೆ.
- ಸಮರ್ಥ ಆಡಳಿತ ನೀಡಲು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲಾಗುತ್ತದೆ.
- ಪಾಲಿಕೆಯ ಕಾರ್ಯನಿರ್ವಹಣೆಯನ್ನು ಪಾಲಿಕೆಯ ಆಯುಕ್ತರು ನೋಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಭಾರತೀಯ ಆಡಳಿತ ಸೇವೆಯ (ಖಂಖ) ಅಧಿಕಾರಿಯು ಈ ಹುದ್ದೆಯನ್ನು ಅಲಂಕರಿಸುತ್ತಾರೆ.

**6. ನಗರ ಸ್ಥಳೀಯ ಸಂಸ್ಥೆಗಳ ಬಗ್ಗೆ ಬರೆಯಿರಿ.**

ಈ ನಗರ ಪ್ರದೇಶಗಳ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಂಸ್ಥೆಗಳು ನಗರ ಸ್ಥಳೀಯ ಸ್ವಯಂಸರ್ಕಾರಗಳು ಎನ್ನುವರು.

<u>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂರು ಬಗೆ ಅವುಗಳೆಂದರೆ:</u>

1. ನಗರ ಪಾಲಿಕೆ (ಮಹಾನಗರ ಪಾಲಿಕೆ) – ಪ್ರಮುಖನಗರಗಳು.
2. ನಗರ ಸಭೆಗಳು ಅಥವಾ ಪುರಸಭೆಗಳು – ನಗರ ಪಟ್ಟಣಗಳು.
3. ದಂಡು ಪ್ರದೇಶದ ಭಾಗ – ರಕ್ಷಣಾ ಪಡೆಯ ಹಿಡಿತದಲ್ಲಿರುವ ಪ್ರದೇಶ.

ಜನಸಂಖ್ಯೆ, ವರಮಾನ, ಸಾಮಾಜಿಕ ಸ್ಥಿತಿಗತಿಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ಪ್ರದೇಶವೊಂದನ್ನು ನಗರ ಅಥವಾ ಪಟ್ಟಣವೆಂದು ಘೋಷಿಸುವ ಅಧಿಕಾರ ಹೊಂದಿದೆ. ಇವುಗಳು ವಿಶೇಷವಾದ ಕಾರ್ಯಗಳು ಮತ್ತು ಅಧಿಕಾರವನ್ನು ಹೊಂದಿದ್ದು ವರಮಾನದ ಮೂಲಗಳನ್ನು ಹೊಂದಿವೆ.

# ಸಮಾಜಶಾಸ್ತ್ರ

## ಅಧ್ಯಾಯ –3

## ಸಾಮಾಜಿಕ ಸಂಸ್ಥೆಗಳು

**<u>I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.</u>**

1. ಸಾಮಾಜಿಕ ಸಂಸ್ಥೆಗಳು ______ ಬಯಕೆಗಳನ್ನು ಪೂರೈಸುತ್ತವೆ.
2. ಕುಟುಂಬ ಒಂದು ________ ಸಂಸ್ಥೆ.

3. ಸಾಮಾಜಿಕ ಸಂಸ್ಥೆಗಳು ಸಂಸ್ಕೃತಿಯನ್ನು ವರ್ಗಾಯಿಸುವ ____________ ಆಗಿವೆ.
4. ಧರ್ಮವು ಮೌಲ್ಯಗಳ ______ ಗೆ ಸಹಾಯ ಮಾಡುತ್ತದೆ.
5. ಧರ್ಮವು ಸಾಮಾಜಿಕ ________ ಅತಿಮುಖ್ಯ ಸಾಧನವಾಗಿದೆ.
6. ____________ ಕುಟುಂಬ ವ್ಯವಸ್ಥೆಯ ತಳಹದಿಯಾಗಿದೆ.
7. ಹಿಂದಿನಿಂದಲೂ ಬಂದ ಪರಂಪರೆಗಳು, ಲೋಕರೂಢಿ, ಕಟ್ಟುಪಾಡುಗಳು ಸಾಮಾಜಿಕ ಸಂಸ್ಥೆಗಳ _______ನಿಯಮಗಳಾಗಿವೆ.
8. ಒಂದು ಸಮಾಜದಲ್ಲಿನ ಇರುವ ಎಲ್ಲಾ ಸಾಮಾಜಿಕ ಸಂಸ್ಥೆಗಳು ಪರಸ್ಪರ ________ ವನ್ನು ಹೊಂದಿರುತ್ತವೆ.
9. ಸಮಾಜದಲ್ಲಿ ನಿಯಮಗಳನ್ನು ಮುರಿದರೆ, ಶಿಕ್ಷೆ, ನಿಂದನೆ, ಬಹಿಷ್ಕಾರ, ದಂಡ ಹಾಕುವುದು ____________ ಆಗಿದೆ.

**ಉತ್ತರಗಳು– 1) ಮಾನವನ ಸಾಮಾಜಿಕ 2) ಸಾಮಾಜಿಕ 3) ಸಾಧನ 4) ಪ್ರಸಾರ 5) ನಿಯಂತ್ರಣದ 6) ವಿವಾಹವು 7) ಅಲಿಖಿತ 8) ಸಹ ಸಂಬಂಧ 9) ಸಾಮಾಜಿಕ ನಿಯಂತ್ರಣ.**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

**1. ಸಾಮಾಜಿಕ ಸಂಸ್ಥೆ ಎಂದರೇನು?**

ನಮ್ಮ ಆಸೆ ಆಕಾಂಕ್ಷೆ ಈಡೇರಿಸಲು ಸ್ಥಿರವಾಗಿ ಸ್ಥಾಪನೆಯಾಗಿರುವುದನ್ನು ಸಾಮಾಜಿಕ ಸಂಸ್ಥೆ ಎಂದು ಹೇಳುತ್ತಾರೆ.

ಸಮಾಜದಲ್ಲಿ ಇರುವ ರೂಢಿ, ಕಾನೂನು, ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ರಾಜ್ಯವ್ಯವಸ್ಥೆ ಇನ್ನೂ ಮುಂತಾದವುಗಳು ಸಾಮಾಜಿಕ ಸಂಸ್ಥೆಗಳು.

**2. ಕುಟುಂಬದ ಕಾರ್ಯಗಳನ್ನು ತಿಳಿಸಿ.**

**ಕುಟುಂಬದ ಕಾರ್ಯಗಳು**

**1. ಸದಸ್ಯರ ಪೋಷಣೆ :** ಕುಟುಂಬವು ನಾವು ಜನಿಸಿದ ದಿನದಿಂದ ನಮ್ಮ ಪಾಲನೆ, ಪೋಷಣೆ ಮಾಡುತ್ತಿರುತ್ತದೆ. ಕುಟುಂಬವು ತನ್ನ ಎಲ್ಲ ಸದಸ್ಯರ ಪೋಷಣೆಯ ಪ್ರಮುಖ ತಾಣ.

**2. ಸಾಮಾಜಿಕ ಭದ್ರತೆ:** ತಮ್ಮ ಎಲ್ಲಾ ಸದಸ್ಯರಿಗೆ ಎಲ್ಲಾ ರೀತಿಯ ಸಾಮಾಜಿಕ ಭದ್ರತೆಗಳನ್ನು ಕುಟುಂಬವು ನೀಡುತ್ತದೆ.

**3. ಸಾಮಾಜೀಕರಣ:** ಕುಟುಂಬದಲ್ಲಿ ಸದಸ್ಯರು ಮಕ್ಕಳಿಗೆ ಸಮಾಜದಲ್ಲಿ ಹೇಗೆ ವ್ಯವಹರಿಸಬೇಕು, ಹೇಗೆ ನಡೆದುಕೊಳ್ಳಬೇಕು, ಇತ್ಯಾದಿಗಳನ್ನು ಸಾಮಾಜೀಕರಣದ ಮೂಲಕ ಕುಟುಂಬವು ಕಲಿಸುತ್ತದೆ.

**3. ಸಾಮಾಜಿಕ ಸಂಸ್ಥೆಯ ಲಕ್ಷಣಗಳು ಯಾವುವು?**

**ಸಾಮಾಜಿಕ ಸಂಸ್ಥೆಯ ಲಕ್ಷಣಗಳು–**

1) ಸಾರ್ವತ್ರಿಕತೆ : ಸಾಮಾಜಿಕ ಸಂಸ್ಥೆಗಳು ಎಲ್ಲಾ ಸಮಾಜಗಳಲ್ಲಿಯೂ ಕಂಡುಬರುತ್ತವೆ.
2) ಸಾಮಾಜಿಕ ಸಂಸ್ಥೆಗಳಲ್ಲಿ ನಿರ್ದಿಷ್ಟ ನಿಯಮಗಳ ಮೂಲಕ ನಿಯಂತ್ರಿಸಿ ನಿರ್ದೇಶಿಸುತ್ತವೆ.
3) ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತವೆ : ನಮ್ಮ ಮೂಲಭೂತ ಅವಶ್ಯಕತೆಗಳಾದ ವಸತಿ, ಲೈಂಗಿಕ ಬಯಕೆ,ಸಂತಾನ ಅಭಿವೃದ್ಧಿ, ವ್ಯಕ್ತಿತ್ವ ಬೆಳವಣಿಗೆ ಇತ್ಯಾದಿ ಅಗತ್ಯಗಳನ್ನು ಪೂರೈಸುತ್ತದೆ.
4) ಲಿಖಿತ ಮತ್ತು ಅಲಿಖಿತ ನೀತಿ ನಿಯಮಗಳನ್ನು ಹೊಂದಿದೆ.
5) ಒಂದು ಸಮಾಜದಲ್ಲಿ ಇರುವ ಎಲ್ಲಾ ಸಾಮಾಜಿಕ ಸಂಸ್ಥೆಗಳು ಪರಸ್ಪರ ಸಹ ಸಂಬಂಧವನ್ನು ಹೊಂದಿರುತ್ತವೆ.

**4. ಸಾಮಾಜಿಕ ಸಂಸ್ಥೆಯ ಪ್ರಕಾರಗಳು ಯಾವುವು?**

ಸಾಮಾಜಿಕ ಸಂಸ್ಥೆಯ ಪ್ರಕಾರಗಳು– ರೂಢಿ, ಕಾನೂನು, ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ರಾಜ್ಯವ್ಯವಸ್ಥೆ, ಧರ್ಮ. ಇನ್ನೂ ಮುಂತಾದವುಗಳು.

**III. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯದಲ್ಲಿ ಉತ್ತರಿಸಿ.**

**1. ಸಾಮಾಜಿಕ ಸಂಸ್ಥೆಗಳಿಗೂ ಸಮಾಜಕ್ಕೂ ಇರುವ ಸಂಬಂಧವನ್ನು ವಿವರಿಸಿ.**

- ಸಮಾಜವಿದ್ದಲ್ಲಿ ಮಾತ್ರ ಸಾಮಾಜಿಕ ಸಂಸ್ಥೆಗಳಿರುತ್ತವೆ.
- ಎಲ್ಲಾ ಸಾಮಾಜಿಕ ಸಂಸ್ಥೆಗಳು ಈ ಸಮಾಜದಲ್ಲಿಯೆ ಜನ್ಮ ತಾಳಿ ಸಮಾಜದಲ್ಲಿಯೆ ಅಸ್ಥಿತ್ವದಲ್ಲಿರುತ್ತವೆ.
- ಸಾಮಾಜಿಕ ಸಂಸ್ಥೆಗಳು ಎಲ್ಲಾ ಸಮಾಜಗಳಲ್ಲಿಯೂ ಕಂಡುಬರುತ್ತವೆ.
- ಎಲ್ಲಾ ಸಾಮಾಜಿಕ ಸಂಸ್ಥೆಗಳು ಸಮಾಜದ ಅವಿಭಾಜ್ಯ ಅಂಗಗಳಾಗಿವೆ.
- ಒಂದು ಸಮಾಜದಲ್ಲಿ ಇರುವ ಎಲ್ಲಾ ಸಾಮಾಜಿಕ ಸಂಸ್ಥೆಗಳು ಪರಸ್ಪರ ಸಹ ಸಂಬಂಧವನ್ನು ಹೊಂದಿರುತ್ತವೆ.

**2. ಸಾಮಾಜಿಕ ಸಂಸ್ಥೆಯಾದ ಧರ್ಮದ ಆದರ್ಶಗಳನ್ನು ತಿಳಿಸಿ.**

**1. ಸಾಮಾಜೀಕರಣದ ಕಾರ್ಯ:** ಧರ್ಮವು ಸಾಮಾಜೀಕರಣದ ಬಹಳ ಮುಖ್ಯ ವಾಹಕವಾಗಿದೆ.

**2. ಸಾಮಾಜಿಕ ಐಕ್ಯತೆ :** ಧರ್ಮವು ಸಾಮಾಜಿಕ ಹೊಂದಾಣಿಕೆಗೆ ಆಕರವಾಗಿದೆ. ಸತ್ಯ, ಅಹಿಂಸೆ, ಪ್ರಾಮಾಣಿಕತೆ ಇತ್ಯಾದಿ ಧಾರ್ಮಿಕ ಮೌಲ್ಯಗಳ ಮೂಲಕ ಸಾಮಾಜಿಕ ಐಕ್ಯತೆಯನ್ನು ಮೂಡಿಸುತ್ತದೆ.

**3. ಮೌಲ್ಯಗಳ ಸಂರಕ್ಷಣೆ:** ಪ್ರಾಮಾಣಿಕತೆ, ನ್ಯಾಯ, ಸಮಾನತೆ, ಅಹಿಂಸೆ, ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಉಳಿಸಿಕೊಂಡು ಬರಲು ಧರ್ಮವು ಪರಿಣಾಮಕಾರಿ ಸಾಧನವಾಗಿದೆ.

**4. ಸಾಮಾಜಿಕ ನಿಯಂತ್ರಣ :** ಧರ್ಮವು ಸಾಮಾಜಿಕ ನಿಯಂತ್ರಣದ ಅತಿ ಮುಖ್ಯ ಸಾಧನವಾಗಿದೆ.

**3. ಸಾಮಾಜಿಕ ಸಂಸ್ಥೆಯಾದ ಕುಟುಂಬದ ಸದಸ್ಯನಾಗಿ ನಿಮ್ಮ ಪಾತ್ರಗಳನ್ನು ಪಟ್ಟಿ ಮಾಡಿರಿ.**

- ಸಾಮಾಜಿಕ ಸಂಸ್ಥೆಯಾದ ಕುಟುಂಬದ ಸದಸ್ಯನಾಗಿ ನನ್ನನ್ನು ನನ್ನ ಕುಟುಂಬ ತುಂಬಾ ಚೆನ್ನಾಗಿ ಪೋಷಣೆ ಮಾಡಿದೆ. ಆದ್ದರಿಂದ ನಾನು ನನ್ನ ಕುಟುಂಬದಲ್ಲಿ ಇರುವ ಅಜ್ಜಿ–ತಾತ, ಅಪ್ಪ–ಅಮ್ಮ, ಚಿಕ್ಕವರು, ಅಶಕ್ತರು, ಹಿರಿಯರು ಎಲ್ಲರನ್ನೂ ಉತ್ತಮವಾಗಿ ನೋಡಿಕೊಳ್ಳುವ ಮೂಲಕ ಸಾಮಾಜಿಕ ಭದ್ರತೆಯನ್ನು ಅವರೆಲ್ಲರಿಗೂ ಒದಗಿಸುವ ಜವಾಬ್ದಾರಿಯನ್ನು ನಾನು ನಿರ್ವಹಿಸುತ್ತೇನೆ.
- ನನಗೆ ನನ್ನ ಕುಟುಂಬ ಸಮಾಜಿಕರಣಗೊಳಿಸಿದಂತೆ, ನಾನು ಕೂಡ ನನ್ನ ಮುಂದಿನ ಪೀಳಿಗೆಗೆ ಈ ಸಮಾಜೀಕರಣಕ್ಕೆ ಸಹಾಯ ಮಾಡುತ್ತೇನೆ.
- ಕುಟುಂಬದಲ್ಲಿ ನನಗೆ ಒದಗಿಸಿದ ಪಾತ್ರವನ್ನು ಅಂದರೆ ನನ್ನ ತಂದೆ ತಾಯಿಗಳಿಗೆ ಉತ್ತಮ ಮಕ್ಕಳಾಗಿ, ಹಿರಿಯರಿಗೆ ಮೊಮ್ಮಗನಾಗಿ, ತಮ್ಮ ತಂಗಿಗೆ ಉತ್ತಮ ಅಣ್ಣನಾಗಿ ನನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತೇನೆ.

**4. ಸಾಮಾಜಿಕ ಸಂಸ್ಥೆಯಾದ ವಿವಾಹ ಕುರಿತು ಟಿಪ್ಪಣಿ ಬರೆಯಿರಿ.**

ವಿವಾಹ ಎಂದರೇ ಪುರುಷ ಮತ್ತು ಮಹಿಳೆ, ಜೊತೆಯಾಗಿ ಜೀವನ ನಡೆಸಲು ಸಾಮಾಜಿಕ ಅನುಮತಿ ಪಡೆದುಕೊಳ್ಳುವ ಪ್ರಕ್ರಿಯೆ. ವಿವಾಹವು ಹೆಣ್ಣು ಗಂಡು ಜೋಡಿಯಾಗಲು ಸಾಮಾಜಿಕ ಅನುಮೋದನೆ ನೀಡುತ್ತದೆ.

**ವಿವಾಹದ ಕಾರ್ಯಗಳು**

**1. ಸಾಮಾಜಿಕ ಅನುಮತಿ :** ವಿವಾಹವು ಹೆಣ್ಣು ಗಂಡು ಜೋಡಿಯಾಗಲು ಸಾಮಾಜಿಕ ಅನುಮೋದನೆ ನೀಡುತ್ತದೆ. ವಿವಾಹವು ಪುರುಷರು ಮತ್ತು ಮಹಿಳೆಯರಿಗೆ ಕೌಟುಂಬಿಕ ಜೀವನಕ್ಕೆ ಪ್ರವೇಶವನ್ನು ನೀಡುತ್ತದೆ.

**2. ಕುಟುಂಬ ಸ್ಥಾಪನೆಗೆ ತಳಹದಿ :** ಸಂತಾನೋತ್ಪತ್ತಿ ಮತ್ತು ಮಕ್ಕಳ ಬೆಳೆಸುವಿಕೆ ಮತ್ತು ಸಾಮಾಜೀಕರಣದ ಪ್ರಕ್ರಿಯೆಗಳು ಕುಟುಂಬದ ನೆರವಿನೊಂದಿಗೆ ನಡೆಯುತ್ತವೆ.

3. ವಿವಾಹವಿದ್ದಾಗ ಮಾತ್ರ ಹುಟ್ಟಿದ ಮಗು ತನ್ನ ತಂದೆ–ತಾಯಿಯರ ಕುಟುಂಬದ ಆಸ್ತಿಗೆ ಉತ್ತರದಾಯಿತ್ವವನ್ನು ಹೊಂದಿರುತ್ತದೆ.

**5. ಸಾಮಾಜಿಕ ಸಂಸೆಯಾಗಿ ಧರ್ಮದ ಕಾರ್ಯಗಳು ಯಾವುವು?**

**ಧರ್ಮದ ಕಾರ್ಯಗಳು–**

1. ಸಾಮಾಜೀಕರಣದ ಕಾರ್ಯ: ಸಂಪ್ರದಾಯಗಳು, ಧಾರ್ಮಿಕ ವಿಧಿಗಳು ಮತ್ತು ಆಚರಣೆಗಳನ್ನು ನಡೆಸುವುದರ ಮೂಲಕ ಸತ್ಯಸಂಧತೆ, ಸಹಕಾರ, ನಿರಪೇಕ್ಷತೆ, ಸಹನೆ, ತ್ಯಾಗ, ಶಾಂತಿ ಇತ್ಯಾದಿ ಮೌಲ್ಯಗಳ ಪ್ರಸಾರದಲ್ಲಿ ಧರ್ಮ ನೆರವಾಗುತ್ತದೆ.

2. ಸಾಮಾಜಿಕ ಐಕ್ಯತೆ : ಧರ್ಮವು ಸಾಮಾಜಿಕ ಹೊಂದಾಣಿಕೆಗೆ ಆಕರವಾಗಿದೆ. ಸತ್ಯ, ಅಹಿಂಸೆ, ಪ್ರಾಮಾಣಿಕತೆ ಇತ್ಯಾದಿ ಧಾರ್ಮಿಕ ಮೌಲ್ಯಗಳಾಗಿದ್ದು. ಈ ಮೌಲ್ಯಗಳು ಸಾಮಾಜಿಕ ಐಕ್ಯತೆಯನ್ನು ಕಾಪಾಡಿಕೊಳ್ಳಲು ಸಹಾಯಕವಾಗಿವೆ.

3. ಮೌಲ್ಯಗಳ ಸಂರಕ್ಷಣೆ : ಪ್ರಾಮಾಣಿಕತೆ, ನ್ಯಾಯ, ಸಮಾನತೆ, ಅಹಿಂಸೆ, ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಉಳಿಸಿಕೊಂಡು ಬರಲು ಧರ್ಮವು ಪರಿಣಾಮಕಾರಿ ಸಾಧನವಾಗಿದೆ.

## ಅಧ್ಯಾಯ –4

## ಸಮಾಜದ ಪ್ರಕಾರಗಳು

**I. ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಬೇಟೆಯಾಡುವ ಸಮಾಜದ ಸದಸ್ಯರು, ಬೇಟೆಯಾಡಲು ________ ಆಯುಧಗಳನ್ನು ಉಪಯೋಗಿಸುತ್ತಾರೆ.
2. ಕೃಷಿ ಸಮಾಜದಲ್ಲಿ ಉಳುಮೆಗೆ ________ ಬಳಸುತ್ತಾರೆ.
3. ಕೌಶಲ್ಯದ ಕೆಲಸ ಹಂಚುವುದಕ್ಕೆ ________ ಎಂದು ಹೆಸರು.
4. ಕೈಗಾರಿಕ ಸಮಾಜದಲ್ಲಿ ಸಾರಿಗೆ ಮತ್ತು ________ ಹೆಚ್ಚಳವಾಗುತ್ತದೆ.
5. ಯಾಂತ್ರಿಕ ಉತ್ಪಾದನೆ ________ ಸಮಾಜದಲ್ಲಿ ಆಗುತ್ತದೆ.
6. ________ ಸಮಾಜದಲ್ಲಿ ಸಂಪತ್ತನ್ನು ಸಂಪಾದಿಸುವ ಆಸೆ ಇಲ್ಲ.
7. ಮಹಾಭಾರತದಲ್ಲಿ ಗ್ರಾಮದ ಮುಖ್ಯಸ್ಥನಿಗೆ ________ ಎಂದು ಕರೆಯಲಾಗಿದೆ.
8. ಮಾನವ ಸಮಾಜವು ________ ಎಂಬ ತೊಟ್ಟಿಲಲ್ಲಿಯೇ ವಿಕಾಸವಾಗಿದೆ ಎಂದು ಬೋಗಾರ್ಡಸ್ ಅಭಿಪ್ರಾಯಪಟ್ಟಿದ್ದಾರೆ.
9) ಸಾ.ಶ.ಪೂ. 3000 ರ ಸುಮಾರಿಗೆ ನೇಗಿಲ ಸಂಶೋಧನೆಯೊಂದಿಗೆ ________ ಆರಂಭಗೊಂಡಿತು.
10) ________ ಪದ್ಧತಿಯು ಒಂದು ಜಾತಿಯ ಜನರನ್ನು ಮತ್ತೊಂದು ಜಾತಿಯ ಮೇಲೆ ಅವಲಂಬಿಸುವಂತೆ ಮಾಡುತ್ತಿತ್ತು.
11) ರಜಪೂತರು ಹೊಂದಿದ ________ ಮತ್ತು ________ ಎಂಬ ಬಿರುದುಗಳು ಜಮೀನ್ದಾರ ವರ್ಗದವರ ಲಕ್ಷಣಗಳಾಗಿದ್ದವು.
12) ________ ಸಮಾಜವು ಶ್ರಮ ವಿಭಜನೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ.

**ಉತ್ತರಗಳು– 1) ಶಿಲೆಯ 2) ಪ್ರಾಣಿ ಮತ್ತು ನೇಗಿಲನ್ನು 3) ಶ್ರಮ ವಿಭಜನೆ 4) ಸಂಪರ್ಕ 5) ಕೈಗಾರಿಕಾ 6) ಬೇಟೆ ಮತ್ತು ಆಹಾರ ಸಂಗ್ರಹಣಾ ಸಮಾಜ 7) 'ಗ್ರಾಮಿಣಿ' 8) ಗ್ರಾಮ 9) 'ಕೃಷಿಕ್ರಾಂತಿ' 10) ಜಾಜ್‌ಮಾನಿ ಪದ್ಧತಿ 11) ರಾಯ್ ಮತ್ತು ರಾಣ 12) ಕೈಗಾರಿಕ ಸಮಾಜ**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

**1. ಸಮಾಜದ ಪ್ರಕಾರಗಳು ಯಾವುವು?**

1) ಬೇಟೆ ಮತ್ತು ಆಹಾರ ಸಂಗ್ರಹಣಾ ಸಮಾಜ.
2) ಪಶುಪಾಲನ ಸಮಾಜ.
3) ಕೃಷಿ ಸಮಾಜ.
4) ಗ್ರಾಮೀಣ ಸಮಾಜ.
5) ನಗರ ಸಮಾಜ.
6) ಕೈಗಾರಿಕಾ ಸಮಾಜ.
7) ಮಾಹಿತಿ ಸಮಾಜ.

**2. ಪಶುಪಾಲನ ಸಮಾಜ ಎಂದರೇನು?**

ಜನರು ತಮ್ಮ ಜೀವನಾಧಾರಕ್ಕೆ ಪಶುಗಳನ್ನು (ದನ, ಎಮ್ಮೆ, ಹಸು, ಕುರಿ, ಆಡು, ಇತ್ಯಾದಿ) ಹಿಂಡು ಹಿಂಡಾಗಿ ಸಾಕುವ ಸಮಾಜವನ್ನು ಪಶುಪಾಲನ ಸಮಾಜ ಎಂದು ಕರೆಯಲಾಗುತ್ತದೆ.

**3. ಕೃಷಿಯು ಸಮಾಜದಲ್ಲಿ ಹೇಗೆ ಮಹತ್ವವನ್ನು ಪಡೆದಿದೆ.**

- ಕೃಷಿಯು ಎಲ್ಲಾ ಜೀವಿಗಳಿಗೆ ಆಹಾರ ಉತ್ಪಾದನೆಯ ಮುಖ್ಯ ಮೂಲವಾಗಿದೆ.
- ಭಾರತದಲ್ಲಿ ಸುಮಾರು ಆರು ಲಕ್ಷದಷ್ಟು ಇರುವ ಕೃಷಿ ಗ್ರಾಮಗಳು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿವೆ.
- ದೇಶದ ಬಹುಸಂಖ್ಯಾತ ಜನಗಳು ಇಂದಿಗೂ ಗ್ರಾಮಗಳಲ್ಲಿಯೇ ವಾಸಿಸುತ್ತಿದ್ದಾರೆ.
- ಕೃಷಿ ಕ್ಷೇತ್ರದಲ್ಲಿ ತಮ್ಮ ಜೀವನೋಪಾಯವನ್ನು ಕಂಡುಕೊಂಡಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ 59ರಷ್ಟು ಪುರುಷರು ಮತ್ತು ಶೇಕಡ 75ರಷ್ಟು ಮಹಿಳೆಯರು ಜೀವನೋಪಾಯಕ್ಕೆ ಕೃಷಿಯನ್ನುನೇರವಾಗಿ ಅವಲಂಬಿಸಿದ್ದಾರೆ.

**4. ಕೈಗಾರಿಕಾ ಸಮಾಜ ಎಂದರೇನು?**

ಸಮಾಜದಲ್ಲಿ ಉತ್ಪಾದನೆಯು ಮಾನವ ಶ್ರಮದಿಂದ ನಡೆಯದೇ ಯಂತ್ರಚಾಲಿತ ತಾಂತ್ರಿಕತೆಯಿಂದ ನಡೆಯುವ, ಶ್ರಮವಿಭಜನೆಯ ಮೂಲಕ ವೈಜ್ಞಾನಿಕ ವಿಧಾನಗಳನ್ನು ಉತ್ಪಾದನೆಯಲ್ಲಿ ಬಳಸುವ ಹಾಗೂ ಶಕ್ತಿ ಮೂಲಗಳನ್ನು ಹುಡುಕುವ ಸಮಾಜವೇ ಕೈಗಾರಿಕಾ ಸಮಾಜ.

**5. ಮಾಹಿತಿ ಸಮಾಜವು ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವುದನ್ನು ಸಮರ್ಥಿಸಿ.**

- ಮಾಹಿತಿ ಸಮಾಜ ಎನ್ನುವುದು ಎಲ್ಲ ವರ್ಗದವರಿಗೂ ಅವಶ್ಯಕವಾಗಿರುವುದರಿಂದ ಹೆಚ್ಚು ಪ್ರಾಮುಖ್ಯತೆ ಪಡೆದಿದೆ.
- ಇಂದಿನ ಆಧುನಿಕತೆ ಹಾಗೂ ನಗರ ಜೀವನದ ಸುಲಲಿತ ಸೌಲಭ್ಯಗಳಿಗಾಗಿ ಮಾಹಿತಿ ಸಮಾಜವೇ ಆಧಾರವಾಗಿದೆ.
- ಈ ಸಮಾಜದಲ್ಲಿ ಜನರು ಏನೇ ಸೌಲಭ್ಯಗಳನ್ನು ಮತ್ತು ಕುಂದು ಕೊರತೆಗಳನ್ನು ನೆರವೇರಿಸಿಕೊಳ್ಳಲು ಮಾಹಿತಿ ಸಮಾಜದ ಕಡೆ ಮೊರೆ ಹೋಗುವುದು ಸಹಜವಾಗಿದೆ.
- ಮುಂದಿನ ಜೀವನಕ್ಕೆ ಅವಶ್ಯಕತೆ ಇರುವ ಶಿಕ್ಷಣ, ವಾಣಿಜ್ಯ, ಕೈಗಾರಿಕೆ, ಇನ್ನೂ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಮಾಜ ಸಹಾಯಕವಾಗುತ್ತದೆ.

**III. <u>ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯದಲ್ಲಿ ಉತ್ತರಿಸಿ.</u>**

**1. ಬೇಟೆಯಾಡುವ ಹಾಗೂ ಆಹಾರ ಸಂಗ್ರಹಿಸುವ ಸಮಾಜದ ಜೀವನ ಶೈಲಿಯನ್ನು ವಿವರಿಸಿ.**

- ಬೇಟೆಯಾಡುವ ಹಾಗೂ ಆಹಾರ ಸಂಗ್ರಹಿಸುವ ಸಮಾಜವು ಬೇಟೆಯಾಡುವುದು, ಮೀನುಗಾರಿಕೆ ಮಾಡುವುದು, ಜೇನು ಮತ್ತು ಗೆಡ್ಡೆ-ಗೆಣಸುಗಳನ್ನು ಸಂಗ್ರಹಿಸುವುದು ಪ್ರಮುಖ ಕಾರ್ಯವಾಗಿತ್ತು.
- ಇಲ್ಲಿ ವಯಸ್ಸು ಮತ್ತು ಲಿಂಗದ ಆಧಾರದ ಮೇಲೆ ಸ್ಥಾನಮಾನ ನಿಗದಿಯಾಗಿರುತ್ತದೆ.
- ಸಂಪತ್ತನ್ನು ಸಂಪಾದಿಸುವ ಆಸೆ ಇಲ್ಲಿ ಇರಲಿಲ್ಲ.
- ಹಂಚಿಕೊಂಡು ಬದುಕುವುದು ಈ ಸಮಾಜದ ಲಕ್ಷಣವಾಗಿತ್ತು.
- ಬೇಟೆ ಸಮಾಜದಲ್ಲಿ ಜನರು ತಮ್ಮ ಆಹಾರಕ್ಕೆ ಪ್ರಾಣಿಗಳನ್ನು ಕಲ್ಲಿನ ಅಯುಧಗಳಿಂದ ಬೇಟೆಯಾಡುತ್ತಿದ್ದರು.

**2. ಪಶುಪಾಲನ ಸಮಾಜದ ಲಕ್ಷಣಗಳನ್ನು ತಿಳಿಸಿ.**

- ಜನರು ತಮ್ಮ ಜೀವನಾಧಾರಕ್ಕೆ ಪಶುಗಳನ್ನು (ದನ, ಎಮ್ಮೆ, ಹಸು, ಕುರಿ, ಆಡು, ಇತ್ಯಾದಿ) ಹಿಂಡು ಹಿಂಡಾಗಿ ಸಾಕುವ ಸಮಾಜವನ್ನು ಪಶುಪಾಲನ ಸಮಾಜ ಎಂದು ಕರೆಯಲಾಗುತ್ತದೆ.
- ಈ ಸಮಾಜದಲ್ಲಿ ಸುಮಾರು ನೂರರಿಂದ– ಸಾವಿರದಷ್ಟು ಜನರಿರುತ್ತಾರೆ.
- ಪಶುಪಾಲನೆಯು ಈ ಸಮಾಜದ ಪ್ರಮುಖ ಕೆಲಸವಾಗಿತ್ತು.
- ಈ ಸಮಾಜವು ಒಬ್ಬ ನಾಯಕನ ನಿಯಂತ್ರಣಕ್ಕೆ ಒಳಪಟ್ಟಿರುತ್ತಿತ್ತು.
- ಈ ಜನರು ಜೀವನೋಪಾಯದ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಪಶುಪಾಲನೆ, ಬೇಟೆಯಾಡುವಿಕೆ, ಆಹಾರ ಸಂಗ್ರಹಿಸುವಿಕೆ ಕೆಲಸಗಳಲ್ಲಿ ತೊಡಗಿರುತ್ತಾರೆ.

**3. ಭೂಮಿ ಮತ್ತು ಕೃಷಿಗೆ ಇರುವ ಸಂಬಂಧವನ್ನು ವಿವರಿಸಿ.**

- ಕೃಷಿ ಸಮಾಜದಲ್ಲಿ ನಡೆಯುವ ಪ್ರಮುಖ ಆರ್ಥಿಕ ಚಟುವಟಿಕೆಯಲ್ಲಿ ಅದರಲ್ಲಿಯೂ ಭೂಹಿಡುವಳಿ, ಭೂಮಿ ಜೊತೆಗಿನ ಸಂಬಂಧ ಮತ್ತು ಕೃಷಿ ಚಟುವಟಿಕೆ ಆಧಾರದಲ್ಲಿ ಕೃಷಿ ಸಮಾಜದ ರಚನೆಯನ್ನು ಗುರುತಿಸಬಹುದು.
- ಜಮೀನ್ದಾರಿ, ರೈತವಾರಿ ಮತ್ತು ಮಹಲ್‌ವಾರಿ ಪದ್ದತಿಗಳು ರೈತರಿಗೆ ಭೂಮಿಯ ಆಧಾರದ ಮೇಲೆಯೆ ಕಂದಾಯ ನಿಗಧಿ ಮಾಡಿದ್ದ ಪದ್ದತಿಯಾಗಿತ್ತು.
- ಇನ್ನೂ ಗೇಣಿ ಪದ್ದತಿಯಂತೂ ಪೂರ್ಣ ಪ್ರಮಾಣದಲ್ಲಿ ರೈತ ಹೊಂದಿದ್ದ ಭೂಮಿಯನ್ನೆ ಮುಖ್ಯ ಆಧಾರಿವಾಗಿಟ್ಟುಕೊಂಡು ಕಂದಾಯ ನಿಗದಿ ಮಾಡುವ ಮೂಲಕ ಕೃಷಿಯನ್ನು ನಿಯಂತ್ರಿಸುತ್ತಿದ್ದರು.

**4. ಕೈಗಾರಿಕಾ ಸಮಾಜದ ಲಕ್ಷಣಗಳನ್ನು ಪಟ್ಟಿಮಾಡಿ.**

**ಕೈಗಾರಿಕಾ ಸಮಾಜದ ಲಕ್ಷಣಗಳು**

1. **ಕೈಗಾರಿಕಾ ಆಧಾರಿತ ಆರ್ಥಿಕತೆ:** ಬಂಡವಾಳಶಾಹಿ ವರ್ಗ, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳಾಗಿ ವಿಭಾಗಗಳಾಗುತ್ತವೆ. ಇಲ್ಲಿ ನಡೆಯುವ ಬಹುತೇಕ ಆರ್ಥಿಕ ಚಟುವಟಿಕೆಗಳು ಕೈಗಾರಿಕೆಗೆ ಸಂಬಂಧಿಸಿದ್ದೇ ಆಗಿರುತ್ತದೆ.
2. **ದುಡಿಮೆಯಲ್ಲಿ ವೃತ್ತಿಪರತೆ:** ತಾಂತ್ರಿಕ ಕೆಲಸಗಳು ಮತ್ತು ಅದಕ್ಕೆ ಬೇಕಾದ ಕೌಶಲ್ಯ, ಜ್ಞಾನ ಮತ್ತು ತರಬೇತಿ ಇವು ಅಗತ್ಯವಾಗಿರುತ್ತವೆ.
3. **ಸಾರಿಗೆ ಮತ್ತು ಸಂಪರ್ಕ:** ಬಹುವಿಸ್ತೃತವಾದ ಸಾರಿಗೆ ಮತ್ತು ಸಂಪರ್ಕ ಮಾಧ್ಯಮಗಳ ವಿಸ್ತರಣೆಯಾಗುತ್ತದೆ.
4. **ವಲಸೆಯ ಹೆಚ್ಚಳ:** ಕೈಗಾರಿಕಾ ಕ್ರಾಂತಿಯ ನಂತರ ವಲಸೆಯು ಹಳ್ಳಿಗಳಿಂದ ನಗರಗಳ ಕಡೆಗೆ ಹೆಚ್ಚಾಗಿದೆ.

**5. ಮಾಹಿತಿ ಸಮಾಜ ಕುರಿತು ಟಿಪ್ಪಣಿ ಬರೆಯಿರಿ.**

- ಮಾಹಿತಿ ಸಮಾಜದಲ್ಲಿ ಜನರು ಏನೇ ಸೌಲಭ್ಯಗಳನ್ನು ಮತ್ತು ಕುಂದುಕೊರತೆಗಳನ್ನು ನೆರವೇರಿಸಿಕೊಳ್ಳಲು ಮಾಹಿತಿ ಸಮಾಜದ ಕಡೆ ಮೊರೆ ಹೋಗುವುದು ಸಹಜವಾಗಿದೆ.
- ಮುಂದಿನ ಜೀವನಕ್ಕೆ ಅವಶ್ಯಕತೆ ಇರುವ ಶಿಕ್ಷಣ, ವಾಣಿಜ್ಯ, ಕೈಗಾರಿಕೆ, ಇನ್ನೂ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿಗೆ ಸಮಾಜ ಸಹಾಯಕವಾಗುತ್ತದೆ.
- ಇಲ್ಲಿ ಹೊಸ ತಂತ್ರಜ್ಞಾನದ ಪರಿಕರಗಳ ಉಪಯೋಗ ಹೆಚ್ಚಾಗಿರುತ್ತದೆ.
- ಕಂಪ್ಯೂಟರ್ ಜ್ಞಾನದ ಉಪಯೋಗವು ಇಲ್ಲಿ ಹೆಚ್ಚಾಗಿದ್ದು ಜ್ಞಾನ ವಿನಿಮಯದ ಮುಖ್ಯ ಮೂಲ ಇದೇ ಆಗಿದೆ. ಕಂಪ್ಯೂಟರ್‌ಗಳು ಮಾಹಿತಿ ಕಣಜವಾಗುತ್ತಿವೆ.

# ಭೂಗೋಳಶಾಸ್ತ್ರ

## ಅಧ್ಯಾಯ – 3

## ವಾಯುಗೋಳ

**I. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ಭರ್ತಿಮಾಡಿರಿ.**

1. ವಾಯುಗೋಳದ ಎರಡು ಪ್ರಮುಖ ಅನಿಲಗಳೆಂದರೆ ________ ಮತ್ತು ________
2. ವಾಯುಗೋಳದ ಅತ್ಯಂತ ಕೆಳಸ್ತರ ________ ಆಗಿದೆ.
3. ಸಮುದ್ರಮಟ್ಟದಲ್ಲಿ ವಾಯುಗೋಳದದ ಸರಾಸರಿ ಒತ್ತಡವು ________ ಆಗಿದೆ.
4. ಪಶ್ಚಿಮ ಮಾರುತಗಳನ್ನು ________ ಎಂದೂ ಕರೆಯುತ್ತಾರೆ.
5. ಹವಾಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರ ________ ಆಗಿದೆ.
6. ವಾಯುಗೋಳದ ದಪ್ಪ ಸುಮಾರು ____________ ಆಗಿದೆ.
7. ಸಮೋಷ್ಣಮಂಡಲವು ಸೂರ್ಯನಿಂದ ಬರುವ __________ ಕಿರಣಗಳನ್ನು ಹೀರಿಕೊಂಡು ಭೂಮಿಯ ಜೀವರಾಶಿಗಳನ್ನು ರಕ್ಷಿಸಿದೆ.
8. ವಾಯುವಿನ ಒತ್ತಡವನ್ನು ಅಳೆಯಲು ಬಳಸುವ ಉಪಕರಣ ________
9. __________ ಪ್ರದೇಶದ ವಲಯವನ್ನು ಅಶ್ವ ಅಕ್ಷಾಂಶಗಳ ವಲಯ ಎಂತಲೂ ಕರೆಯುವರು.
10. ಸ್ಥಳೀಯ ಮಾರುತಗಳನ್ನು ಭಾರತದಲ್ಲಿ ______ ಎನ್ನುವರು.
11. ____________ ಗಳ ಜನಪ್ರಿಯ ಹೆಸರು 'ಕುದುರೆಬಾಲ'ದ ಮೋಡಗಳು.
12. ಮಂಗಳೂರು– ಮಾರುತಗಳಿಗೆ ಎದುರಾಗಿರುವ ಭಾಗ, _______– ಮಾರುತಗಳಿಗೆ ಮರೆಯಾಗಿರುವ ಮಳೆನೆರಳಿನ ಪ್ರದೇಶ.

**ಉತ್ತರಗಳು:– 1) ಸಾರಜನಕ, ಆಮ್ಲಜನಕ 2) ಪರಿವರ್ತನಾಮಂಡಲ 3) 1013.25 ಮಿಲಿಬಾರ್ 4) ಪ್ರತಿ ವಾಣಿಜ್ಯ ಮಾರುತಗಳು 5)'ಹವಾಗುಣ ಶಾಸ್ತ್ರ' (Meteorology) 6) 1000 ಕಿ.ಮೀ. 7) ಅತಿನೇರಳೆ (ಅಲ್ಟ್ರಾವೈಲೆಟ್) 8) ವಾಯುಭಾರಮಾಪಕ (Barometer). 9) ಉತ್ತರ ಉಪ–ಉಷ್ಣವಲಯದ ಅಧಿಕ ಒತ್ತಡ 10) ಲೂ 11) ಹಿಮಕಣ ಮೋಡಗಳು 12) ಹಾಸನ.**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ವಾಯುಗೋಳ ಎಂದರೇನು?**

ಭೂಮೇಲ್ಮೈ ಮತ್ತು ಬಾಹ್ಯಾಕಾಶಗಳ ನಡುವೆ ಭೂಮಿಯನ್ನು ಸುತ್ತುವರಿದಿರುವ ಅನಿಲಗಳು, ಧೂಳಿನ ಕಣ ಮತ್ತು ನೀರಾವಿಯ ತೆಳುವಾದ ಪದರವನ್ನು ವಾಯುಗೋಳವೆಂದು ಕರೆಯುತ್ತೇವೆ.

**2. ವಾಯುಗೋಳದ ಪ್ರಮುಖ ಪದರುಗಳನ್ನು ಹೆಸರಿಸಿ.**

ವಾಯುಗೋಳವನ್ನು ಅದರ ಲಕ್ಷಣಗಳನ್ನು ಆಧರಿಸಿ ಐದು ಪದರುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1) ಪರಿವರ್ತನಾಮಂಡಲ,
2) ಸಮೋಷ್ಣಮಂಡಲ,
3) ಮಧ್ಯಂತರಮಂಡಲ,
4) ಉಷ್ಣತಾಮಂಡಲ ಮತ್ತು
5) ಬಾಹ್ಯಮಂಡಲ.

**3. ಓಝೋನ್ ಪದರದ ಪ್ರಾಮುಖ್ಯತೆ ಏನು?**

- ಸಮೋಷ್ಣಮಂಡಲ ಪದರದಲ್ಲಿ ಓಝೋನ್ ಅನಿಲವು ಅತ್ಯಂತ ಮುಖ್ಯವಾದುದು.
- ಇದು ಸೂರ್ಯನಿಂದ ಬರುವ ಅತಿನೇರಳೆ (ಅಲ್ಟ್ರಾವೈಲೆಟ್) ಕಿರಣಗಳನ್ನು ಹೀರಿಕೊಂಡು ಭೂಮಿಯ ಮೇಲಿನ ಎಲ್ಲಾ ಜೀವರಾಶಿಗಳನ್ನು ರಕ್ಷಿಸಿದೆ.
- ಈ ಅತಿನೇರಳೆ (ಅಲ್ಟ್ರಾವೈಲೆಟ್) ಕಿರಣಗಳು ಜೀವರಾಶಿಗೆ ಅತ್ಯಂತ ಮಾರಕ ಅಂಶವಾಗಿದೆ.

**4. ಶಾಂತವಲಯ ಎಂದರೇನು? ಅದು ಎಲ್ಲಿ ಕಂಡುಬರುತ್ತದೆ?**

ಸಮಭಾಜಕವೃತ್ತದಿಂದ 5° ಉತ್ತರ ಮತ್ತು 5° ದಕ್ಷಿಣ ಅಕ್ಷಾಂಶದವರೆಗಿನ ಭಾಗವು ವರ್ಷವೆಲ್ಲಾ ಸೂರ್ಯನ ಲಂಬವಾದ ಕಿರಣಗಳನ್ನು ಪಡೆಯುವುದು. ಇದರಿಂದ ವಾಯು ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತದೆ ಹಾಗೂ ಇಲ್ಲಿ ವಾಯು ಚಲನೆ ಕಡಿಮೆ. ಈ ವಲಯವು ಪ್ರಶಾಂತವಾಗಿದ್ದು (calm) ಲಘುಮಾರುತಗಳಿರುವುದರಿಂದ ಇದನ್ನು 'ಶಾಂತವಲಯ' (Doldrum) ಎಂದೂ ಕರೆಯುವರು.

ಇದು **ಸಮಭಾಜಕವೃತ್ತದ ಕಡಿಮೆ ಒತ್ತಡ ಪ್ರದೇಶ** ದಲ್ಲಿ ಕಂಡುಬರುತ್ತದೆ.

**5. ನಿರಂತರ ಮಾರುತಗಳ ವಿಧಗಳನ್ನು ಹೆಸರಿಸಿ.**

1) ವಾಣಿಜ್ಯ ಮಾರುತಗಳು (Trade Winds)
2) ಪ್ರತಿ ವಾಣಿಜ್ಯ ಮಾರುತಗಳು (Anti trade Winds)
3) ಧ್ರುವೀಯ ಮಾರುತಗಳು (Polar Winds)

**6. ಸ್ಥಳೀಯ ಮಾರುತಗಳೆಂದರೇನು? ಯಾವುದಾದರೂ ಎರಡು ಉದಾಹರಣೆ ಕೊಡಿ.**

ನಿರಂತರ ಮತ್ತು ನಿಯತಕಾಲಿಕ ಮಾರುತಗಳು ಸ್ಥಳೀಯ ಉಷ್ಣಾಂಶ, ಒತ್ತಡ, ತೇವಾಂಶಗಳ ವ್ಯತ್ಯಾಸದ ಪರಿಣಾಮವಾಗಿ ಸ್ಥಳೀಯ ಮಾರುತಗಳುಂಟಾಗುತ್ತವೆ. ಇವುಗಳನ್ನೇ ಸ್ಥಳೀಯ ಮಾರುತಗಳೆನ್ನುವರು.

ಪ್ರಮುಖ ಸ್ಥಳೀಯ ಮಾರುತಗಳಾವುವೆಂದರೆ, ಭೂಗಾಳಿ, ಸಮುದ್ರಗಾಳಿ, ಪರ್ವತಗಾಳಿ, ಕಣಿವೆಗಾಳಿ ಮತ್ತು ಇತರೆ ಕೆಲವು ಮಾರುತಗಳನ್ನು ಭಾರತದಲ್ಲಿ 'ಲೂ' ಎಂದು, ಯು.ಎಸ್.ಎ.ಯಲ್ಲಿ 'ಚಿನೂಕ್' ಅಥವಾ 'ಹಿಮಭಕ್ಷಕ' ಎಂದು ಕರೆಯುತ್ತಾರೆ.

**7. ಮೋಡಗಳ ವಿಧಗಳನ್ನು ತಿಳಿಸಿ.**

ಮೋಡಗಳನ್ನು ನಾಲ್ಕು ಮುಖ್ಯ ವಿಧಗಳಾಗಿ ವಿಂಗಡಿಸಬಹುದು. ಇವುಗಳೆಂದರೆ :

1) ಪದರು ಮೋಡಗಳು
2) ರಾಶಿ ಮೋಡಗಳು
3) ಹಿಮಕಣ ಮೋಡಗಳು
4) ರಾಶಿವೃಷ್ಟಿ ಮೋಡಗಳು.

**8. ವಾಯುಗೋಳ ಎಂದರೇನು? ಇದರ ಪ್ರಾಮುಖ್ಯತೆಯನ್ನು ತಿಳಿಸಿ.**

ಭೂಮಿಯನ್ನು ಸುತ್ತುವರಿದಿರುವ ಅನಿಲಗಳು, ಧೂಳಿನ ಕಣ ಮತ್ತು ನೀರಾವಿಯ ತೆಳುವಾದ ಪದರವನ್ನು ವಾಯುಗೋಳವೆಂದು ಕರೆಯುತ್ತೇವೆ.

ಪ್ರಾಮುಖ್ಯತೆ–

- ಈ ಅನಿಲದ ಪದರವು ಭೂಮೇಲ್ಮೈ ಮತ್ತು ಬಾಹ್ಯಾಕಾಶಗಳ ನಡುವಿನ ರಕ್ಷಣಾ ವಲಯ.
- ವಾಯುಗೋಳವು ಭೂಮಿಯ ಎಲ್ಲಾ ಬಗೆಯ ಜೀವಿಗಳಿಗೆ ಅತ್ಯವಶ್ಯವಾಗಿದೆ.
- ವಾಯುಗೋಳದ ಕೆಲವು ಅನಿಲಗಳು ಮಾನವ ಮತ್ತು ಇತರ ಜೀವಿಗಳ ಉಸಿರಾಟಕ್ಕೆ ಅತ್ಯವಶ್ಯವಾಗಿದೆ.
- ಸಸ್ಯಗಳು ಈ ಅನಿಲಗಳ ನೆರವಿನಿಂದ ಆಹಾರವನ್ನು ಉತ್ಪಾದಿಸುತ್ತವೆ.
- ವಾಯುಗೋಳವು ಸೂರ್ಯನ ಶಾಖವನ್ನು ಹಿಡಿದಿರಿಸಿಕೊಂಡು ಭೂಮಿಯು ಒಂದು ಜೀವಗ್ರಹ ವಾಗಿರವಂತೆ ಮಾಡಿದೆ.
- ವಾಯುಗೋಳದ ಶಾಖ ಮತ್ತು ಶಕ್ತಿಯನ್ನು ಹಿಡಿದಿರಿಸಿಕೊಂಡು ಅದು ಒಂದು ಸ್ಥಳದ ಹವಾಮಾನದ ಪರಿಸ್ಥಿತಿಯ ಮೇಲೆ ಪ್ರಭಾವವನ್ನು ಬೀರುವುದು.

**9. ಹವಾಗುಣ ಮತ್ತು ವಾಯುಗುಣಕ್ಕಿರುವ ವ್ಯತ್ಯಾಸಗಳೇನು?**

| ಹವಾಗುಣ | ವಾಯುಗುಣ |
|---|---|
| 1. ಒಂದು ಸ್ಥಳದ ಅಲ್ಪಾವಧಿಯ ವಾಯುಗೋಳದ ಪರಿಸ್ಥಿತಿಯನ್ನು ಹವಾಗುಣ ಎನ್ನುವರು.<br>2. ಉದಾ: ಮೋಡಯುಕ್ತ ಪ್ರಖರ ಬಿಸಿಲು, ಹಿತಕರ ಹವಾಗುಣ.<br>3. ಹವಾಗುಣ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದಕ್ಕೆ 'ಹವಾಗುಣ ಶಾಸ್ತ್ರ' **(Meteorology)** ಎನ್ನುವರು. | 1. ಒಂದು ಪ್ರದೇಶದ ದೀರ್ಘಾವಧಿಯ ಹವಾಗುಣದ ಸರಾಸರಿಯನ್ನು ವಾಯುಗುಣವೆನ್ನುವರು.<br>2. ಉದಾ: ಸಮಭಾಜಕ ವೃತ್ತದ ವಾಯುಗುಣ, ತಂಡ್ರಾ ವಾಯುಗುಣ, ಮರುಭೂಮಿ ವಾಯುಗುಣ, ಮೆಡಿಟರೇನಿಯನ್, ಮಾನ್ಸೂನ್ ವಾಯುಗುಣ ಮೊದಲಾದವು.<br>3. ವಾಯುಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು 'ವಾಯುಗುಣಶಾಸ್ತ್ರ' **(Climatology)** ಎನ್ನುವರು. |

**10. ವಾಯುಗೋಳದ ವಿವಿಧ ಅನಿಲಗಳ ಸಂಯೋಜನೆ ತಿಳಿಸಿ.**

ವಾಯುಗೋಳವು ವಿವಿಧ ಬಗೆಯ ಅನಿಲಗಳು, ಧೂಳಿನ ಕಣಗಳು ಮತ್ತು ನೀರಾವಿಯ ಮಿಶ್ರಣವಾಗಿದೆ. ವಾಯುಗೋಳದ ಮುಖ್ಯ ಅನಿಲಗಳೆಂದರೆ ಸಾರಜನಕ ಶೇ.78.08, ಆಮ್ಲಜನಕ ಶೇ.20.94, ಆರ್ಗಾನ್ ಶೇ.0.93, ಇಂಗಾಲದ ಡೈಆಕ್ಸೈಡ್ ಶೇ.03, ಮತ್ತು ಓಜೋನ್ ಶೇ. 0.000005. ವಾಯುಗೋಳವು ಧೂಳಿನ ಕಣಗಳನ್ನು ಸಹ ಒಳಗೊಂಡಿದ್ದು, ನೀರಿನ ಕಣಗಳ ನಿರ್ಮಾಣಕ್ಕೆ ಸಹಾಯಕವಾಗಿದೆ.

**III. ಈ ಕೆಳಗಿನವುಗಳನ್ನು ಅರ್ಥೈಸಿ.**

**1. ಆಯಾನವಲಯ :–** ಉಷ್ಣತಾಮಂಡಲ ಪದರದಲ್ಲಿನ ಅತ್ಯಧಿಕ ಉಷ್ಣಾಂಶದ ಪರಿಣಾಮವಾಗಿ ಅನಿಲದ ಅಣುಗಳು ಆಯಾನುಗಳಾಗಿ ಪರಿವರ್ತನೆ ಹೊಂದಿರುವ ವಲಯವನ್ನು 'ಆಯಾನುಮಂಡಲ'ವೆಂದು ಕರೆಯುವರು.

**2. ಸಾಮಾನ್ಯ ಇಳಿಕೆಯದರ :–** ಎತ್ತರಕ್ಕೆ ಹೋದಂತೆ ಅನಿಲಗಳ ಪ್ರಮಾಣ ಕಡಿಮೆಯಾಗುವುದರಿಂದ ಒತ್ತಡ ಕಡಿಮೆಯಾಗಿ ಉಷ್ಣಾಂಶವು ಕಡಿಮೆಯಾಗುತ್ತದೆ. ಇದನ್ನು ಉಷ್ಣಾಂಶದ ಸಾಮಾನ್ಯ ಇಳಿಕೆ ಪ್ರಮಾಣ ಎನ್ನುವರು.

**3. ಶೀತವಲಯ:–** ಇವು 66½° (ಆರ್ಕ್ಟಿಕ್ ವೃತ್ತ) ಉತ್ತರದಿಂದ 90° ಉತ್ತರ ಧ್ರುವದವರೆಗೆ ಹಾಗೂ ದಕ್ಷಿಣಾರ್ಧಗೋಳದಲ್ಲಿ 66½° ದಕ್ಷಿಣದಿಂದ (ಅಂಟಾರ್ಕ್ಟಿಕ್ ವೃತ್ತ) 90° ದಕ್ಷಿಣ ಧ್ರುವದವರೆಗೆ ಹರಡಿರುವ ಕಡಿಮೆ ಉಷ್ಣಾಂಶದ ಪ್ರದೇಶವೇ ಶೀತವಲಯ.

**4. ಅಶ್ವಅಕ್ಷಾಂಶ:–** ಉತ್ತರ ಉಪ–ಉಷ್ಣವಲಯದ ಅಧಿಕ ಒತ್ತಡ ಪ್ರದೇಶ ಪಟ್ಟಿಗಳು ಅಂದರೇ 30° ಉತ್ತರದಿಂದ 35° ಉತ್ತರ ಅಕ್ಷಾಂಶಗಳವರೆಗೆ ಕಂಡುಬರುವ ವಲಯವನ್ನು ಅಶ್ವ ಅಕ್ಷಾಂಶಗಳ ವಲಯ ಕರೆಯುವರು.

**5. ಆರೋಹಮಳೆ (ಪರ್ವತ ಮಳೆ):–** ತೇವಾಂಶವನ್ನು ಹೊಂದಿರುವ ವಾಯುವು ಚಲನ ದಿಕ್ಕಿಗೆ ಅಡ್ಡಲಾಗಿರುವ ಪರ್ವತಗಳಿಂದ ತಡೆಯಲ್ಪಟ್ಟಾಗ ಅದು ಮೇಲೆರುವುದು. ಎತ್ತರಕ್ಕೆ ಏರಿದಂತೆ ವಾಯು ತಂಪಾಗಿ ಅದರಲ್ಲಿರುವ ಜಲಾಂಶವು ಘನೀಕರೀಸಿ ಮಳೆ ಬೀಳುವುದು. ಹೀಗೆ ಪರ್ವತಗಳಿಂದ ಉಂಟಾಗುವ ಮಳೆಯೇ ಪರ್ವತ ಮಳೆ ಅಥವಾ ಆರೋಹ ಮಳೆ.

**6. ವಾಯುಗುಣ ಶಾಸ್ತ್ರ:–** ವಾಯುಗುಣದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ವಾಯುಗುಣಶಾಸ್ತ್ರ' **(Climatology)** ಎನ್ನುವರು.

## ಅಧ್ಯಾಯ–4
## ಜಲಗೋಳ

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ಖಂಡಾವರಣ ಪ್ರದೇಶದ ಸರಾಸರಿ ಆಳವು ________ ಆಗಿದೆ.
2. ಒಂದು ಪ್ಯಾದಮ್ ______ ಅಡಿಗಳಿಗೆ ಸಮವಾಗಿರುತ್ತದೆ.
3. ಪೆಸಿಫಿಕ್ ಸಾಗರದ ಅತ್ಯಂತ ಆಳವಾದ ಸ್ಥಳ ________ಆಗಿದೆ.
4. ಸಾಗರಗಳ ಸರಾಸರಿ ಲವಣತೆಯ ಪ್ರಮಾಣ ______ ರಷ್ಟಿದೆ.
5. ಹುಣ್ಣಿಮೆಯ ದಿನಗಳಲ್ಲಿ ಕಂಡುಬರುವ ಉಬ್ಬರಗಳು ______
6. ಭೂಮೇಲ್ಮೈನ ________ ಭಾಗ ನೀರಿನಿಂದ ಆವೃತವಾಗಿದೆ.
7. ________ ಯು ಮೀನುಗಾರಿಕೆಗೆ ಸಹಾಯಕವಾಗ ಸಾಗರ ತಳದ ಭೂಸ್ವರೂಪವಾಗಿದೆ.
8. ಸೂರ್ಯನ ಕಿರಣಗಳು ನೀರಿನಲ್ಲಿ ________ ಗಳವರೆಗೆ ಮಾತ್ರ ಪ್ರವೇಶಿಸುತ್ತವೆ.
9. ಒಂದು ಅಧಿಕ ಉಬ್ಬರದಿಂದ ಮತ್ತೊಂದು ಅಧಿಕ ಉಬ್ಬರಗಳ ನಡುವೆ ________ ವೇಳೆಯ ಅಂತರವಿರುತ್ತದೆ.
10. ____________ ವು ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳು ಒಂದೇ ಸರಳ ರೇಖೆಯಲ್ಲಿರುವ ಅಮಾವಾಸ್ಯೆ ಅಥವಾ ಹುಣಿಮೆ ದಿನಗಳಲ್ಲಿ ಉಂಟಾಗುತ್ತದೆ.

**ಉತ್ತರಗಳು:– 1) 100 ಫ್ಯಾದಮ್‌ಗಳು 2) ಆರು/ 6 3) ಫಿಲಿಫೈನ್ಸ್ ದ್ವೀಪಗಳ ಬಳಿಯಿರುವ 'ಚಾಲೆಂಜರ್ ತಗ್ಗು' 4) 35/ °°° (ಅಂದರೆ 1000 ಭಾಗದಲ್ಲಿ 35 ಭಾಗ ಎಂದರ್ಥ) 5) ಗರಿಷ್ಠ ಅಥವಾ ಅಧಿಕ ಉಬ್ಬರ 6) 70.78% 7) ಖಂಡಾವರಣ ಪ್ರದೇಶ 8) 200 ಮೀ 9) 12 ಗಂಟೆ 26 ನಿಮಿಷ 10) ಗರಿಷ್ಠ ಅಥವಾ ಅಧಿಕ ಉಬ್ಬರ.**

**II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಜಲಗೋಳ ಎಂದರೇನು?**

ಭೂಮೇಲ್ಮೈನ 70.78% ಭಾಗ ಅಂದರೆ 361 ದಶಲಕ್ಷ ಚ.ಕಿ.ಮೀ. ಪ್ರದೇಶವು ನೀರಿನಿಂದ ಆವರಿಸಿರುವುದನ್ನು ಜಲಗೋಳ ಎನ್ನುವರು.

**2. ಸಾಗರತಳದ ಭೂ ಸ್ವರೂಪದ ನಾಲ್ಕು ಪ್ರಮುಖ ಭಾಗಗಳನ್ನು ತಿಳಿಸಿ.**

1. ಖಂಡಾವರಣ ಪ್ರದೇಶ,
2. ಖಂಡಾವರಣ ಇಳಿಜಾರು,
3. ಆಳಸಾಗರ ಮೈದಾನ ಮತ್ತು
4. ಸಾಗರ ತಗ್ಗುಗಳು.

**3. ಸಾಗರ ಪ್ರವಾಹಗಳಿಗೂ ಮತ್ತು ಉಬ್ಬರವಿಳಿತಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿರಿ.**

| ಸಾಗರ ಪ್ರವಾಹಗಳು | ಉಬ್ಬರ ವಿಳಿತಗಳು |
|---|---|
| 1) ನಿಶ್ಚಿತ ದಿಕ್ಕಿನಲ್ಲಿ ನಿರಂತರವಾಗಿ ಚಲಿಸುವ ಸಾಗರದ ಮೇಲ್ಮೈ ನೀರನ್ನು 'ಸಾಗರ ಪ್ರವಾಹ' ಗಳೆಂದು ಕರೆಯುವರು. | 1) ಸಾಗರದ ನೀರಿನ ಮಟ್ಟವು ನಿಯಮಿತವಾಗಿ ಏರುವುದು ಹಾಗೂ ಇಳಿಯುವುದನ್ನೇ 'ಉಬ್ಬರ ವಿಳಿತ' ವೆಂದು ಕರೆಯುವರು. |
| **2) ಕಾರಣಗಳು:** ಭೂಮಿಯ ದೈನಂದಿನ ಚಲನೆ, ಉಷ್ಣಾಂಶ, ಮಾರುತಗಳು, ಲವಣತೆ, ಭೂಭಾಗಗಳ ಆಕಾರ ಇತ್ಯಾದಿ. | **2) ಕಾರಣಗಳು:** ಚಂದ್ರ ಹಾಗೂ ಸೂರ್ಯರ ಗುರುತ್ವಾಕರ್ಷಣಾ ಶಕ್ತಿ, ಭೂಮಿಯ ದೈನಂದಿನ ಚಲನೆ ಮತ್ತು ಭೂಮಿಯ ಕೇಂದ್ರಾಪಗಮನ ಶಕ್ತಿ. |

**4. ಗರಿಷ್ಠ ಉಬ್ಬರ ಮತ್ತು ಕನಿಷ್ಠ ಉಬ್ಬರಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.**

| ಗರಿಷ್ಠ ಅಥವಾ ಅಧಿಕ ಉಬ್ಬರ | ಕನಿಷ್ಠ ಉಬ್ಬರ |
|---|---|
| 1. ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳು ಒಂದೇ ಸರಳ ರೇಖೆಯಲ್ಲಿರುವ ಅಮಾವಾಸ್ಯೆ ಅಥವಾ ಹುಣ್ಣಿಮೆ ದಿನಗಳಲ್ಲಿ ಉಂಟಾಗುತ್ತದೆ. | 1. ಕನಿಷ್ಠ ಉಬ್ಬರಗಳು ವೃದ್ಧಿಚಂದ್ರ ಮತ್ತು ಅರ್ಧಾಧಿಕ್ಯ ಚಂದ್ರನ ದಿನಗಳಲ್ಲಿ ಕಂಡುಬರುತ್ತವೆ. |
| 2. ಭೂಮಿ, ಚಂದ್ರ ಮತ್ತು ಸೂರ್ಯ ಇವುಗಳು ಒಂದೇ ಸರಳ ರೇಖೆಯಲ್ಲಿರುತ್ತವೆ. | 2. ಕನಿಷ್ಠ ಉಬ್ಬರಗಳ ಸಮಯದಲ್ಲಿ ಭೂಮಿ ಮತ್ತು ಸೂರ್ಯ ಒಂದೇ ಸರಳರೇಖೆಯಲ್ಲಿದ್ದು ಮತ್ತು ಚಂದ್ರನು ಭೂಮಿಗೆ ಸಮಕೋನದಲ್ಲಿರುತ್ತಾನೆ. |
| 3. ಸೂರ್ಯ ಮತ್ತು ಚಂದ್ರ ಇವರೆಡರ ಒಟ್ಟು ಗುರುತ್ವಶಕ್ತಿಯಿಂದ ಗರಿಷ್ಠ ಉಬ್ಬರಗಳು ಹೆಚ್ಚು ಎತ್ತರವಾಗಿರುವಂತೆ ಇಳಿ ಉಬ್ಬರಗಳ ಪ್ರಮಾಣವೂ ಸಹ ಅತಿ ಆಳವಾಗಿರುವುದು. | 3. ಈ ರೀತಿಯ ಉಬ್ಬರಗಳಲ್ಲಿ ಏರುಬ್ಬರ ಅಷ್ಟೊಂದು ಹೆಚ್ಚಾಗುವುದಿಲ್ಲ ಮತ್ತು ಇಳಿಯುಬ್ಬರವೂ ಕಡಿಮೆಯಾಗುವುದಿಲ್ಲ. |

**5. ಸಾಗರಗಳನ್ನು ನಾವು ಹೇಗೆ ಸಂರಕ್ಷಿಸಬೇಕು?**

1. ಕಚ್ಚಾ ತೈಲವನ್ನು ಕೊಳವೆ ಮಾರ್ಗಗಳ ಮೂಲಕ ಸಾಗಿಸುವುದು.
2. ಅಣು ಇಂಧನ ತಾಜ್ಯವಸ್ತುಗಳನ್ನು ಸಮುದ್ರ ಸಾಗರಗಳಿಗೆ ಹಾಕುವುದನ್ನು ನಿಯಂತ್ರಿಸುವುದು.
3. ತೀರವಲಯದಲ್ಲಿರುವ ಪೆಟ್ರೋ–ರಾಸಾಯನಿಕ ಹೊರ ಹಾಕುವ ದುರ್ಗಂಧ ವಸ್ತುಗಳ ನಿಯಂತ್ರಣ.
4. ಯಾವುದೇ ರೀತಿಯ ತ್ಯಾಜ್ಯ ವಸ್ತುಗಳನ್ನು ಬಂದರು ಹಾಗೂ ರೇವುಪಟ್ಟಣಗಳ ಸಮೀಪದಲ್ಲಿ ಎಸೆಯುವುದನ್ನು ನಿಯಂತ್ರಿಸುವುದು
5. ತೀರಗಳಲ್ಲಿ ಅದಿರುಗಳ ಸಂಗ್ರಹಣೆ ಹಾಗೂ ಗಣಿಗಾರಿಕೆ ಕಾರ್ಯ ನಿಯಂತ್ರಿಸುವುದು.
6. ಕರಾವಳಿಯ ಮರಳು ದಂಡೆಗಳನ್ನು (ಬೀಚ್) ಶೋಷಣೆ ಮತ್ತು ವಿನಾಶಗಳ ನಿಯಂತ್ರಣ.

**6. ಉಬ್ಬರವಿಳಿತಗಳ ಉಪಯೋಗಗಳು ಯಾವುವು?**

ಉಪಯೋಗಗಳು: ಉಬ್ಬರವಿಳಿತಗಳು ಮನುಷ್ಯನಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉಪಯುಕ್ತವಾಗಿವೆ. ಅವುಗಳೆಂದರೆ :

1. ದೊಡ್ಡ ನೌಕಾಯಾನಕ್ಕೆ ಉಪಯುಕ್ತವಾಗಿದೆ,
2. ಬಂದರು ಮತ್ತು ಹಡಗು ನಿಲ್ದಾಣಗಳನ್ನು ನಿರ್ಮಿಸಲು ಸಹಕಾರಿಯಾಗುತ್ತವೆ,
3. ಉಬ್ಬರವಿಳಿತಗಳಿಂದ ಬರುವ ನೀರು ಬಂದರುಗಳ ತೀರವನ್ನು ನಿಯಮಿತವಾಗಿ ಸ್ವಚ್ಛಗೊಳಿಸುತ್ತವೆ,
4. ಉಪ್ಪನ್ನು ಉತ್ಪಾದಿಸಲು ಸಹಕಾರಿಯಾಗಿದೆ,
5. ಮೀನುಗಾರಿಕೆಗೆ ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಉಪಯುಕ್ತ.

**III. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| 1. ಫ್ಯಾದಮ್ | ಅ) ಆಳಸಾಗರ ಮೈದಾನ |
| 2. ಓಯೋಶಿವೊ | ಆ) ಅ.ಸಂ.ಸಂಸ್ಥಾನದ ಪೂರ್ವಕರಾವಳಿ |
| 3. ಗಲ್ಫ್ ಸ್ಟ್ರೀಂ | ಇ) ಶೀತ ಸಾಗರ ಪ್ರವಾಹ |
| 4. ಸಮುದ್ರ ಪರ್ವತಗಳು | ಈ) ಹಿಂದೂ ಮಹಾಸಾಗರ ಪ್ರವಾಹ |
| 5. ಅಗುಲ್ಹಾಸ್ ಪ್ರವಾಹ | ಉ) ಸಾಗರದ ಆಳದ ಅಳತೆ ಮಾನ |

**ಉತ್ತರಗಳು:– 1–ಉ, 2–ಇ, 3–ಆ, 4–ಅ, 5–ಈ**

**IV. ಕೆಳಗಿನವುಗಳನ್ನು ಅರ್ಥೈಸಿ.**

**1. ಖಂಡಾವರಣ ಇಳಿಜಾರು–** ಇದು ಸಾಗರತಳದ ಎರಡನೇ ಭಾಗವಾಗಿದ್ದು, ಕಡಿದಾದ ಇಳಿಜಾರಿನಿಂದ ಕೂಡಿದೆ.

**2. ಲವಣತೆ–** ಸಾಗರ ಅಥವಾ ಸಮುದ್ರದ ನೀರಿನಲ್ಲಿ ಕರಗಿರುವ ಉಪ್ಪಿನಂಶಗಳ ಪ್ರಮಾಣಗಳನ್ನು 'ಲವಣತೆ' ಎನ್ನುವರು.

**3. ಉಷ್ಣ ಮತ್ತು ಶೀತ ಸಾಗರ ಪ್ರವಾಹಗಳು–**

**ಉಷ್ಣ ಸಾಗರ ಪ್ರವಾಹಗಳು:** ಇವುಗಳು ಸಮಭಾಜಕವೃತ್ತ ಪ್ರದೇಶಗಳಲ್ಲಿ ಪ್ರಾರಂಭವಾಗಿ ಉಪ ಧ್ರುವೀಯ ಪ್ರದೇಶಗಳ ಕಡೆಗೆ ಹರಿಯುತ್ತವೆ.

**ಶೀತಸಾಗರ ಪ್ರವಾಹಗಳು:** ಇವುಗಳು ಧ್ರುವಪ್ರದೇಶದಲ್ಲಿ ಪ್ರಾರಂಭವಾಗಿ ಸಮಭಾಜಕವೃತ್ತದ ಕಡೆಗೆ ಹರಿಯುತ್ತವೆ.

**4. ಅಧಿಕ ಭರತ ಮತ್ತು ಕನಿಷ್ಠ ಭರತ–**

**ಏರುಬ್ಬರ/ ಅಧಿಕ ಭರತ:** ಸಮುದ್ರ ಅಥವಾ ಸಾಗರದ ನೀರು ಒಮ್ಮೆ ಏರುವುದರಿಂದ ಉಂಟಾಗುತ್ತದೆ. ಇದನ್ನು ಏರುಬ್ಬರ ಅಥವಾ ಪ್ರವಾಹದ ಉಬ್ಬರವೆನ್ನುವರು.

**ಇಳಿಉಬ್ಬರ (ಕನಿಷ್ಠ ಭರತ) :** ಒಮ್ಮೆ ಏರುಬ್ಬರದ ಪ್ರಮಾಣದಷ್ಟೇ ನೀರಿನ ಮಟ್ಟ ಕೆಳಗೆ ಇಳಿಯುವುದು, ಇದನ್ನೇ ಇಳಿಉಬ್ಬರ ಎಂದು ಕರೆಯುವರು.

**5. ಬೆಂಗ್ವುಲಾ ಪ್ರವಾಹ–** ಬೆಂಗ್ವುಲಾ ಪ್ರವಾಹವು ಒಂದು **ದಕ್ಷಿಣ ಅಟ್ಲಾಂಟಿಕ್ ಸಾಗರ ಪ್ರವಾಹಗಳ, ಶೀತಸಾಗರ ಪ್ರವಾಹ** ವಾಗಿದೆ.

**6. ಉಬ್ಬರವಿಳಿತಗಳು–** ಚಂದ್ರ ಹಾಗೂ ಸೂರ್ಯರ ಗುರುತ್ವಾಕರ್ಷಣಾ ಶಕ್ತಿ, ಭೂಮಿಯ ದೈನಂದಿನ ಚಲನೆ ಮತ್ತು ಭೂಮಿಯ ಕೇಂದ್ರಾಪಗಮನ ಶಕ್ತಿಯಿಂದಾಗಿ ಸಮುದ್ರ ಅಥವಾ ಸಾಗರದ ನೀರಿನ ಮಟ್ಟವು ನಿಯಮಿತವಾಗಿ ಏರುವುದು ಹಾಗೂ ಇಳಿಯುವುದನ್ನೇ 'ಉಬ್ಬರ ವಿಳಿತ' ವೆಂದು ಕರೆಯುವರು.

## ಅಧ್ಯಾಯ –5
## ಜೀವಗೋಳ.

**I. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಜೀವಗೋಳವೆಂದರೇನು?**

ಭೂಮಿಯಲ್ಲಿ ಮಾತ್ರ ಕಂಡುಬರುವ ವಿವಿಧ ಬಗೆಯ ಜೀವಿಗಳನ್ನು ಒಳಗೊಂಡಿರುವ ವ್ಯವಸ್ಥೆಯೆ ಜೀವಿಗೋಳ.

**2. 'ಜೀವಿ ಪರಿಸರ ಶಾಸ್ತ್ರ' ವನ್ನು ವ್ಯಾಖ್ಯಾನಿಸಿ.**

ಜೀವಿಗಳು ಮತ್ತು ಅವುಗಳ ಭೌತಿಕ, ರಾಸಾಯನಿಕ ಮತ್ತು ಜೈವಿಕ ಪರಿಸರಗಳ ನಡುವಿನ ಸಂಬಂಧವನ್ನು ವಿವರಿಸುವ ವಿಜ್ಞಾನವೇ ಜೀವಪರಿಸರ ಶಾಸ್ತ್ರ.

**3. ಪರಿಸರ ಮಾಲಿನ್ಯದ ವಿಧಗಳನ್ನು ಹೆಸರಿಸಿ.**

**ಮಾಲಿನ್ಯದ ವಿಧಗಳು :** ವಾಯುಮಾಲಿನ್ಯ, ಜಲಮಾಲಿನ್ಯ, ಮಣ್ಣಿನ ಮಾಲಿನ್ಯ ಮತ್ತು ಶಬ್ದಮಾಲಿನ್ಯ.

**4. ಜಲಮಾಲಿನ್ಯವನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳಾವುವು?**

ಜಲಮಾಲಿನ್ಯ ನಿಯಂತ್ರಣ ಕ್ರಮಗಳೆಂದರೆ–

- ಕೈಗಾರಿಕಾ ತ್ಯಾಜ್ಯವಸ್ತುಗಳನ್ನು ಸಂಸ್ಕರಿಸುವುದು,
- ಕುಡಿಯುವ ನೀರಿನ ಮೂಲಗಳನ್ನು ಸ್ವಚ್ಛಗೊಳಿಸುವುದು,
- ಚರಂಡಿ ನೀರನ್ನು ಸಂಸ್ಕರಿಸುವುದು,
- ಕಸದ ರಾಶಿಗಳನ್ನು ಜಲರಾಶಿಗಳಲ್ಲಿ ಹಾಕುವುದನ್ನು ಜನರು ನಿಲ್ಲಿಸಬೇಕು.

**5. ಜೀವಿ ವೈವಿಧ್ಯತೆ ಎಂದರೇನು?**

ಒಂದು ಭೂ ಭಾಗದಲ್ಲಿ ಕಂಡುಬರುವ ಎಲ್ಲಾ ಬಗೆಯ ಸಸ್ಯಗಳು ಹಾಗೂ ಪ್ರಾಣಿ ಪ್ರಭೇದಗಳನ್ನು ಅಲ್ಲಿಯ 'ಜೀವ ವೈವಿಧ್ಯತೆ' ಯೆಂದು ಕರೆಯುವರು.

**6. ಪರಿಸರ ಎಂದರೇನು? ಪರಿಸರದ ವಿಧಗಳು ಯಾವುವು?**

ಎಲ್ಲಾ ಜೀವಿಗಳು, ಜೈವಿಕ ವಸ್ತುಗಳು ವಾಸಿಸುವ ಸುತ್ತಲಿನ ಸನ್ನಿವೇಶವನ್ನು ಪರಿಸರ ಎನ್ನುವರು.

ಪರಿಸರದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ

1. ಪ್ರಾಕೃತಿಕ ಅಥವಾ ಭೌಗೋಳಿಕ ಪರಿಸರ ಮತ್ತು
2. ಸಾಂಸ್ಕೃತಿಕ ಅಥವಾ ಮಾನವ ನಿರ್ಮಿತ ಪರಿಸರ.

**7. ಮಾಲಿನ್ಯಕಾರಕಗಳು ಯಾವುವು?**

ಮಾಲಿನ್ಯವನ್ನುಂಟು ಮಾಡುವ ವಸ್ತುಗಳಿಗೆ ಮಾಲಿನ್ಯಕಾರಕಗಳು ಎನ್ನುವರು. ಅವುಗಳಲ್ಲಿನ ವಿಧಗಳು–

1. ಸ್ವಾಭಾವಿಕ ಮತ್ತು
2. ಮಾನವ ನಿರ್ಮಿತ ಮಾಲಿನ್ಯಕಾರ.

- ಹೊಗೆ, ವಿಷಾನಿಲ, ದೂಳು, ಚರಂಡಿನೀರು, ಕಸಕಡ್ಡಿಗಳು ಇತ್ಯಾದಿಗಳು ಗೋಚರ ಮಾಲಿನ್ಯಕಾರಕಗಳಾಗಿವೆ.
- ಅಗೋಚರ ಮಾಲಿನ್ಯಕಾರಕಗಳಾವುವೆಂದರೆ ಆಹಾರ, ಮಣ್ಣು ಮತ್ತು ನೀರಿನಲ್ಲಿ ಮಿಶ್ರಣವಾದ ವಿಷಯುಕ್ತ ರಾಸಾಯನಿಕ ವಸ್ತುಗಳು ಮತ್ತು ಬ್ಯಾಕ್ಟೀರಿಯಾಗಳು.

**8. ಮುಖ್ಯವಾದ ವಾಯುಮಾಲಿನ್ಯಕಾರಕಗಳು ಯಾವುವು?**

ಬಹುಮುಖ್ಯವಾದ ವಾಯುಮಾಲಿನ್ಯಕಾರಕಗಳೆಂದರೆ: ಇಂಗಾಲದ ಡೈಆಕ್ಸೈಡ್, ಇಂಗಾಲದ ಮಾನಾಕ್ಸೈಡ್, ಗಂಧಕದ ಡೈಆಕ್ಸೈಡ್, ಸಾರಜನಕದ ಆಕ್ಸೈಡ್‌ಗಳು, ಕ್ಲೋರೊಫ್ಲೋರೋ ಕಾರ್ಬನ್‌ಗಳು (CFC), ಹೈಡ್ರೋಕಾರ್ಬನ್‌ಗಳು.

**9. ಜಲಮಾಲಿನ್ಯದಿಂದಾಗುವ ಪರಿಣಾಮಗಳೇನು?**

ಜಲಮಾಲಿನ್ಯದಿಂದಾಗುವ ಪರಿಣಾಮಗಳೆಂದರೆ –

- ಜಲಮಾಲಿನ್ಯದಿಂದ ಮಲಿನ ನೀರಿನಿಂದ ಹರಡುವ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳಾದ ಕಾಲರಾ, ಟೈಫಾಯಿಡ್, ಕ್ಷಯ, ಕಾಮಾಲೆ, ಆಮಶಂಕೆ, ಅತಿಸಾರ ಇತ್ಯಾದಿಗಳು ಹೆಚ್ಚಾಗುತ್ತವೆ.
- ಜಲಚರಗಳ ಸಾವಿಗೆ ಕಾರಣವಾಗುತ್ತದೆ.
- ಮಲಿನಗೊಂಡ ನೀರನ್ನು ನೀರಾವರಿಗೆ ಬಳಸಿದರೆ ಬೆಳೆಗಳಿಗೆ ಹಾನಿಯಾಗುತ್ತದೆ.

**10. ಜಾಗತಿಕ ತಾಪಮಾನ ಎಂದರೇನು? ಇದರ ಪರಿಣಾಮಗಳಾವುವು?**

ಇತ್ತೀಚಿನ ಕೆಲವು ವರ್ಷಗಳಿಂದ ವಾಯುಮಂಡಲದ ಭೂಮಿಯ ಉಷ್ಣಾಂಶವು ನಿಧಾನವಾಗಿ ಹೆಚ್ಚುತ್ತಿದೆ ಇದನ್ನೇ 'ಜಾಗತಿಕ ತಾಪಮಾನ' ವೆಂದು ಕರೆಯುವರು.

ಪರಿಣಾಮಗಳು–

- ಇದರಿಂದ ವಾಯುಗುಣದ ವಲಯಗಳು ಬದಲಾವಣೆ ಹೊಂದುತ್ತಿವೆ,

- ಹಿಮನದಿಗಳು ಕರಗುತ್ತಿವೆ ಮತ್ತು ಸಮುದ್ರದ ನೀರಿನ ಮಟ್ಟವು ಹೆಚ್ಚುತ್ತಿದೆ.

**II. ಈ ಕೆಳಗಿನವುಗಳನ್ನು ಅರ್ಥೈಸಿ.**

**1. ಜೀವಗೋಳ–** ಭೂಮಿಯ ಮೇಲಿನ ವಿವಿಧ ಬಗೆಯ ಜೀವಿಗಳನ್ನು ಒಳಗೊಂಡಿರುವ ವ್ಯವಸ್ಥೆಯೆ ಜೀವಿಗೋಳ.

**2. ಪರಿಸರ ಅಸಮತೋಲನ–** ಜೀವಿಗಳು ಮತ್ತು ಪ್ರಾಕೃತಿಕ ಪರಿಸರ ಹಾಗೂ ವಿವಿಧ ಪ್ರಕಾರದ ಪ್ರಾಣಿಗಳ ನಡುವೆ ಕೆಲವು ಅಸಮತೋಲನವಾದ ಸಂಬಂಧ ನೈಸರ್ಗಿಕವಾಗಿ ಕಂಡುಬರುವುದು. ಇದನ್ನೇ ಜೈವಿಕ ಪರಿಸರ ಅಸಮತೋಲನ ಎನ್ನುವರು.

**3. ಜಾಗತಿಕ ತಾಪಮಾನ–** ಇತ್ತೀಚಿನ ಕೆಲವು ವರ್ಷಗಳಿಂದ ಭೂಮಿಯ ವಾಯುಮಂಡಲದ ಉಷ್ಣಾಂಶವು ಹೆಚ್ಚಾಗುತ್ತಿದೆ. ಇದನ್ನೇ 'ಜಾಗತಿಕ ತಾಪಮಾನ' ವೆಂದು ಕರೆಯುವರು.

**4. ಹಸಿರುಮನೆ ಪರಿಣಾಮ–** ಇತ್ತೀಚಿಗೆ ಜೀವಾವಶೇಷ ಇಂಧನಗಳ ಬಳಕೆಯಿಂದ ಹಸಿರುಮನೆ ಅನಿಲಗಳ ಬಿಡುಗಡೆಯೂ ನಿರಂತರವಾಗಿ ಹೆಚ್ಚುತ್ತಿದೆ. ಇಂಗಾಲದ ಡೈ ಆಕ್ಸೈಡ್ ಮತ್ತು ಇತರೆ ಹಸಿರು ಮನೆ ಅನಿಲಗಳು ಭೂಮಿಯಿಂದ ಬಿಡುಗಡೆಯಾಗುವ ಉಷ್ಣಾಂಶವನ್ನು ಹೀರಿ ಸಂಗ್ರಹಿಸುವುದರಿಂದ ವಾಯುಮಂಡಲ ಉಷ್ಣಾಂಶವು ಹೆಚ್ಚುವುದು. ಇದನ್ನೇ 'ಹಸಿರು ಮನೆಯ ಪರಿಣಾಮ' ವೆಂದು ಕರೆಯುವರು.

**5. ಓಜೋನ್ ತೆಳುವಾಗುವಿಕೆ–** ಇತ್ತೀಚಿನ ವರ್ಷಗಳಲ್ಲಿ ಏರ್ಕಂಡಿಷನರ್, ರೆಫ್ರಿಜಿರೇಟರ್, ಸ್ಪ್ರೇಯರ್, ಸುಗಂಧದ್ರವ್ಯಗಳು ಮೊದಲಾದುವುಗಳ ಮಿತಿಮೀರಿದ ಬಳಕೆಯಿಂದ ಕ್ಲೋರೋ ಫ್ಲೋರೋ ಕಾರ್ಬನ್ (C.F.C)ಗಳು ಹೆಚ್ಚಾಗಿ ಬಿಡುಗಡೆಗೊಂಡು ವಾಯುಮಂಡಲದ ಓಜೋನ್ ಪದರವನ್ನು ನಾಶಪಡಿಸುತ್ತಿವೆ. ಈ ರೀತಿ ಓಜೋನ್ ತೆಳುವಾಗುತ್ತಿದೆ.

**6. ಆಮ್ಲಮಳೆ–** ಮಳೆಯ ಹನಿಗಳು ಮಾಲಿನ್ಯಗೊಂಡ ವಾಯುಮಂಡಲ ಮೂಲಕ ಬೀಳುವಾಗ ಅದರಲ್ಲಿ ಸಲ್ಫೂರಿಕ್ ಆಮ್ಲ ಮತ್ತು ಇಂಗಾಲದ ಮಾನಾಕ್ಸೈಡ್ ಮುಂತಾದವು ವಿಲೀನಗೊಂಡು ಬೀಳುವ ಮಳೆಯನ್ನು ಆಮ್ಲ ಮಳೆ ಎನ್ನುವರು.

# ಅರ್ಥಶಾಸ್ತ್ರ

## ಅಧ್ಯಾಯ –3

## ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳು.

**I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

1. ತಲಾ ಆದಾಯ = ರಾಷ್ಟ್ರೀಯ ಆದಾಯವನ್ನು ________ ದಿಂದ ಭಾಗಿಸುವುದು.
2. ಭಾರತದಲ್ಲಿ ರಾಷ್ಟ್ರೀಯ ಆದಾಯದ ಅಂದಾಜನ್ನು ಮಾಡುವ ಜವಾಬ್ದಾರಿ ಹೊಂದಿರುವ ಸಂಸ್ಥೆಯು ________
3. ಇಂದು ಭಾರತದ ರಾಷ್ಟ್ರೀಯ ಆದಾಯದಲ್ಲಿ ಅತ್ಯಂತ ಹೆಚ್ಚು ಪಾಲು ________ ವಲಯವು ಹೊಂದಿದೆ.
4. ಸಣ್ಣ ಕೈಗಾರಿಕೆಗಳು ________ ಗಳಲ್ಲಿ ವ್ಯಾಖ್ಯಾನಿಸಲಾಗುತ್ತದೆ.
5. ಭಾರತದ ಕೃಷಿಯನ್ನು ________ ಜೊತೆಗೆ ಜೂಜಾಟವಾಡುತ್ತದೆ ಎಂದು ಹೇಳುತ್ತಾರೆ.
6. ಭಾರತದಲ್ಲಿ ನೀರಾವರಿ ಕೃಷಿ ಭೂಮಿಯ ಪ್ರಮಾಣವು ಸಾಗುವಳಿ ಕ್ಷೇತ್ರದ ________ ಶೇಕಡಾ ಇದೆ.
7. ಭಾರತದಲ್ಲಿ, ________ ರಾಷ್ಟ್ರೀಯ ಆದಾಯದ ಮೊತ್ತವನ್ನು ಅಂದಾಜಿಸಿ ಪ್ರಕಟಿಸುತ್ತದೆ.
8. ಭಾರತದ ರಾಷ್ಟ್ರೀಯ ಆದಾಯಕ್ಕೆ ಶೇ 59 ರಷ್ಟು ಕೊಡುಗೆಯನ್ನು ________ ವಲಯ ನೀಡುತ್ತಿದೆ.
9. 2011–12ರ ಕೃಷಿ ಗಣತಿಯ ಪ್ರಕಾರ, 1ರಿಂದ 2 ಹೆಕ್ಟೇರ್ ಹಿಡುವಳಿಗಳು ಒಟ್ಟು ಹಿಡುವಳಿಗಳ ಶೇಕಡಾ ________ ರಷ್ಟಿವೆ.
10. 'ಭಾರತದ ಕೃಷಿಯು ________ ಜೊತೆ ಜೂಜಾಟ ಆಡುತ್ತದೆ' ಎಂದು ಹೇಳಲಾಗುತ್ತದೆ.

**ಉತ್ತರಗಳು:– 1) ಜನಸಂಖ್ಯೆ 2) ಕೇಂದ್ರೀಯ ಅಂಕಿಸಂಖ್ಯಾ ಸಂಸ್ಥೆಯು (CSO) 3) ತೃತೀಯ ವಲಯ/ ಸೇವಾ ವಲಯ 4) ಯಂತ್ರೋಪಕರಣದಲ್ಲಿ ಮಾಡಿದ ಹೂಡಿಕೆಯ ಪ್ರಮಾಣ 5) ಮಾನ್ಸೂನ್ 6) 30% 7) ಕೇಂದ್ರೀಯ ಅಂಕಿಸಂಖ್ಯಾ ಸಂಸ್ಥೆಯು (CSO) 8) ಸೇವಾ/ ತೃತೀಯ 9) 85 10) ಜೂಜಾಟ.**

**II. ಗುಂಪುಗಳಲ್ಲಿ ಚರ್ಚಿಸಿ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**

**1. ರಾಷ್ಟ್ರೀಯ ಆದಾಯವನ್ನು ವ್ಯಾಖ್ಯಾನಿಸಿರಿ.**

ರಾಷ್ಟ್ರೀಯ ಆದಾಯವು ಒಂದು ರಾಷ್ಟ್ರದಲ್ಲಿ ಉತ್ಪಾದಿಸಿದ ಸರಕುಗಳ ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಸೂಚಿಸುತ್ತದೆ.

ಸೈಮನ ಕುಜನೆಟ್ಸ ವ್ಯಾಖ್ಯಾನಿಸುವಂತೆ, ರಾಷ್ಟ್ರೀಯ ಆದಾಯವು, "ಒಂದು ವರ್ಷದ ಅವಧಿಯಲ್ಲಿ ರಾಷ್ಟ್ರದ ಉತ್ಪಾದನಾ ವ್ಯವಸ್ಥೆಯಿಂದ ಅನುಭೋಗಿಗಳ ಕೈಗಳಿಗೆ ಪ್ರವಹಿಸುವ ಅಂತಿಮ ಸರಕುಗಳ ಮತ್ತು ಸೇವೆಗಳ ನಿವ್ವಳ ಉತ್ಪನ್ನವಾಗಿದೆ".

ಅಂತಿಮವಾಗಿ ಅನುಭೋಗಿಗಳು ಆದಾಯವನ್ನು ಪಡೆಯುವವರಾಗಿರುವುದರಿಂದ, ಒಂದು ವರ್ಷದಲ್ಲಿ ಆರ್ಥಿಕ ಚಟುವಟಿಕೆಗಳಿಂದ ಪಡೆದ ಒಟ್ಟು ಆದಾಯವನ್ನು ರಾಷ್ಟ್ರೀಯ ಆದಾಯ ಎನ್ನುತ್ತಾರೆ.

**2. 2015 ರಲ್ಲಿ 5 ಸದಸ್ಯರಿರುವ ಕುಟುಂಬದ ಆದಾಯವು ರೂ. 567890 ಇದ್ದರೆ, ಕುಟುಂಬದ ಸದಸ್ಯರ ತಲಾ ಆದಾಯವನ್ನು ಲೆಕ್ಕ ಮಾಡಿರಿ.**

2015ರಲ್ಲಿನ 5 ಸದಸ್ಯರಿರುವ ಕುಟುಂಬದ ತಲಾ ಆದಾಯವನ್ನು ಕಂಡುಹಿಡಿಯುವಾಗ, ಒಟ್ಟು ಕುಟುಂಬದ ಆದಾಯವನ್ನು ಆ ಕುಟುಂಬದ ಆ ವರ್ಷದ ಒಟ್ಟು ಜನಸಂಖ್ಯೆಯಿಂದ ಭಾಗಿಸಲಾಗುತ್ತದೆ.

**2015 ತಲಾ ಆದಾಯ= (2015ರ ಕುಟುಂಬದ ಆದಾಯ) ÷2015ರ ಕುಟುಂಬದ ಜನಸಂಖ್ಯೆ**

**= 567,890 ÷ 5**

**= 113,578**

**3. ಭಾರತದಂತಹ ರಾಷ್ಟ್ರದಲ್ಲಿ ಸಣ್ಣ ಕೈಗಾರಿಕೆಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ಹೇಳಿರಿ.**

- ಸಣ್ಣ ಕೈಗಾರಿಕೆಗಳು ಉದ್ಯೋಗ ಸೃಷ್ಟಿಗೆ ಸಹಾಯಕವಾಗಿವೆ.

- ಉಳಿತಾಯ ಪ್ರೋತ್ಸಾಹದ ಮೂಲಕ ಸಂಪನ್ಮೂಲಗಳ ಮತ್ತು ಉದ್ಯಮ ಕೌಶಲ್ಯದ ಕ್ರೋಡೀಕರಣ ಮಾಡಿ ಗ್ರಾಮೀಣ ಪ್ರದೇಶದ ಸುಪ್ತ ಕೌಶಲ್ಯ ಹೊರತರಲು ಸಹಾಯಕ.
- ಆದಾಯದ ಸಮ ಹಂಚಿಕೆ– ಸಂಪತ್ತು, ಆದಾಯ ಮತ್ತು ರಾಜಕೀಯ ಶಕ್ತಿಯ ಹೆಚ್ಚು ಸಮಾನ ಮರುಹಂಚಿಕೆಗೆ ಕಾರಣವಾಗುತ್ತವೆ.
- ಕೈಗಾರಿಕೆಗಳ ಪ್ರಾದೇಶಿಕ ವಿಸ್ತರಣೆ– ಕೈಗಾರಿಕೆಗಳ ವಿಕೇಂದ್ರೀಕರಣಕ್ಕೆ ಸಹಾಯಕ.
- ತಂತ್ರಜ್ಞಾನದ ಅಭಿವೃದ್ಧಿ– ಸಣ್ಣ ಉದ್ದಿಮೆದಾರರು ಹೊಸ ಆವಿಷ್ಕಾರಗಳಿಗೂ ಸಹಾಯಕ.

**4. ಭಾರತದಲ್ಲಿ ಕೃಷಿ ಹಿಡುವಳಿಗಳ ಗಾತ್ರವು ಇಳಿಕೆಯಾಗಲು ಕಾರಣಗಳು ಯಾವವು?**

ಹಿಡುವಳಿ ಎಂದರೆ ಒಂದು ಕುಟುಂಬವು ಸಾಗುವಳಿ ಮಾಡುತ್ತಿರುವ ಭೂಮಿಯ ಗಾತ್ರವಾಗಿದೆ.

- ಭಾರತದಲ್ಲಿ ಜನಸಂಖ್ಯೆಯ ಹೆಚ್ಚಳ.
- ಕೃಷಿ ಭೂಮಿಯು ಪ್ರಮಾಣ ಸ್ಥಿರವಾಗಿದೆ.
- ಭಾರತದಲ್ಲಿ ಕೃಷಿಯ ಮೇಲೆ ಅವಲಂಬಿತ ಜನಸಂಖ್ಯೆ ಏರಿಕೆಯಾಗುತ್ತಿದೆ.
- ಆದ್ದರಿಂದ ಹಿಡುವಳಿಗಳು ಸಣ್ಣ ತುಂಡುಗಳಾಗಿ ವಿಭಜಿಸಲ್ಪಟ್ಟಿವೆ.

**5. ಭಾರತದ ಕೃಷಿಯ ಬಿಕ್ಕಟ್ಟಿಗೆ ಕಾರಣಗಳು ಪರಿಶೀಲಿಸಿ.**

1. ಭಾರತದಲ್ಲಿ ಜನಸಂಖ್ಯೆ ಹೆಚ್ಚಾಗಿರುವ ಕಾರಣ ಸಣ್ಣ ಗಾತ್ರದ ಸಾಗುವಳಿ ಹಿಡುವಳಿಗಳು ಇವೆ. ಇದರಲ್ಲಿ ಭೂ ಅಭಿವೃದ್ಧಿಯ ಸಾಧ್ಯತೆ ಕಡಿಮೆ.
2. ತುಂಡು ಭೂಮಿಯಲ್ಲಿ ಅಧಿಕ ಜನಸಂಖ್ಯೆಯ ಒತ್ತಡ.
3. ಭಾರತದ ಕೃಷಿಯು ಮಳೆಯನ್ನು ಅವಲಂಬಿಸಿದ್ದು, ಅದು ಅನಿಶ್ಚಿತ, ಅನಿಯಮಿತ ಮತ್ತು ಅಸಮರ್ಪಕ ಇದೆ ಮತ್ತು ಮೇಲಿಂದ ಮೇಲೆ ಬಂದೆರಗುವ ಬರಗಾಲ.
4. ಹಸಿರು ಕ್ರಾಂತಿಯ ಭಾಗಶಃ ಪ್ರಭಾವ : ಹಸಿರು ಕ್ರಾಂತಿಯು ನೀರಾವರಿ ಸೌಲಭ್ಯ ಹೊಂದಿರುವ ಪ್ರದೇಶಗಳಲ್ಲಿ, ಅಕ್ಕಿ ಮತ್ತು ಗೋಧಿ ಬೆಳೆಗಾರರಿಗೆ ಮಾತ್ರ ಪ್ರಯೋಜನ ಒದಗಿಸಿ, ಶುಷ್ಕ ಪ್ರದೇಶಗಳ ಇದು ಕೃಷಿಗೆ ಅದು ಅಷ್ಟೇನೂ ಅನುಕೂಲ ಒದಗಿಸಿಲ್ಲ.
5. ನೀರಾವರಿ ಮತ್ತು ಇತರ ಮೂಲಸೌಕರ್ಯಗಳಲ್ಲಿ ಸಾರ್ವಜನಿಕ ಹೂಡಿಕೆಗಳ ಕುಗ್ಗುವಿಕೆ.
6. ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳಂತಹ ಔಪಚಾರಿಕ ಮೂಲಗಳಿಂದ ಕೃಷಿ ವಲಯಕ್ಕೆ ಸಾಲ ಪೂರೈಕೆಯು ಅಸಮರ್ಪಕವಾಗಿದೆ.
7. ಕೃಷಿ ಸರಕುಗಳಿಗೆ ಉತ್ತಮ ಬೆಲೆ ದೊರೆಯುವುದಿಲ್ಲ, ಬೆಲೆ ಪಾವತಿಯು ಸರಿಯಾದ ಸಮಯದಲ್ಲಿ ಆಗುವುದಿಲ್ಲ,

**6. ಭಾರತದಲ್ಲಿ ಕೃಷಿ ಬಿಕ್ಕಟ್ಟಿಗೆ ಪರಿಹಾರಗಳನ್ನು ಚರ್ಚಿಸಿರಿ.**

1. ಕೃಷಿ ಸಂಬಂಧಿ ಕಾರ್ಯಗಳಲ್ಲಿ ಸರ್ಕಾರದ ಹೂಡಿಕೆಯನ್ನು ಹೆಚ್ಚಿಸುವುದು.
2. ಸಾಲ ಸೌಲಭ್ಯಗಳ ವಿಸ್ತರಣೆ ಮಾಡುವುದು.
3. ಕೃಷಿ ಉತ್ಪನ್ನ ಮಾರುಕಟ್ಟೆ ಸುಧಾರಣೆಗಳನ್ನು ತರುವುದು.
4. ರೈತರಿಗೆ ಬೆಳೆ ವಿಮೆ ಸೌಲಭ್ಯ ಒದಗಿಸುವುದು.
5. ಕೃಷಿಕರಿಗೆ ಸಲಹೆ ಮತ್ತು ನೈತಿಕ ಬೆಂಬಲ ನೀಡುವುದು.
6. ಖಾಸಗಿ ಲೇವಾದೇವಿಗಾರರ ನಿಯಂತ್ರಿಸುವುದು.

**7. ಭಾರತದಲ್ಲಿ ಕೃಷಿ ಹಿಡುವಳಿಗಳ ಗಾತ್ರವು ಇಳಿಕೆಯ ಪರಿಣಾಮಗಳು ಯಾವವು?**

- ಭಾರತದಲ್ಲಿ ಕೃಷಿಯ ಮೇಲೆ ಅವಲಂಬಿತ ಜನಸಂಖ್ಯೆ ಏರಿಕೆಯಾಗುತ್ತಿದೆ.
- ಆದ್ದರಿಂದ ಹಿಡುವಳಿಗಳು ಸಣ್ಣ ತುಂಡುಗಳಾಗಿ ವಿಭಜಿಸಲ್ಪಟ್ಟಿವೆ.
- ಇಷ್ಟು ಸಣ್ಣ ಗಾತ್ರದ ಭೂಮಿಯಲ್ಲಿ ಯಾವುದೇ ತೆರನಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆಗುವುದಿಲ್ಲ.
- ಆಧುನಿಕ ಉತ್ಪಾದನಾ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.
- ತತ್ಪರಿಣಾಮವಾಗಿ ಉತ್ಪಾದಕತೆ ಕಡಿಮೆ ಇದ್ದು ಕೃಷಿಕರು ಬಡವರಾಗುತ್ತಿದ್ದಾರೆ.

7. ತೃತೀಯ ವಲಯವೇ ಭಾರತದ ರಾಷ್ಟ್ರೀಯ ಆದಾಯಕ್ಕೆ ಅತ್ಯಧಿಕ ಕೊಡುಗೆ ನೀಡಿದೆ. ಸಮರ್ಥಿಸಿ.

- ಭಾರತದ ರಾಷ್ಟ್ರೀಯ ಆದಾಯಕ್ಕೆ ಅತ್ಯಧಿಕ ಕೊಡುಗೆಯನ್ನು ಸೇವಾ ವಲಯ (ಶೇ.59) ನೀಡುತ್ತದೆ.
- ಶೇ.28ರಷ್ಟು ಉದ್ಯೋಗ ನೀಡಿದೆ.
- ಈ ವಲಯವು ವಿದೇಶಿ ಬಂಡವಾಳವನ್ನು ಆಕರ್ಷಿಸುತ್ತಿದೆ.
- ರಫ್ತು ಗಳಿಕೆಯಲ್ಲೂ ಮುಂಚೂಣಿಯಲ್ಲಿದೆ. ಭಾರತವು ಸುಮಾರು 5 ಲಕ್ಷ ಕೋಟಿ ರೂಪಾಯಿಗಳಷ್ಟು ರಫ್ತು ಆದಾಯ ಗಳಿಸಿದೆ.

8. ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಕುರಿತು ಚರ್ಚಿಸಿ.

1. ಕಚ್ಚಾ ಸರಕುಗಳ ಅಲಭ್ಯತೆ :
2. ಹಣಕಾಸಿನ ಸಮಸ್ಯೆ :
3. ಕಡಿಮೆ ತಾಂತ್ರಿಕ ಕೌಶಲ್ಯ :
4. ಮಾರುಕಟ್ಟೆ ಸಮಸ್ಯೆಗಳು :
5. ಬೃಹತ್ ಕೈಗಾರಿಕೆಗಳಿಂದ ಪೈಪೋಟಿ:

## ಅಧ್ಯಾಯ – 4

# ಸರ್ಕಾರ ಮತ್ತು ಅರ್ಥವ್ಯವಸ್ಥೆ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿಮಾಡಿರಿ.**

1. ಯೋಜನಾ ಆಯೋಗವನ್ನು ________ ವರ್ಷದಲ್ಲಿ ಸ್ಥಾಪಿಸಲಾಯಿತು.
2. ಹನ್ನೆರಡನೇ ಪಂಚ ವಾರ್ಷಿಕ ಯೋಜನೆಯ ಕಾಲಾವಧಿಯು ________
3. ಒಟ್ಟು ರಾಷ್ಟ್ರೀಯ ಆದಾಯವನ್ನು ಪರಿಗಣಿಸಿದಾಗ ವಿಶ್ವದ ಮೊದಲ ________ ರಾಷ್ಟ್ರಗಳಲ್ಲಿ ಒಂದಾಗಿದೆ.
4. ಭಾರತದಲ್ಲಿ ಪ್ರಸ್ತುತ ಬಡತನದ ಪ್ರಮಾಣವು ________ ರಷ್ಟಿದೆ.
5. ಬಹಳಷ್ಟು ವರ್ಷಗಳವರೆಗೆ ಭಾರತದ ಆರ್ಥಿಕ ನೀತಿಯು ________ ಆಗಿತ್ತು.

6. ________ ರಲ್ಲಿ ಯೋಜನಾ ಆಯೋಗದ ಜಾಗದಲ್ಲಿ ನೀತಿ ರಾಷ್ಟ್ರೀಯ ಆಯೋಗವನ್ನು ಸ್ಥಾಪಿಸಲಾಯಿತು.
7. 2014–15ರ ವೇಳೆಗೆ ನಮ್ಮ ದೇಶದ ತಲಾ ಆದಾಯವು ________ ರೂಪಾಯಿಗಳಿಗೆ ಏರಿಕೆಯಾಗಿದೆ.
8. ಹೊಸ ಆರ್ಥಿಕ ನೀತಿಗಳು ಭಾರತವನ್ನು ________ ಆಧಾರಿತ ಅರ್ಥವ್ಯವಸ್ಥೆಯತ್ತ ಕೊಂಡೊಯ್ಯುತ್ತಿವೆ.
9. ________ ಯೋಜನೆಯು ರಸ್ತೆ ಸಂಪರ್ಕವಿಲ್ಲದ ಹಳ್ಳಿಗಳಿಗೆ ಸರ್ವಋತು ರಸ್ತೆ ನಿರ್ಮಿಸಿ ಸಂಪರ್ಕ ಕಲ್ಪಿಸಿತು.
10. ಈಗಿನ ________ ಯೋಜನೆಯು ಮಹಾತ್ಮಾ ಗಾಂಧೀಜಿಯವರ ಕನಸಾದ ಸ್ವಚ್ಛ ಭಾರತ ನಿರ್ಮಾಣವಾಗಿತ್ತು.

**ಉತ್ತರಗಳು:– 1) 1950 2) 2012–17 3) ಭವಿಷ್ಯದ ಆರ್ಥಿಕ ಸೂಪರ್ ಪವರ್ 4) 22% 5) ಜನರ ಯೋಗಕ್ಷೇಮ 6) 2015, 7) 74193, 8) ಉದಾರಿ ಅಥವಾ ಮಾರುಕಟ್ಟೆ, 9) ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ, 10) ಸ್ವಚ್ಛ ಭಾರತ ಅಭಿಯಾನ.**

## II. ಈ ಕೆಳಗಿನ ಪ್ರಶ್ನೆಗಳನ್ನು ಎರಡು ವಾಕ್ಯಗಳಲ್ಲಿ ಉತ್ತರಿಸಿ.

**1. ಯೋಜನೆಯ ವ್ಯಾಖ್ಯೆ ನೀಡಿ.**

ಸರ್ಕಾರ ಹಿತಾಸಕ್ತಿ ವೃದ್ಧಿಗೋಸ್ಕರ ಲಭ್ಯವಿರುವ ಸಂಪನ್ಮೂಲಗಳ ವ್ಯವಸ್ಥಿತ ವಿನಿಯೋಜನೆ ಮತ್ತು ಇತರ ಉದ್ದೇಶಪೂರ್ವಕ ಕ್ರಮಗಳನ್ನು ಅಳವಡಿಸಿಕೊಂಡು ಪೂರ್ವ ನಿಗದಿತ ಗುರಿಗಳ ಸಾಧನೆಯೆಡೆಗೆ ಸಾಗುವುದೇ ಯೋಜನೆ.

**2. ಭಾರತೀಯ ಯೋಜನೆಗಳ ಪ್ರಮುಖ ಉದ್ದೇಶಗಳನ್ನು ಪಟ್ಟಿ ಮಾಡಿರಿ.**

1. ದೇಶದ ಆರ್ಥಿಕ ಬೆಳವಣಿಗೆಯನ್ನು ವೃದ್ಧಿಸುವುದು.
2. ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು.
3. ದೇಶದ ಸ್ವಾವಲಂಬನೆ ಸಾಧಿಸುವುದು.
4. ಆದಾಯ ಹಾಗೂ ಸಂಪತ್ತಿನ ಅಸಮಾನತೆ ಕಡಿಮೆ ಮಾಡುವುದು.
5. ಸಾರಿಗೆ, ಸಂಪರ್ಕ, ಶಕ್ತಿ, ನೀರಾವರಿ, ಶಾಲೆಗಳು, ಆಸ್ಪತ್ರೆಗಳು, ಸಂಶೋಧನೆ ಹಾಗೂ ವಿಸ್ತರಣೆಗಳಂತಹ ಮೂಲ ಸೌಕರ್ಯಗಳ ವೃದ್ಧಿ.
6. ಹಣಕಾಸು ಸಂಸ್ಥೆಗಳ ಅಭಿವೃದ್ಧಿ.
7. ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ.
8. ಖಾಸಗಿ ವಲಯದ ಉತ್ತೇಜನ.

**3. ಭಾರತೀಯ ಯೋಜನೆಗಳ ಪ್ರಮುಖ ವಿಫಲತೆಗಳು ಯಾವುವು?**

1. ಉತ್ಪಾದನೆಯ, ಆದಾಯಗಳ ನಿಧಾನ ಗತಿಯ ಬೆಳವಣಿಗೆ.
2. ಬೆಲೆಗಳಲ್ಲಿ ಹೆಚ್ಚಳ.
3. ನಿರುದ್ಯೋಗದಲ್ಲಿ ಹೆಚ್ಚಳ.
4. ಬಡತನ ಹಾಗೂ ಅಸಮಾನತೆಯ ಮುಂದುವರಿಕೆ.
5. ಮೂಲ ಸೌಕರ್ಯಗಳ ಅಸಮರ್ಪಕ ಅಭಿವೃದ್ಧಿ.
6. ಅದಕ್ಷ ಆಡಳಿತ.
7. ನಿರೀಕ್ಷಿತ ಪ್ರಮಾಣದಲ್ಲಿ ರಫ್ತು ಹೆಚ್ಚಳವಾಗದಿರುವುದು.

**4. 1990–91ರಲ್ಲಿನ ಭಾರತದ ಆರ್ಥಿಕ ಸ್ಥಿತಿಯ ವರ್ಣನೆ ಮಾಡಿರಿ.**

1. 1990–91ರ ವೇಳೆಗೆ ಭಾರತವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿಕೊಂಡಿತ್ತು.
2. ವ್ಯಾಪಾರ ಶಿಲ್ಕಿನ ಅಗಾಧ ಕೊರತೆ ಉಂಟಾಗಿತ್ತು.
3. ಅತ್ಯಂತ ಕಡಿಮೆ ಪ್ರಮಾಣದ ವಿದೇಶೀ ವಿನಿಮಯ ಸಂಗ್ರಹ.
4. ಹಣದುಬ್ಬರ ತೀವ್ರವಾಗಿತ್ತು.
5. ಅತಿ ಹೆಚ್ಚು ಪ್ರಮಾಣದಲ್ಲಿದ್ದ ಮುಂಗಡಪತ್ರದ ಕೊರತೆಗಳು ಆರ್ಥಿಕತೆಯನ್ನು ಮತ್ತು ಜನರ ಜೀವನವನ್ನು ಸಂಕಷ್ಟಕ್ಕೆ ಸಿಲುಕಿಸಿದವು.

**5. ಆರ್ಥಿಕ ಉದಾರೀಕರಣ ಕ್ರಮಗಳಡಿಯಲ್ಲಿನ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿರಿ.**

1. ಆರ್ಥಿಕ ಉದಾರೀಕರಣ ಕ್ರಮಗಳಿಂದಾಗಿ ಭಾರತವನ್ನು ಈಗ ಏಷ್ಯಾದ ಪ್ರಮುಖ ಆರ್ಥಿಕತೆಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ.
2. ಭಾರತಕ್ಕೆ ಹರಿದು ಬರುತ್ತಿರುವ ವಿದೇಶಿ ಹೂಡಿಕೆಯಲ್ಲಿ ಅಗಾಧ ಹೆಚ್ಚಳವಾಗಿದೆ.
3. ಹಲವು ಬಹುರಾಷ್ಟ್ರೀಯ ಕಂಪೆನಿಗಳು ಭಾರತದಲ್ಲಿ ತಮ್ಮ ಕಛೇರಿಗಳನ್ನು ತೆರೆದಿವೆ.
4. ಭಾರತದ ತಲಾ ಆದಾಯವು ಹೆಚ್ಚಾಗಿದೆ.
5. ಭಾರತವು ಸೇವೆಗಳ ಮತ್ತು ಮುಖ್ಯವಾಗಿ ಸಾಫ್ಟ್‌ವೇರ್ ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ರಫ್ತುಗಳ ಮುಂಚೂಣಿಯಲ್ಲಿದೆ. ವಿಪ್ರೋ, ಇನ್‌ಫೋಸಿಸ್, ಟಿಸಿಎಸ್, ಎಚ್‌ಸಿಎಲ್, ಟೆಕ್ ಮಹಿಂದ್ರಾ ಮತ್ತು ಇನ್ನೂ ಹಲವಾರು ಕಂಪನಿಗಳು ವಿಶ್ವವಿಖ್ಯಾತಿಯನ್ನು ಹೊಂದಿವೆ.

ಹೀಗೆ ಹೊಸ ಆರ್ಥಿಕ ನೀತಿಗಳು ಭಾರತವನ್ನು ಉದಾರಿ ಅಥವಾ ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯತ್ತ ಕೊಂಡೊಯ್ಯುತ್ತಿವೆ.

**6. ಭಾರತದ ಸ್ವಾತಂತ್ರದ ಸಮಯದಲ್ಲಿ ದೇಶದ ಆರ್ಥಿಕ ಸ್ಥಿತಿ ಹೇಗಿತ್ತು.**

- 1947ರಲ್ಲಿ ದೇಶ ಸ್ವಾತಂತ್ರ್ಯ ಪಡೆದಾಗ ಆರ್ಥಿಕ ಪರಿಸ್ಥಿತಿಯು ತುಂಬಾ ಗಂಭೀರವಾಗಿತ್ತು.
- ತಲಾ ಆದಾಯ ಅಲ್ಪವಾಗಿದ್ದಿತು;
- ಆಹಾರೋತ್ಪಾದನೆಯು ಅಗತ್ಯಕ್ಕಿಂತ ಕಡಿಮೆ ಇದ್ದಿತು;
- ತುಂಬಾ ಕಡಿಮೆ ಸಂಖ್ಯೆಯ ಉದ್ದಿಮೆಗಳಿದ್ದವು;
- ಯಂತ್ರೋಪಕರಣಗಳನ್ನು ನಾವು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದೆವು;
- ಸಾರಿಗೆ, ಶಕ್ತಿ, ಸಂಪರ್ಕ ಸಾಧನಗಳು ಅಸಮರ್ಪಕವಾಗಿದ್ದವು;
- ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳು ಸ್ವಲ್ಪ ಜನರಿಗೆ ಮಾತ್ರ ದಕ್ಕುತ್ತಿದ್ದವು;
- ಎಲ್ಲೆಡೆ ಹಿಂದುಳಿದ ವಾತಾವರಣವೇ ಇದ್ದಿತು.

**7. ಭಾರತೀಯ ಯೋಜನೆಗಳ ಪ್ರಮುಖ ಸಾಧನೆಗಳು ಯಾವುವು?**

1. ರಾಷ್ಟ್ರೀಯ ಮತ್ತು ತಲಾ ಆದಾಯದಲ್ಲಿ ಹೆಚ್ಚಳ.
2. ಕೃಷಿ ಉತ್ಪನ್ನಗಳ ಉತ್ಪಾದನೆಯು ಹಲವು ಪಟ್ಟು ಹೆಚ್ಚಳವಾಗಿದೆ.
3. ಕೈಗಾರಿಕೆಗಳ ಅಭಿವೃದ್ಧಿ.
4. ಆರ್ಥಿಕ ಮೂಲಸೌಕರ್ಯದ ಅಭಿವೃದ್ಧಿ
5. ಸಾಮಾಜಿಕ ಮೂಲಸೌಕರ್ಯದ ಅಭಿವೃದ್ಧಿ.
6. ಮೂಲ ಅನುಭೋಗಿ ಸರಕುಗಳು ಮತ್ತು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಭಾರತವು ಸ್ವಾವಲಂಬನೆ.

7. ಸಾಕಷ್ಟು ಪ್ರಮಾಣದ ಉದ್ಯೋಗಾವಕಾಶ ಸೃಷ್ಟಿಯಾಗಿದೆ.
8. ಬಂಡವಾಳ ಸಂಚಯನ.
9. ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ.
10. ಸಾಮಾಜಿಕ ನ್ಯಾಯ.

**8. ಆರ್ಥಿಕ ಅಭಿವೃದ್ಧಿಗಾಗಿ ಇರುವ ಸರ್ಕಾರದ ಪ್ರಸ್ತುತ ಕಾರ್ಯಕ್ರಮಗಳು ಯಾವುವು?**

ಒಟ್ಟಾರೆ ಅಭಿವೃದ್ಧಿ–
1. ಡಿಜಿಟಲ್ ಇಂಡಿಯಾ.

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ–
1. ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆ.
2. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ.
3. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.
4. ಪ್ರಧಾನ ಮಂತ್ರಿ ಗ್ರಾಮ ಸಡಕ ಯೋಜನೆ.

ಔದ್ಯಮಿಕ ಅಭಿವೃದ್ಧಿ–
1. ಮೇಕ್ ಇನ್ ಇಂಡಿಯಾ :
2. ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಸ್ಟ್ಯಾಂಡಪ್ ಇಂಡಿಯಾ.
3. ಪ್ರಧಾನ ಮಂತ್ರಿ ಮುದ್ರಾ ಯೋಜನೆ.

ಸಾಮಾಜಿಕ ವಲಯ–
1. ಸ್ವಚ್ಛ ಭಾರತ ಅಭಿಯಾನ.
2. ಕೌಶಲ ಭಾರತ (ಸ್ಕಿಲ್ ಇಂಡಿಯಾ).
3. ಪ್ರಧಾನ ಮಂತ್ರಿ ಜನ ಧನ ಯೋಜನೆ.
4. ಪ್ರಧಾನ ಮಂತ್ರಿ ಜೀವನ ಜ್ಯೋತಿ ಯೋಜನೆ.
5. ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ.
6. ಅಟಲ್ ಪೆನ್ಶನ್ ಯೋಜನೆ.

ನಗರ ಅಭಿವೃದ್ಧಿ–
1. ನಗರ ಪುನರುತ್ಥಾನ ಮತ್ತು ಪರಿವರ್ತನೆಯ ಅಟಲ್ ಅಭಿಯಾನ.
2. ಪ್ರಧಾನ ಮಂತ್ರಿ ಆವಾಸ್ ಯೋಜನೆ.
3. ಸ್ಮಾರ್ಟ್ ಸಿಟಿ ಅಭಿಯಾನ.

**9. ಎಲ್‌ಪಿಜಿ ನೀತಿಗಳು ಎಂದರೇನು?**

ಭಾರತದಲ್ಲಿ 1991ರಲ್ಲಿ ಹೊಸ ಆರ್ಥಿಕ ನೀತಿಯು ಜಾರಿಗೆ ಬಂದಿತು. ಈ ಹೊಸ ಆರ್ಥಿಕ ನೀತಿಗಳನ್ನು 'ಆರ್ಥಿಕ ಸುಧಾರಣೆಗಳು' ಎಂದೂ ಕರೆಯಲಾಗುತ್ತದೆ.

ಈ ನೀತಿಗಳು ಉದಾರೀಕರಣ (Liberalization), ಖಾಸಗೀಕರಣ (Privatization) ಮತ್ತು ಜಾಗತೀಕರಣಗಳ (Globalization) ಮೇಲೆ ಹೆಚ್ಚು ಒತ್ತನ್ನು ನೀಡಿದ್ದರಿಂದ ಅವುಗಳನ್ನು ಸಂಕ್ಷಿಪ್ತದಲ್ಲಿ ಎಲ್‌ಪಿಜಿ ನೀತಿಗಳು ಎಂದೂ ಕರೆಯುತ್ತಾರೆ.

**10. 1991ರ ಹೊಸ ಆರ್ಥಿಕ ನೀತಿಯ ಮುಖ್ಯಾಂಶಗಳು ಯಾವುವು?**

1. ವಿದೇಶಿ ಹೂಡಿಕೆಗೆ ಅನುಕೂಲವಾಗುವಂಥ ಲೈಸೆನ್ಸಿಂಗ್ ಪದ್ಧತಿಯನ್ನು ನಿವಾರಿಸುವ ಮತ್ತು ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವ ಉದಾರ ಔದ್ಯಮಿಕ ನೀತಿ.
2. ಹಲವು ಉದ್ದಿಮೆಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಮುಕ್ತ ಅನುಮೋದನೆ.
3. ಭಾರತದ ರಫ್ತುಗಳನ್ನು ಸುಲಭವಾಗಿ ಕಳಿಸುವ ಹಾಗೂ ಅವಶ್ಯವಿರುವ ಕಚ್ಚಾ ಸರಕುಗಳನ್ನು ಸುಲಭವಾಗಿ ಆಮದು ಮಾಡಿಕೊಳ್ಳಬಹುದಾದ ಉದಾರ ಆಮದು–ರಫ್ತು ನೀತಿ.
4. ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ವೀಕೃತವಾದ ಮಾನದಂಡಗಳನುಸಾರ ಬ್ಯಾಂಕು ಮತ್ತು ಹಣಕಾಸು ವಲಯದ ಒಟ್ಟಾರೆ ಪುನಾರಚನೆ.
5. ತೆರಿಗೆ ಜಾಲವನ್ನು ವಿಸ್ತರಿಸುವ ಮತ್ತು ತೆರಿಗೆ ಆದಾಯ ಹೆಚ್ಚಿಗೆ ಬರುವಂಥ ತೆರಿಗೆ ಸುಧಾರಣೆಗಳು.
6. ಹೂಡಿಕೆಯ ಮೇಲಿರುವ ಸರ್ಕಾರದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದು.

# ವ್ಯವಹಾರ ಅಧ್ಯಯನ

## ಅಧ್ಯಾಯ –2

## ವ್ಯವಹಾರ ಮತ್ತು ಕೈಗಾರಿಕೆ

**I. ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಪುನರ್ ರಫ್ತು ವ್ಯಾಪಾರಕ್ಕೆ ———— ಪಟ್ಟಣವು ಒಂದು ಮುಖ್ಯ ನಿದರ್ಶನವಾಗಿದೆ.
2. ಗೃಹ ಕೈಗಾರಿಕೆಗಳು ಸಾಮಾನ್ಯವಾಗಿ ———— ಗಳಲ್ಲಿ ಕೇಂದ್ರಿಕೃತವಾಗಿರುತ್ತವೆ.
3. ರಾಸಾಯನಿಕ ವಸ್ತುಗಳ ತಯಾರಿಕೆ ಸಾಮಾನ್ಯವಾಗಿ ——— ಕೈಗಾರಿಕೆಗಳಲ್ಲಿ ಆಗುತ್ತದೆ.
4. ವ್ಯಾಪಾರದ ಮುಖ್ಯ ಉದ್ದೇಶ ———— ಲಾಭಗಳಿಸುವುದಾಗಿರಬೇಕು.
5. ಪದಾರ್ಥಗಳ ಗುಣಮಟ್ಟ ಕಾಪಾಡಲು ———— ಸಂಸ್ಥೆಯನ್ನು ಸ್ಥಾಪಿಸಲಾಗಿದೆ.
6. ವ್ಯವಹಾರವು ಹೊಸ ಉತ್ಪಾದನೆಗಳ ಬಗ್ಗೆ ಗ್ರಾಹಕರಿಗೆ ———— ನ ಮೂಲಕ ತಿಳಿಸುತ್ತದೆ.
7. ಪದಾರ್ಥಗಳ ಗುಣಮಟ್ಟ ಕಾಪಾಡಲು ———— ಯನ್ನು ಸ್ಥಾಪಿಸಿದೆ.
8. ವ್ಯವಸಾಯ ಉತ್ಪನ್ನ ವಸ್ತುಗಳ ಮೇಲೆ ಗುಣಮಟ್ಟ ತಿಳಿಯಲು ——— ಚಿಹ್ನೆ ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

**ಉತ್ತರಗಳು:– 1) ಸಿಂಗಪೂರ 2) ಗ್ರಾಮ 3) ಸಣ್ಣ ಪ್ರಮಾಣದ ಕೈಗಾರಿಕೆಗಳು 4) ಸಮಂಜಸವಾದ ಮತ್ತು ನ್ಯಾಯಯುಕ್ತ 5) ಭಾರತೀಯ ಮಾನಕ ಸಂಸ್ಥೆ 6) ಜಾಹೀರಾತಿನ 7) ಭಾರತೀಯ ಮಾನಕ ಸಂಸ್ಥೆ (Bureau of Indian Standarads) 8) ಅಗ್‌ಮಾರ್ಕ್.**

**II. ಈ ಕೆಳಗಿನ ಪ್ರಶ್ನೆಗಳಿಗೆ 2–4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1. ವ್ಯಾಪಾರ ಎಂದರೇನು?**

ವ್ಯಾಪಾರವು ವಾಣಿಜ್ಯದ ಒಂದು ಭಾಗವಾಗಿದ್ದು ಸರಕುಗಳನ್ನು ಕೊಳ್ಳುವುದು ಮತ್ತು ಗ್ರಾಹಕರಿಗೆ ಮಾರುವುದನ್ನು ವ್ಯಾಪಾರವೆನ್ನುತ್ತೇವೆ.

**2. ಸಂಚಾರಿ ಅಂಗಡಿಗಳ ವಿವಿಧ ವಿಧಗಳಾವುವು?**

ಸಂಚಾರಿ ಅಂಗಡಿಗಳಲ್ಲಿ ಮುಖ್ಯವಾದವೆಂದರೆ. ತಲೆಹೊರೆ ವ್ಯಾಪಾರಿಗಳು, ತಳ್ಳುಗಾಡಿ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು (ಮಾರುಕಟ್ಟೆ ವ್ಯಾಪಾರಿಗಳು) ಮತ್ತು ಸಂತೆ ವ್ಯಾಪಾರಿಗಳು.

**3. ಸಗಟು ವ್ಯಾಪಾರಿಗಳೆಂದರೆ ಯಾರು?**

ಸರಕುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಕರಿಂದ ಕೊಂಡು, ಸಣ್ಣ ಪ್ರಮಾಣದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುವವರನ್ನು ಸಗಟು ವ್ಯಾಪಾರಿಗಳು ಎನ್ನುವರು. ಸಗಟು ವ್ಯಾಪಾರಿಗಳು ಯಾವುದಾದರು ಒಂದು ಅಥವಾ ಎರಡು ಬಗೆಯ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

**4. ವಿದೇಶ ವ್ಯಾಪಾರದ ಮೂರು ವಿಧಗಳನ್ನು ತಿಳಿಸಿ.**

ವಿದೇಶಿ ವ್ಯಾಪಾರವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಅವು ಯಾವುವೆಂದರೆ, 1) ಆಮದು 2) ರಫ್ತು ಮತ್ತು 3) ಪುನರ್ ರಫ್ತು.

**5 ಗೃಹ ಕೈಗಾರಿಕೆಗಳು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳನ್ನು ತಿಳಿಸಿ.**

ಗೃಹ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳೆಂದರೆ ಬಿದಿರಿನ ಬುಟ್ಟಿಗಳು, ಮರಮುಟ್ಟುಗಳು, ಚಾಪೆಗಳು, ಕಲ್ಲಿನ ಕೆತ್ತನೆಗಳು, ಕಮ್ಮಾರಿಕೆ, ಮಡಿಕೆಗಳನ್ನು ಮಾಡುವುದು ಮುಂತಾದವು.

ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಉತ್ಪಾದನೆಯಾಗುವ ಕೆಲವು ವಸ್ತುಗಳೆಂದರೆ ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಬೈಸಿಕಲ್ಲುಗಳು, ರೇಡಿಯೋ, ಹೊಲಿಗೆಯಂತ್ರಗಳು ಮುಂತಾದವು.

**6. ಸ್ಥಳದ ಅಭಾವ ಮತ್ತು ನಷ್ಟ ಭಯ ನಿವಾರಿಸಲು ಸ್ಥಾಪಿತವಾಗಿರುವ ಸೇವೆಗಳಾವುವು?**

ಸ್ಥಳದ ಅಡಚಣೆಯನ್ನು ನಿವಾರಿಸಲು ಸಾಗಾಟದ ವ್ಯವಸ್ಥೆಯ ಸಾರಿಗೆ ಸೇವೆಗಳನ್ನು ಬಳಸಲಾಗುತ್ತದೆ. ರಸ್ತೆಸಾರಿಗೆ, ರೈಲುಸಾರಿಗೆ, ಜಲಸಾರಿಗೆ ಮತ್ತು ವಾಯುಸಾರಿಗೆ ಸಾಗಾಟದ ಬೇರೆ ಬೇರೆ ಮಾಧ್ಯಮಗಳಾಗಿವೆ.

ನಷ್ಟ ಭಯ, ತೊಡಕುಗಳನ್ನು ನಿವಾರಿಸಲು ವಿಮಾ ಸೌಲಭ್ಯಗಳಿವೆ. ಇವುಗಳಲ್ಲಿ ಮುಖ್ಯವಾದುವು. ಅಗ್ನಿವಿಮೆ ಮತ್ತು ಜಲವಿಮೆ.

**7. ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಕೆಲವು ಅಹಿತಕರ ಪದ್ಧತಿಗಳನ್ನು ಅನುಸರಿಸುತ್ತಾರೆ. ಇವು ಯಾವುವು?**

ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಅನುಸರಿಸುವ ಅಹಿತಕರ ಪದ್ಧತಿಗಳೆಂದರೇ–

- ವಸ್ತುಗಳ ಕಲಬೆರಿಕೆ ಮಾಡುವುದು.
- ಹೆಚ್ಚು ಲಾಭದ ಆಸೆ.
- ತೂಕ ಮತ್ತು ಅಳತೆಗಳಲ್ಲಿ ಮೋಸ,
- ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿ ಏರ್ಪಡಿಸುವುದು,
- ಕಾಳಸಂತೆಯಲ್ಲಿ ವಸ್ತುಗಳನ್ನು ಮಾರುವುದು ಮುಂತಾದುವು.

**8. ಲಾಭದ ಆಸೆಯಿಂದ ಕೆಲವು ವ್ಯಾಪಾರಗಾರರು ಅಹಿತಕರ ಪದ್ಧತಿಗಳನ್ನು ಅನುಸರಿಸುತ್ತಾರೆ. ಇವುಗಳನ್ನು ತಪ್ಪಿಸಲು ಕೈಗೊಂಡಿರುವ ಕ್ರಮಗಳಾವುವು?**

- ಭಾರತದಲ್ಲಿ ಈ ಅನಿಷ್ಟ ಪದ್ಧತಿಗಳನ್ನು ದೂರ ಮಾಡಲು ಸರ್ಕಾರ ಸಾರ್ವಜನಿಕ ವಿತರಣಾ ಪದ್ಧತಿಯನ್ನು ರೂಢಿಗೆ ತಂದಿದೆ.
- ಕೈಗಾರಿಕಾ ವಸ್ತುಗಳ ಮೇಲಿನ ಕಾನೂನಿನ ಪ್ರಕಾರ ಪ್ರತಿ ಉತ್ಪಾದನಾ ವಸ್ತುಗಳ ಪೊಟ್ಟಣಗಳ ಮೇಲೆ ಉತ್ಪಾದನಾ ತಾರೀಖು ಬಳಕೆಯ ದಿನ ಮಿತಿ (Date of Expiry) ತೂಕ ಅಥವಾ ಅಳತೆ ಮತ್ತು ಗರಿಷ್ಠ ಬೆಲೆಯನ್ನು ಮುದ್ರಿಸಬೇಕು.
- ಪದಾರ್ಥಗಳ ಗುಣಮಟ್ಟ ಕಾಪಾಡಲು ಭಾರತೀಯ ಮಾನಕ ಸಂಸ್ಥೆ (Bureau of Indian Standarads) ಯನ್ನು ಸ್ಥಾಪಿಸಿದೆ. ಈ ಸಂಸ್ಥೆ ಪದಾರ್ಥಗಳ ಗುಣಮಟ್ಟ ಪರೀಕ್ಷಿಸಿ ಗುಣಮಟ್ಟ ಸರಿಯಾಗಿರುವ ವಸ್ತುಗಳ ಮೇಲೆ (ISI) ಚಿಹ್ನೆ ಮುದ್ರಿಸುತ್ತವೆ.
- ವ್ಯವಸಾಯ ಉತ್ಪನ್ನ ವಸ್ತುಗಳ ಮೇಲೆ ಗುಣಮಟ್ಟ ತಿಳಿಯಲು ಅಗ್‌ಮಾರ್ಕ್ ಚಿಹ್ನೆ ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.
- ಸರ್ಕಾರ ಅಗತ್ಯ ವಸ್ತುಗಳನ್ನು ಒದಗಿಸಲು ಗ್ರಾಹಕರ ಸಹಕಾರಿ ಸಂಘಗಳನ್ನು, ಜನತಾ ಬಜಾರುಗಳನ್ನು ಸ್ಥಾಪಿಸಿದೆ.

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1. ವ್ಯವಹಾರದ ಆರ್ಥಿಕ ಉದ್ದೇಶಗಳೇನು?**

- ವ್ಯವಹಾರದ ಉದ್ದೇಶ ಒಂದು ನ್ಯಾಯಯುಕ್ತ ಲಾಭಗಳಿಕೆಯಾಗಿದ್ದು ಇದು ವ್ಯವಹಾರವು ಸಮರ್ಪಕವಾಗಿ ನಡೆಯಲು ಸಾಕಾಗುವ ವೆಚ್ಚವನ್ನು ಭರಿಸಿ ವ್ಯವಹಾರಸ್ಥನು ಸುಖಮಯ ಜೀವನ ಸಾಗಿಸುವಷ್ಟಿರಬೇಕು.
- ವ್ಯವಹಾರವು ವಸ್ತುಗಳನ್ನು ಮತ್ತು ಸೇವೆಗಳನ್ನು ಗ್ರಾಹಕರಿಗೆ ಪೂರೈಸುತ್ತದೆ ಮತ್ತು ಗ್ರಾಹಕರನ್ನು ಸೃಷ್ಟಿಸುತ್ತದೆ
- ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸುತ್ತದೆ.
- ಗ್ರಾಹಕರಿಗೆ ಕಾಲಕಾಲಕ್ಕೆ ಬೇಕಾದ ಹೊಸ ಹೊಸ ಬದಲಾವಣೆಗಳಿಗನುಸಾರವಾಗಿ ವಸ್ತುಗಳನ್ನು ಉತ್ಪಾದಿಸಿ ಪೂರೈಸುತ್ತದೆ.
- ಹೊಸ ಹೊಸ ಸಂಶೋಧನೆಗಳ ಮೂಲಕ ಉತ್ಪಾದನೆಯಲ್ಲಿ ಬದಲಾವಣೆಗಳನ್ನು ತರುತ್ತದೆ.
- ಹೊಸ ಉತ್ಪಾದನೆಗಳ ಬಗ್ಗೆ ಗ್ರಾಹಕರಿಗೆ ಜಾಹೀರಾತಿನ ಮೂಲಕ ತಿಳಿಸುತ್ತದೆ.

**2. ವ್ಯವಹಾರದ ಸಾಮಾಜಿಕ ಉದ್ದೇಶಗಳೇನು?**

- ವ್ಯವಹಾರವು ದೇಶದ ಪ್ರಗತಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುತ್ತದೆ ಮತ್ತು ಒದಗಿಸುತ್ತದೆ.
- ಅನೇಕ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿ ಅವರಿಗೆ ಸಂಬಳ ಅಥವಾ ಮಜೂರಿಗಳ ಮೂಲಕ ವರಮಾನ ಕೊಟ್ಟು ಅವರ ಜೀವನ ಮಟ್ಟ ಸುಧಾರಿಸಲು ಸಹಾಯ ಮಾಡುತ್ತದೆ.

- ಕರ ಮತ್ತು ತೆರಿಗೆಗಳನ್ನು ಪಾವತಿ ಮಾಡುವುದರ ಮೂಲಕ ಸರ್ಕಾರದ ಆದಾಯ ಹೆಚ್ಚಿಸಿ ರಾಷ್ಟ್ರದ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.
- ಶಾಲಾ ಕಾಲೇಜುಗಳನ್ನು, ಆಸ್ಪತ್ರೆಗಳನ್ನು, ಸಮುದಾಯ ಭವನಗಳನ್ನು ಪ್ರಾರಂಭಿಸಿ ಅವುಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ.
- ಉದ್ಯಾನವನ, ಕ್ರೀಡಾಂಗಣಗಳ ನಿರ್ವಹಣೆ ಮುಂತಾದವುಗಳ ಮೂಲಕ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುತ್ತದೆ.

**3. ಚಿಲ್ಲರೆ ವ್ಯಾಪಾರಿಗಳಿಂದಾಗುವ ಸೇವೆಗಳನ್ನು ತಿಳಿಸಿ.**

- ಚಿಲ್ಲರೆ ವ್ಯಾಪಾರಿಗಳು ವಸ್ತುಗಳ ವಿತರಣೆಯ ಕೊನೆಯ ಕೊಂಡಿಯಾಗಿದ್ದಾರೆ.
- ಬೇರೆ ಬೇರೆ ಉತ್ಪಾದಕರಿಂದ ಉತ್ಪಾದನೆಯಾಗುವ ವಸ್ತುಗಳನ್ನು ಸಗಟು ವ್ಯಾಪಾರಿಗಳಿಂದ ಕೊಂಡು ಗ್ರಾಹಕರಿಗೆ ಒದಗಿಸುತ್ತಾರೆ.
- ಅನೇಕ ಸಾರಿ ಉಂಟಾಗುವ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ,
- ವಸ್ತುಗಳನ್ನು ಅವುಗಳ ಪ್ರಮಾಣಕ್ಕನುಗುಣವಾಗಿ ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ,
- ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ.
- ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ.
- ಯಾವುದೇ ಒಂದು ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ.
- ಇವರು ಸಾಮಾನ್ಯವಾಗಿ ಗ್ರಾಹಕರು ನೆಲೆಸಿರುವ ಜಾಗಗಳಲ್ಲಿ ತಮ್ಮ ವ್ಯಾಪಾರ ನಡೆಸುತ್ತಾರೆ.
- ಸಂಚಾರಿ ಅಂಗಡಿಗಳಾದ ತಲೆಹೊರೆ ವ್ಯಾಪಾರಿಗಳು, ತಳ್ಳುಗಾಡಿ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು (ಮಾರುಕಟ್ಟೆ ವ್ಯಾಪಾರಿಗಳು) ಮತ್ತು ಸಂತೆ ವ್ಯಾಪಾರಿಗಳು ನಮಗೆ ಸೇವೆ ಸಲ್ಲಿಸುತ್ತಾರೆ.

**4. ವಿವಿಧ ರೀತಿಯ ಚಿಲ್ಲರೆ ವ್ಯಾಪಾರಿಗಳನ್ನು ಪಟ್ಟಿ ಮಾಡಿ ಪ್ರತಿಯೊಂದಕ್ಕೂ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

ಚಿಲ್ಲರೆ ವ್ಯಾಪಾರವು ಬೇರೆ ಬೇರೆ ರೀತಿಗಳಲ್ಲಿ ನಡೆಯುತ್ತದೆ. ಅವುಗಳಲ್ಲಿ ಮುಖ್ಯವಾದವು ಯಾವುವೆಂದರೆ, ಖಾಯಂ ಅಂಗಡಿಗಳು ಮತ್ತು ಸಂಚಾರಿ ವ್ಯಾಪಾರಿಗಳು.

**ಖಾಯಂ ಅಂಗಡಿಗಳು** : ಇವರು ಒಂದು ನಿರ್ದಿಷ್ಟ ಜಾಗದಲ್ಲಿ ಅಂಗಡಿಗಳನ್ನು ತೆರೆದು ವಸ್ತುಗಳನ್ನು ಮಾರುತ್ತಾರೆ.

**ಸಂಚಾರಿ ವ್ಯಾಪಾರಿಗಳು** : ಇವರು ಒಂದು ನಿರ್ದಿಷ್ಟ ಜಾಗದಲ್ಲಿ ವ್ಯಾಪಾರ ಮಾಡುವುದಿಲ್ಲ. ಇವರಲ್ಲಿ

**ತಲೆಹೊರೆ ವ್ಯಾಪಾರಿಗಳು** : ಇವರು ಸರಕುಗಳನ್ನು ತಲೆಯ ಮೇಲೆ ಹೊತ್ತು ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ.

**ತಳ್ಳುಗಾಡಿ ವ್ಯಾಪಾರಿಗಳು** : ಇವರು ಅನೇಕ ಸರಕುಗಳನ್ನು ತಳ್ಳು ಗಾಡಿಗಳಲ್ಲಿ ತುಂಬಿ ಬೀದಿ ಬೀದಿಗಳಲ್ಲಿ ಸುತ್ತಿ ಮನೆ ಬಾಗಿಲುಗಳಿಗೆ ಬಂದು ಸರಕುಗಳನ್ನು ಮಾರುತ್ತಾರೆ.

**ರಸ್ತೆ ಬದಿ ವ್ಯಾಪಾರಿಗಳು** : ಇವರು ಹೆಚ್ಚು ಜನಜಂಗುಳಿ ಇರುವ ಬೀದಿಗಳ ಮೂಲೆಗಳಲ್ಲಿ ಅಥವಾ ರಸ್ತೆ ಬದಿಗಳಲ್ಲಿ ತಮ್ಮ ಸರಕುಗಳನ್ನು ಹರಡಿಕೊಂಡು ವ್ಯಾಪಾರ ಮಾಡುತ್ತಾರೆ.

**ಸಂತೆ ವ್ಯಾಪಾರಿಗಳು** : ಕೆಲವು ಊರುಗಳಲ್ಲಿ ವಾರಕ್ಕೊಮ್ಮೆ ಸಂತೆ ನಡೆಯುತ್ತದೆ. ವಿವಿಧ ವಸ್ತುಗಳ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಸಂತೆಗಳಿಗೆ ಕೊಂಡೊಯ್ದು ಅಲ್ಲಿಗೆ ಬರುವ ಸುತ್ತ ಮುತ್ತಲಿನ ಗ್ರಾಮಗಳ ಜನರಿಗೆ ವಸ್ತುಗಳನ್ನು ಮಾರುತ್ತಾರೆ.

**5. ಉದ್ಯಮಗಳು ಅಥವಾ ಕೈಗಾರಿಕೆಗಳ ಎರಡು ವಿಧಗಳನ್ನು ಸ್ಥೂಲವಾಗಿ ಪರಿಚಯಿಸಿ.**

ಕೈಗಾರಿಕೆಗಳನ್ನು ಪ್ರಾಥಮಿಕ ಉದ್ಯಮಗಳು ಮತ್ತು ದ್ವಿತೀಯ ಉದ್ಯಮಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು.

**ಪ್ರಾಥಮಿಕ ಉದ್ಯಮಗಳು:** ಈ ಉದ್ಯಮಗಳು ನಿಸರ್ಗದ ನೆರವಿನಿಂದ ವಸ್ತುಗಳನ್ನು ಉತ್ಪಾದಿಸುತ್ತವೆ. ಈ ಉದ್ಯಮಗಳನ್ನು ತಳಿವೈಜ್ಞಾನಿಕ ಮತ್ತು ಕಚ್ಚಾವಸ್ತುಗಳನ್ನು ಹೊರತೆಗೆಯುವ ಗಣಿ ಉದ್ಯಮಗಳೆಂದು ವಿಭಾಗಿಸಬಹುದು.

**ದ್ವಿತೀಯ ಉದ್ಯಮಗಳು:** ಈ ಉದ್ಯಮಗಳು ಶ್ರಮ ಪ್ರಧಾನವಾಗಿದ್ದು ಮಾನವನ ಪಾತ್ರ ಮುಖ್ಯವಾಗಿರುತ್ತದೆ. ಈ ಉದ್ಯಮಗಳನ್ನು ಉತ್ಪಾದನಾ ಉದ್ಯಮಗಳು ಮತ್ತು ನಿರ್ವಹಣ ಉದ್ಯಮಗಳೆಂದು ವಿಭಾಗಿಸಬಹುದು.

**6. ಒಂದು ದೇಶಕ್ಕೆ ವಿದೇಶಿ ವ್ಯಾಪಾರದ ಅವಶ್ಯಕತೆಯನ್ನು ಕುರಿತು ವಿವರಿಸಿ.**

- ಪ್ರಪಂಚದ ಯಾವುದೇ ದೇಶವಾಗಲಿ ಎಲ್ಲ ಸಂಪನ್ಮೂಲಗಳಲ್ಲೂ ಸ್ವಯಂಪೂರ್ಣತೆ ಹೊಂದಿಲ್ಲ.
- ಕೆಲವು ದೇಶಗಳಲ್ಲಿ ಕೆಲವು ಸಂಪನ್ಮೂಲಗಳು ಹೇರಳವಾಗಿ ದೊರೆಯುತ್ತವೆ. ಆ ಸಂಪನ್ಮೂಲಗಳನ್ನು
- ಉಪಯೋಗಿಸಿಕೊಂಡು ಕೆಲವೇ ವಸ್ತುಗಳನ್ನು ಅಧಿಕವಾಗಿ ಉತ್ಪಾದನೆ ಮಾಡುತ್ತಾರೆ.
- ದೇಶದ ಬೇಡಿಕೆಯು ಮುಗಿದ ಬಳಿಕ ಉಳಿದ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಾರೆ.
- ಹಾಗೆಯೇ ಯಾವ ದೇಶಗಳಲ್ಲಿ ಸಂಪನ್ಮೂಲಗಳ ಅಭಾವವಿದೆಯೋ ಆ ದೇಶಗಳು ತಮಗೆ ಅಭಾವವಿರುವ ವಸ್ತುಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಾರೆ.
- ಇದರಿಂದಾಗಿ ಪ್ರತಿದೇಶಕ್ಕೂ ವಿದೇಶ ವ್ಯಾಪಾರದ ಅವಶ್ಯಕತೆ ಇದೆ.
- ವಿದೇಶ ವ್ಯಾಪಾರವು ದೇಶಗಳ ಪರಸ್ಪರ ಸೌಹಾರ್ದಯುತ ಸಂಬಂಧಕ್ಕೆ ಸಹಾಯ ಮಾಡುತ್ತದೆ.

## ಅಧ್ಯಾಯ –3

# ವಿವಿಧ ವ್ಯವಹಾರ ಸಂಘಟನೆಗಳು

**I. ಬಿಟ್ಟಿರುವ ಜಾಗಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

1. ಒಬ್ಬನೇ ವ್ಯಕ್ತಿಯಿಂದ ನಡೆಸಲ್ಪಡುವ ವ್ಯಾಪಾರಿ ಸಂಸ್ಥೆಯನ್ನು ____________ ಎಂದು ಕರೆಯುತ್ತಾರೆ.
2. ಪಾಲುಗಾರಿಕೆ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಲು _____ ರಲ್ಲಿ ಪಾಲುಗಾರಿಕಾ ಸಂಸ್ಥೆಯ ಕಾನೂನು ಜಾರಿಗೆ ಬಂದಿತು.

3. ಹಣಕಾಸಿನ ವ್ಯವಹಾರ ಮಾಡುವ ಪಾಲುಗಾರಿಕಾ ಸಂಸ್ಥೆಯಲ್ಲಿ ಗರಿಷ್ಠ ——— ಪಾಲುಗಾರರಿಗೆ ಸೀಮಿತವಾಗಿರುತ್ತದೆ.
4. ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುವವನನ್ನು_____ಎಂದು ಕರೆಯುತ್ತಾರೆ.
5. ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿರುವ ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆ ಎಂದರೆ ——— ಆಗಿದೆ.
6. ___________ ಮಾಲೀಕರು ವ್ಯವಹಾರಗಳಲ್ಲಿ ಉಂಟಾಗುವ ಎಲ್ಲ ನಷ್ಟಗಳಿಗೂ ಹೊಣೆಗಾರರಾಗಿರುತ್ತಾರೆ.

**ಉತ್ತರಗಳು:– 1) ಏಕ ಮಾಲೀಕತ್ವದ ಸಂಸ್ಥೆಗಳು 2) 1932 3) ಹತ್ತು/10 4) 'ಕರ್ತ' 5) ಹಿಂದು ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳು 6) ಏಕ ಮಾಲೀಕತ್ವದ ಸಂಸ್ಥೆಗಳ.**

**II. ಪ್ರತಿಯೊಂದಕ್ಕೂ ಒಂದೆರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**1. ವಿವಿಧ ರೀತಿಯ ವ್ಯವಹಾರ ಸಂಘಟನೆಗಳಲ್ಲಿ ಮುಖ್ಯವಾದುವು ಯಾವುವು?**

1. ಏಕ ಮಾಲೀಕತ್ವದ ಸಂಸ್ಥೆಗಳು.
2. ಪಾಲುದಾರಿಕೆ ಸಂಸ್ಥೆಗಳು
3. ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆಗಳು
4. ಸಹಕಾರ ಸಂಘಗಳು
5. ಕೂಡು ಬಂಡವಾಳ ಸಂಸ್ಥೆಗಳು

**2. ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳು ಗ್ರಾಹಕರಿಗೆ ಹೇಗೆ ಸಹಾಯ ಮಾಡುತ್ತವೆ?**

- ಸಣ್ಣ ಪ್ರಮಾಣದ ವ್ಯವಹಾರ ಸಂಸ್ಥೆಗಳು ಗ್ರಾಹಕರಿಗೆ ಬೇಕಾದ ದೈನಂದಿನ ಇಷ್ಟಗಳನ್ನು ಅರಿವನ್ನು ಮೂಡಿಸುತ್ತದೆ.
- ವಸ್ತುಗಳನ್ನು ಸರಬರಾಜು ಮಾಡುವ ಮೂಲಕ ಗ್ರಾಹಕರಿಗೆ ಸಹಾಯ ಮಾಡುತ್ತವೆ.

**3. ಪಾಲುಗಾರಿಕೆ ಸಂಸ್ಥೆಯೆಂದರೇನು?**

ಗರಿಷ್ಟ ಹತ್ತು ಜನ ಪಾಲುಗಾರರು ಮಾಡುವ ಹಣಕಾಸಿನ ವ್ಯವಹಾರ ಹಾಗೂ ಗರಿಷ್ಠ ಇಪ್ಪತ್ತು ಜನ ಪಾಲುಗಾರರು ಸಾಮಾನ್ಯ ಪಾಲುಗಾರಿಕೆ ವ್ಯವಹಾರ ಮಾಡುವ ಸಂಸ್ಥೆಗಳನ್ನು ಪಾಲುದಾರಿಕೆ ಸಂಸ್ಥೆಗಳೆಂದೂ ಕರೆಯುತ್ತಾರೆ.

**4. ತಟಸ್ಥ ಪಾಲುಗಾರರೆಂದರೆ ಯಾರು? ತಿಳಿಸಿ.**

ಕೆಲವರು ವ್ಯವಹಾರಗಳಲ್ಲಿ ಬಂಡವಾಳನ್ನು ಹೂಡಿ, ದಿನವಹಿ ವಹಿವಾಟುಗಳಲ್ಲಿ ಸಕ್ರಿಯವಾಗಿ ಭಾಗವಹಿಸದೇ, ಅನುಪಾತಕ್ಕನುಗುಣವಾಗಿ ಲಾಭಗಳನ್ನು ಹಂಚಿಕೊಳ್ಳುತ್ತಾರೆ ಹಾಗೆಯೆ ನಷ್ಟ ಅಥವಾ ಜವಾಬ್ದಾರಿಗಳಿಗೂ ಕೂಡ ಹೊಣೆಯಾಗಿರುತ್ತಾರೆ. ಇವರನ್ನು ತಟಸ್ಥ ಪಾಲುಗಾರರು ಎನ್ನುತ್ತಾರೆ.

**5. ಪಾಲುಗಾರಿಕೆ ಸಂಸ್ಥೆಯ ವಿಸರ್ಜನೆ ಹೇಗೆ ಸರಳವಾಗಿದೆ ಬರೆಯಿರಿ.**

ಯಾವುದೇ ಪಾಲುಗಾರ ಇತರ ಪಾಲುಗಾರರಿಗೆ 14 ದಿನಗಳ ಮುನ್ಸೂಚನೆ ಕೊಟ್ಟು ಇತರ ಪಾಲುಗಾರರ ಸಮ್ಮತಿಯ ಮೇಲೆ ಬಹಳ ಸರಳವಾಗಿ ವಿಸರ್ಜಿಸಬಹುದು.

**III. ಈ ಕೆಳಗಿನ ಪ್ರಶ್ನೆಗಳನ್ನು ಸೂಕ್ತ ರೀತಿಯಲ್ಲಿ ಉತ್ತರಿಸಿ.**

**1. ಏಕ ಮಾಲೀಕತ್ವ ಸಂಸ್ಥೆಯ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ತಿಳಿಸಿ.**

1) ಏಕ ಮಾಲೀಕತ್ವ ಸಂಸ್ಥೆಗಳನ್ನು ಪ್ರಾರಂಭಿಸಲು ಯಾವುದೇ ಕಾನೂನಿನ ಕಟ್ಟಲೆಗಳ ಅವಶ್ಯಕತೆ ಬೇಕಾಗಿಲ್ಲ.
2) ಸ್ವಂತ ಬಂಡವಾಳದಿಂದಲೇ ಪ್ರಾರಂಭಿಸಬಹುದು.
3) ಅನುದಿನದ ವಹಿವಾಟುಗಳನ್ನು ನಡೆಸುವುದು ಸುಲಭ.
4) ಸಂಸ್ಥೆ ಗಳಿಸಿದ ಎಲ್ಲ ಲಾಭಗಳನ್ನು ಏಕವ್ಯಕ್ತಿ ಮಾಲೀಕರೆ ಅನುಭವಿಸುತ್ತಾರೆ.
5) ವ್ಯಾಪಾರದ ಮೇಲ್ವಿಚಾರಣೆ ಸ್ವತ: ತಾವೇ ನೋಡಿಕೊಳ್ಳುತ್ತಾರೆ.
6) ಇವರು ಗ್ರಾಹಕರ ಜೊತೆಯಲ್ಲಿ ನೇರ ಸಂಪರ್ಕ ಇಟ್ಟುಕೊಂಡಿರುತ್ತಾರೆ.
7) ಅನೇಕ ಸಾಮಾಜಿಕ ಸೇವೆಗಳನ್ನು ಮಾಡುತ್ತಾರೆ. ಅವುಗಳಲ್ಲಿ ಮುಖ್ಯವಾದುವುವೆಂದರೆ, ಕೆಲವರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಾರೆ.
8) ಸಂಪತ್ತು ಹಾಗೂ ಆರ್ಥಿಕ ಅಧಿಕಾರ ಶಕ್ತಿಗಳನ್ನು ಹಂಚಲು ಸಹಾಯ ಮಾಡುತ್ತಾರೆ.
9) ಗ್ರಾಹಕರಿಗೆ ಬೇಕಾದ ದೈನಂದಿನ ಇಷ್ಟಗಳನ್ನು ಅರಿತು ವಸ್ತುಗಳನ್ನು ಸರಬರಾಜು ಮಾಡುತ್ತಾರೆ.
10) ಸರ್ಕಾರಕ್ಕೆ ಸಕಾಲದಲ್ಲಿ ತೆರಿಗೆಗಳನ್ನು ಪಾವತಿ ಮಾಡುತ್ತಾರೆ.
11) ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ವ್ಯವಹಾರದ ಗುಟ್ಟನ್ನು ಕಾಪಾಡಿಕೊಳ್ಳಬಹುದು.
12) ತನ್ನ ಆಲೋಚನೆಗೆ ಬಂದ ಹೊಸ ಕಲ್ಪನೆಗಳನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಬಹುದು.

**2. ಏಕ ಮಾಲೀಕತ್ವ ಸಂಸ್ಥೆಯ ಯಾವುದಾದರೂ ನಾಲ್ಕು ದೋಷಗಳನ್ನು ತಿಳಿಸಿ.**

1. ಬಂಡವಾಳ ಮಿತಿಯಾಗಿದ್ದು ದೊಡ್ಡದಾಗಿ ಬೆಳೆಸಲು ಕಷ್ಟವಾಗುವುದು,
2. ಆಡಳಿತ ಕೌಶಲ್ಯಗಳು ಸೀಮಿತವಾಗಿರುತ್ತವೆ.
3. ಯಾವಾಗಲೂ ಒಬ್ಬರಿಗಿಂತ ಇಬ್ಬರು ಅಥವಾ ಜಾಸ್ತಿ ವ್ಯಕ್ತಿಗಳು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ.
4. ಎಲ್ಲ ನಷ್ಟ ಅಥವಾ ಹೊಣೆಗಾರಿಕೆಗಳನ್ನು ಒಬ್ಬನೇ ಹೊರಬೇಕಾಗುತ್ತದೆ.
5. ಮಾಲೀಕನ ನಿಧನ ಅಥವಾ ದಿವಾಳಿಯಿಂದಾಗಿ ಸಂಸ್ಥೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಉಂಟಾಗುತ್ತದೆ.

**3. ಪಾಲುಗಾರಿಕೆ ಸಂಸ್ಥೆಗಳು ಹೇಗೆ ಪ್ರಾರಂಭವಾಗುತ್ತವೆ? ಸಂಕ್ಷಿಪ್ತವಾಗಿ ವಿವರಿಸಿ.**

- ಪಾಲುಗಾರಿಕೆ ಸಂಸ್ಥೆಗಳನ್ನು ಪ್ರಾರಂಭಿಸಲು ಹಾಗೂ ನಡೆಸಿಕೊಂಡು ಹೋಗಲು 1932 ರಲ್ಲಿ ಪಾಲುಗಾರಿಕೆ ಸಂಸ್ಥೆಯ ಕಾನೂನು ಜಾರಿಗೆ ಬಂದಿತು.
- ಈ ಕಾಯ್ದೆಯ 4ನೇ ಸೆಕ್ಷನ್ ಪ್ರಕಾರ ಎಲ್ಲರೂ ಕೈಗೊಂಡಿರುವ ಅಥವಾ ಅದರಲ್ಲಿ ಎಲ್ಲರ ಪರವಾಗಿ ಒಬ್ಬ ವ್ಯವಹರಿಸುತ್ತಿರುವ ವ್ಯವಹಾರದ ಲಾಭಗಳನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ವ್ಯಕ್ತಿಗಳ ನಡುವಿನ ಸಂಬಂಧ ಪಾಲುಗಾರಿಕೆಯಾಗಿದೆ.
- ಹಣಕಾಸಿನ ವ್ಯವಹಾರ ಮಾಡುವುದಾದರೆ ಗರಿಷ್ಟ ಹತ್ತು ಜನ ಪಾಲುಗಾರರು ಹಾಗೂ ಸಾಮಾನ್ಯ ಪಾಲುಗಾರಿಕೆ ವ್ಯವಹಾರ

ಮಾಡುವುದಾದರೆ ಗರಿಷ್ಠ ಇಪ್ಪತ್ತು ಜನ ಪಾಲುಗಾರರಿಗೂ ಸೀಮಿತವಾಗಿ ಪ್ರಾರಂಭಿಸಬೇಕಾಗುತ್ತದೆ.

**4. ಪಾಲುಗಾರಿಕೆ ಸಂಸ್ಥೆಗಳ ವಿವಿಧ ರೀತಿಯ ಪಾಲುಗಾರರನ್ನು ತಿಳಿಸಿ.**

ಪಾಲುಗಾರಿಕೆ ಸಂಸ್ಥೆಗಳ ವಿವಿಧ ಪಾಲುಗಾರರು–

- ಕ್ರಿಯಾಶೀಲ ಅಥವ ಸಕ್ರಿಯ ಪಾಲುಗಾರರು
- ತಟಸ್ಥ ಪಾಲುಗಾರರು
- ನಾಮಮಾತ್ರ ಪಾಲುಗಾರರು
- ಅಪ್ರಾಪ್ತವಯಸ್ಕ ಪಾಲುದಾರರು.

ಈ ವಿಧಗಳೇ ಅಲ್ಲದೆ ರಹಸ್ಯಪಾಲುದಾರರು, ಸೀಮಿತಪಾಲುಗಾರರು, ಅರೆಪಾಲುಗಾರರು, ಲಾಭದಲ್ಲಿ ಮಾತ್ರ ಪಾಲುಗಾರರು ಮುಂತಾದವರು ಇರುತ್ತಾರೆ.

**5. ಪಾಲುಗಾರಿಕೆ ಸಂಸ್ಥೆಗಳ ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ತಿಳಿಸಿ.**

**ಪಾಲುಗಾರಿಕೆ ಸಂಸ್ಥೆಯ ಅನುಕೂಲಗಳು–**

1. ಈ ರೀತಿಯ ಸಂಸ್ಥೆಯ ಸುಲಭವಾಗಿ ರಚನೆಯಾಗುತ್ತದೆ.
2. ಹೆಚ್ಚಿನ ಬಂಡವಾಳ ಸಂಗ್ರಹಿಸಬಹುದು.
3. ಪರಿಣತಿ ಹೆಚ್ಚಿಸುತ್ತದೆ.
4. ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ.
5. ನಷ್ಟದ ಹಂಚಿಕೆಯಾಗುತ್ತದೆ.
6. ವ್ಯವಹಾರದ ರಹಸ್ಯ ಪಾಲನೆ ಸಾಧ್ಯವಾಗುತ್ತದೆ.
7. ಈ ಸಂಸ್ಥೆಯನ್ನು ಸುಲಭವಾಗಿ ವಿಸರ್ಜಿಸಬಹುದು.

**6. ಪಾಲುಗಾರಿಕೆ ಸಂಸ್ಥೆಗಳ ಯಾವುದಾದರೂ ನಾಲ್ಕು ದೋಷಗಳನ್ನು ತಿಳಿಸಿ.**

**ಪಾಲುಗಾರಿಕೆ ವ್ಯವಹಾರ ಸಂಸ್ಥೆಯ ದೋಷಗಳು–**

1. ಕೆಲವು ಸಂದರ್ಭಗಳಲ್ಲಿ ಪಾಲುಗಾರರ ನಡುವೆ ಒಮ್ಮತ ಇಲ್ಲದೆ ಹೋದಾಗ ಅವರವರಲ್ಲಿ ತಾರತಮ್ಯಗಳು ಉಂಟಾಗುತ್ತವೆ.
2. ಪಾಲುಗಾರರ ಸಂಖ್ಯೆಯಲ್ಲಿ ಗರಿಷ್ಠ ಮಿತಿ ಇರುವುದರಿಂದ ಹೆಚ್ಚು ಬಂಡವಾಳದ ಹೂಡಿಕೆಗೆ ಸಾಧ್ಯವಾಗದೆ ಹೋಗುತ್ತದೆ.
3. ನಷ್ಟದ ಹೊಣೆಗಾರಿಕೆ ಅಪರಿಮಿತವಾಗಿದ್ದು ಹೆಚ್ಚು ಜನ ಪಾಲುಗಾರರಾಗಲು ಇಷ್ಟಪಡುವುದಿಲ್ಲ.
4. ಕೆಲವು ಪಾಲುಗಾರರ ಅಜಾಗರೂಕತೆ ಅಥವಾ ಅವಿವೇಕತನದ ನಿರ್ಧಾರಗಳು ಸಂಸ್ಥೆಯ ಹಿನ್ನಡೆಗೆ ಕಾರಣವಾಗುತ್ತದೆ.
5. ಪಾಲುದಾರಿಕೆ ಸಂಸ್ಥೆ ಸ್ಥಿರತೆಯ ಅಭಾವ ಹೊಂದಿರುತ್ತದೆ. ಯಾರಾದರೂ ಒಬ್ಬ ಪಾಲುಗಾರ ಮರಣ ಹೊಂದಿದರೆ ಅಥವಾ ದಿವಾಳಿಯಾದರೆ ಸಂಸ್ಥೆಯನ್ನು ವಿಸರ್ಜಿಸಬೇಕಾಗುತ್ತದೆ.
6. ಪಾಲುಗಾರರು ತಮ್ಮ ಪಾಲನ್ನು ಬೇರೆಯವರಿಗೆ ಸುಲಭವಾಗಿ ವರ್ಗಾಯಿಸಲು ಸಾಧ್ಯವಿಲ್ಲ.
7. ಸರ್ಕಾರದ ಹಿಡಿತ ಹೆಚ್ಚಾಗಿಲ್ಲದೆ ಇರುವುದರಿಂದ ಹಾಗೂ ಲೆಕ್ಕಪತ್ರಗಳನ್ನು ಪ್ರಕಟಪಡಿಸಬೇಕಾಗಿಲ್ಲದೆ ಇರುವುದರಿಂದ ಸಾರ್ವಜನಿಕರ ಬೆಂಬಲ ಸಿಗುವುದಿಲ್ಲ.
8. ಎರಡು ಅಥವಾ ಹೆಚ್ಚು ಪಾಲಗಾರರು ಇರುವುದರಿಂದ ವ್ಯವಹಾರ ಗೌಪ್ಯದೆ ನಿರ್ವಹಣೆ ಕಷ್ಟಸಾಧ್ಯ.

**7. ಪಾಲುಗಾರಿಕೆ ಸಂಸ್ಥೆಗಳನ್ನು ನೋಂದಾಯಿಸುವುದರಿಂದಾಗುವ ಅನುಕೂಲತೆಗಳೇನು?**

1. ನೋಂದಣಿ ಹೊಂದಿರುವ ಸಂಸ್ಥೆಯು ಒಂದು ನೂರು ರೂಪಾಯಿಗಳನ್ನು ಮೀರಿದ ಸಾಲದ ವಸೂಲಾತಿಗಾಗಿ ಮೂರನೇ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು.
2. ನೋಂದಣಿಯಾಗಿರುವ ಸಂಸ್ಥೆಗಳು ಸಾಲಗಳ ವಸೂಲಿಗಾಗಿ ಇತರೆ ಪಾಲುಗಾರನ ವಿರುದ್ಧವೂ ದಾವೆ ಹೂಡಬಹುದು.
3. ನೋಂದಣಿಯಾಗದ ಸಂಸ್ಥೆಯ ವಿರುದ್ಧ ಅಥವಾ ಅದರ ಪಾಲುಗಾರರ ವಿರುದ್ಧ ಮೂರನೇ ವ್ಯಕ್ತಿ ದಾವೆ ಹೂಡಬಹುದು.
4. ನೋಂದಣಿಯಾಗದ ಸಂಸ್ಥೆ ಅಥವಾ ಅದರ ಪಾಲುಗಾರರ ವಿರುದ್ಧ ಯಾವುದೇ ಪಾಲುಗಾರನಾಗಲಿ ಸಂಸ್ಥೆಯ ವಿಸರ್ಜನೆಗೆ ಅಥವಾ ಲೆಕ್ಕಪತ್ರಗಳ ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಹೂಡಬಹುದು

**8. ಹಿಂದೂ ಅವಿಭಕ್ತ ಕುಟುಂಬ ಪದ್ಧತಿಯ ವ್ಯವಹಾರ ಸಂಸ್ಥೆಯ ಬಗ್ಗೆ ಬರೆಯಿರಿ.**

ಹಿಂದೂ ಅವಿಭಕ್ತ ಕುಟುಂಬ ಪದ್ಧತಿಯ ವ್ಯವಹಾರ ಸಂಸ್ಥೆಗಳು ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿವೆ. ಇವು ಹಿಂದೂ ಕಾನೂನಿನ ಅನ್ವಯ ಜಾರಿಗೆ ಬರುತ್ತವೆ. ಇವು ಹಿಂದೂ ಕುಟುಂಬದ ಎಲ್ಲ ಗಂಡಸರಿಂದ ಕೂಡಿದ ಸಂಸ್ಥೆಗಳಾಗಿರುತ್ತವೆ. ನಿರಂತರವಾಗಿ ಮೂರು ತಲೆಮಾರುಗಳ ಗಂಡು ಸದಸ್ಯರು ಈ ವ್ಯವಹಾರ ಸಂಸ್ಥೆಗಳ ಸದಸ್ಯರಾಗುತ್ತಾರೆ. ಅವಿಭಕ್ತ ಕುಟುಂಬದ ಅತ್ಯಂತ ಹಿರಿಯ ಗಂಡು ಸದಸ್ಯ ವ್ಯವಹಾರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾನೆ. ಅವನನ್ನು 'ಕರ್ತ' ಎಂದು ಕರೆಯುತ್ತಾರೆ. ಮಾಲೀಕತ್ವವು ಎಲ್ಲ ಸದಸ್ಯರದಾಗಿದ್ದರೂ ಆಡಳಿತವನ್ನು ಕರ್ತನು ನಿರ್ವಹಿಸುತ್ತಾನೆ. ಕರ್ತನ ಹೊಣೆಗಾರಿಕೆ ಅಪರಿಮಿತವಾಗಿರುತ್ತದೆ. ಇತರೆ ಸದಸ್ಯರ ಹೊಣೆಗಾರಿಕೆ ಅವರು ಹೂಡಿರುವ ಬಂಡವಾಳದ ಪ್ರಮಾಣಕ್ಕೆ ಸೀಮಿತವಾಗಿರುತ್ತದೆ.